ದುಡಿವ ಜನರ ಪ್ರಾಣ ಮಿತ್ರ


ಐಕ್ಯರಂಗ





ನೇಪಾಳ : ಪ್ರಜಾಪ್ರಭುತ್ವಕ್ಕೆ ಕುತ್ತು






ಬಿಹಾರ, ಹರ್‍ಯಾಣ, ಝಾರ್ಖಂಡ್ ಚುನಾವಣೆ

ಜಾತ್ಯಾತೀತ ಪಕ್ಷಗಳ ಪಾತ್ರ


ಟೆಲಿಕಾಂ : ವಿದೇಶಿ ಬಂಡವಾಳಕ್ಕೆ ವಿರೋಧ

- ಇರಾಕ್ ಚುನಾವಣೆ : ಅಮೆರಿಕಾ ಅಪರಾಧದಿಂದ ಮುಕ್ತವಲ್ಲ
- ಕರಾವಳಿ ಕಲಾ-ವಿಜ್ಞಾನ ಜಾಥಾ
- ಜನತಂತ್ರ ವ್ಯವಸ್ಥೆ ದೃಢತೆಗಾಗಿ ಜನಾಂದೋಲನ ಅವಶ್ಯ

ವಿಚಾರವಾದಿ, ಆದರ್ಶ ಶಿಕ್ಷಕ



ಹೆಚ್‌ಎನ್ ಇನ್ನಿಲ್ಲ



ಭಾರತದ ಇಂದಿನ ಸಂದರ್ಭವನ್ನು ಬಿಡಿಸಿಟ್ಟ ಸೀತಾರಾ ಯೆಚೂರಿ ದೇಶ ಎದುರಿಸುವ ಗಂಭೀರ ಸವಾಲುಗಳ ಬೇರುಗಳು ಸ್ವಾತಂತ್ರ್ಯ ಸಂಗ್ರಾಮದ ಜೊತೆಯಿಂದಲೇ ಯುಪಿಎ ಸರ್ಕಾರಕ್ಕೆ ನಂಟು ಪಡೆದಿರುವುದನ್ನು ಗುರುತಿಸಿದರು. ಎಡಪಕ್ಷಗಳ ಬೆಂಬಲವು ಅತ್ಯಂತ ನಿರ್ಣಾಯಕವಾದರೂ ಎಡಶಕ್ತಿಗಳು ಪ್ರತಿಪಾದಿಸುವ ಕನಿಷ್ಟ ಕಾರ್ಯಕ್ರಮದ ಜಾರಿ ತನ್ನಿಂದತಾನೇ ಆಗಲಾರದು. ಹಾಗಾದರೆ ಮಾಡಬೇಕಾದುದೇನು? ಆ ದಿಶೆಯ ಚಿಂತನೆ ಇಲ್ಲಿ...

ದುರ್ಬಲ ಗೊಳಿಸಲು ಯತ್ನಿಸಲಾಗಿದೆ. ಭಾರತೀಯ ಸಂದರ್ಭದಲ್ಲಿ ಮತ ನಿರಪೇಕ್ಷತೆ ಅಥವಾ ಸೆಕ್ಯೂಲಾರಿಸಂ ಅಂದರೆ ಕೇವಲ ಪಾಶ್ಚಿಮಾತ್ಯ ಪರಿಕಲ್ಪನೆಯಂತೆ ಪ್ರಭುತ್ವವನ್ನು ಮತ ಧರ್ಮಗಳಿಂದ ಪ್ರತ್ಯೇಕಗೊಳಿಸುವುದಷ್ಟೇ ಅಲ್ಲ; ಎಲ್ಲ ಮತಧರ್ಮಗಳಿಗೂ ಸಮಾನ ಹಕ್ಕು ನೀಡುವುದು ಮಾತ್ರವೇ ಅಲ್ಲ; ಅವೆಲ್ಲಕ್ಕಿಂತ ಮಿಗಿಲಾಗಿ ಈ ದೇಶದ ಮತೀಯ ಸಾಂಸ್ಕೃತಿಕ ಪಾರಂಪರಿಕ, ಭಾಷಾವಾರು ಹಾಗೂ ಇನ್ನಿತರ ವೈವಿಧ್ಯತೆಗಳಿಗೆ ಮಾನ್ಯತೆ ನೀಡಿ ಅವುಗಳಲ್ಲಿನ ಪ್ರತಿಯೊಂದು ಅಂಶಕ್ಕೂ ಸಂರಕ್ಷಣೆಯನ್ನು ಖಾತರಿಗೊಳಿಸುವುದೂ ಸೆಕ್ಯೂಲಾರಿಸಂನಲ್ಲಿ ಸೇರಿದೆ" ಎಂದ ಯೆಚೂರಿ ಎನ್‌ಡಿಎ ಆಡಳಿತದಲ್ಲಿ ಈ ಅನೇಕ ಪ್ರಕಾರದ ವೈವಿಧ್ಯತೆಗಳನ್ನು ನಾಶಗೊಳಿಸುವ ಹುನ್ನಾರ ನಡೆಸಲಾಗುವುದನ್ನು ನೆನಪಿಸಿಕೊಂಡರು.

ಹೊಣೆಗಾರಿಕೆಯನ್ನು ನಿಭಾಯಿಸು ತ್ತಿದೆ. ಇಷ್ಟು ಮಾತ್ರಕ್ಕೆ ಈ ಎಲ್ಲಾ ಹೊಣೆ ಗಾರಿಕೆಯನ್ನು ಎಡರಂಗದ 61 ಮಂದಿ ಸಂಸತ್ ಸದಸ್ಯರ ಮೇಲೆ ಮಾತ್ರ ಹೊರಿಸಿ ಬಿಟ್ಟರೆ ಸಾಲದು. ನವ ಉದಾರೀಕರಣದ ಆರ್ಥಿಕ ನೀತಿಯ ಪ್ರಶ್ನೆಯಲ್ಲಿ ಬಿಜೆಪಿ., ಕಾಂಗ್ರೆಸ್, ಮತ್ತಿತರ ಬಂಡವಾಳಶಾಹಿ ಪಕ್ಷಗಳು ಹೆಚ್ಚು ಕಡಿಮೆ ಸಹಮತ ಹೊಂದಿವೆ. ಈ ನಿಟ್ಟಿನಲ್ಲಿ ಎಡರಂಗವೇ ಒಂದು ಕಡೆ, ಇತರ ಎಲ್ಲ ಪಕ್ಷಗಳು ಇನ್ನೊಂದು ಕಡೆ ಎಂಬಂತಾಗಿದೆ. ಆದುದ ರಿಂದ ಯುಪಿಎ ಸರಕಾರ ಸರಿಯಾದ ಮಾರ್ಗದಲ್ಲಿ ಕಾರ್ಯ ನಿರ್ವಹಿ ಸುವಂತೆ ಮಾಡಲು, ಕೋಮುವಾದಿ ಗಳು ಮರಳಿ ನಮ್ಮ ಪ್ರಭುತ್ವ ಯಂತ್ರವನ್ನು ಕೈವಶ ಮಾಡಿಕೊಳ್ಳುವುದನ್ನು ತಡೆ ಹಿಡಿಯಲು ಮತ್ತು ಆ ಮೂಲಕ ನಮ್ಮ ಜನತಂತ್ರ ವ್ಯವಸ್ಥೆಯನ್ನು ಸ್ಥಿರಗೊಳಿಸಲು ನಾವು ಪ್ರಬಲ ಜನಾಂದೋಲನಗಳನ್ನು ಸಂಘಟಿಸುವ ಅಗತ್ಯ ಇದೆ. ಜನಶಕ್ತಿಯ ಮೇಲೆ ನಮಗೆ ವಿಶ್ವಾಸವಿದೆ". ಎಂದು ಸೀತಾರಾಂ ಯೆಚೂರಿ ಹೇಳಿದರು.

ತಮ್ಮ ಸುದೀರ್ಘ ಹಾಗೂ ವಿಚಾರ ಪ್ರಚೋದಕ ಭಾಷಣದ ಬಳಿಕ ಯೆಚೂರಿ ಸುಮಾರು ಒಂದು ಗಂಟೆಯ ಕಾಲ ಸಭಿಕರ ವಿವಿಧ ಪ್ರಶ್ನೆಗಳಿಗೆ ಉತ್ತರ ನೀಡಿದರು.

'ಭಾರತಪರ ಜನ ವೇದಿಕೆ'ಯ ಉಡುಪಿ ಘಟಕದ ಅಧ್ಯಕ್ಷ ಪ್ರೊ.ಎಸ್. ಹಯವದನ ಉಪಾಧ್ಯ ಸಭಾಧ್ಯಕ್ಷತೆ ವಹಿಸಿ ಮುಖ್ಯ ಅತಿಥಿಗಳನ್ನು ಸ್ವಾಗತಿಸಿದರು. ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟದ ಕಾಂ.ಎಸ್.ಎ.ಹಿರೇಮಠ ವಂದನಾರ್ಪಣೆ ಮಾಡಿದರು. 'ಭಾರತಪರ ಜನ ವೇದಿಕೆಯ ಸಂಚಾಲಕ ಎ.ಎಸ್.ಆಚಾರ್ಯರು ಕಾರ್ಯಕ್ರಮ ನಿರ್ವಹಿಸಿದರು.

ಉಡುಪಿ 'ಭಾರತಪರ ಜನ' ವೇದಿಕೆಯಿಂದ ಉಪನ್ಯಾಸ ಕಾರ್ಯಕ್ರಮ

ಜನತಂತ್ರದ ವ್ಯವಸ್ಥೆಯನ್ನು ದೃಢಗೊಡಿಸಲು ಜನಾಂದೋಲನ ಅತೀ ಅವಶ್ಯ

— ಸೀತಾರಾಂ ಯೆಚೂರಿ

"ಕಳೆದ ಎಪ್ರಿಲ್-ಮೇ ತಿಂಗಳ ಲೋಕಸಭಾ ಚುನಾವಣೆಯಲ್ಲಿ ಕೋಮುವಾದಿ ಬಿ.ಜೆ.ಪಿ. ನೇತೃತ್ವದ ಎನ್.ಡಿ.ಎ ಒಕ್ಕೂಟ ಸೋತು ನೆಲಕಚ್ಚಿದುದರ ಪರಿಣಾಮವಾಗಿ ಆರು ವರ್ಷಗಳ ದೀರ್ಘ ಕಾಲದ ಬಳಿಕ ಇದೀಗ ಭಾರತೀಯ ಗಣತಂತ್ರವನ್ನು ಗಟ್ಟಿಗೊಳಿಸಿ ಅದನ್ನು ಪ್ರಗತಿಯತ್ತ ಕೊಂಡೊಯ್ಯಲು ನಮ್ಮ ಮುಂದೆ ವಿಫುಲ ಅವಕಾಶಗಳು ತೆರೆದುಕೊಂಡಿವೆ. ಎನ್.ಡಿ.ಎಯ ದುರಾಡಳಿತದ ಕಾಲದಲ್ಲಿ ಈ ಪ್ರಕ್ರಿಯೆಗೆ ದಕ್ಕೆಯುಂಟು ಮಾಡಿದ್ದ ಕೋಮುವಾದಿಗಳು ಮರಳಿ ಅಧಿಕಾರದ ಗದ್ದುಗೆಗೆ ಏರುವುದನ್ನು ತಡೆಯಲು ನಮಗೆ ದೊರೆತಿರುವ ಈ ಅಮೂಲ್ಯ ಅವಕಾಶವನ್ನು ಸದುಪಯೋಗ ಗೊಳಿಸುವ ಹೊಣೆಗಾರಿಕೆ ನಮ್ಮ-ನಿಮ್ಮ ಮೇಲಿದೆ, ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಪೊಲಿಟ್ ಬ್ಯೂರೋ ಸದಸ್ಯ ಕಾಂ.ಸೀತಾರಾಂ ಯೆಚೂರಿ ಕರೆ ನೀಡಿದ್ದಾರೆ. ಉಡುಪಿಯ ಪುರಭವನದಲ್ಲಿ 24.01.2005 ರಂದು 'ಭಾರತಪರ ಜನ ವೇದಿಕೆ' ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ **'ಪ್ರಸಕ್ತ ಸನ್ನಿವೇಶ ಮತ್ತು ಎಡರಂಗದ ಪಾತ್ರ'** ಎಂಬ ವಿಷಯದ ಕುರಿತು ಮಾತನಾಡುತ್ತಿದ್ದರು.

"ಕೋಮುವಾದಿಗಳನ್ನು ಅಧಿಕಾರ ದಿಂದ ಕೆಳಗಿಳಿಸಲು ವಿವಿಧ ಜನ ವಿಭಾಗಗಳು ಹೋರಾಟ ನಡೆಸಿವೆ ಯಾದರೂ, ಅದರಲ್ಲಿ ಎಡರಂಗದ ಪಾತ್ರವೇ ಬಹುಮುಖ್ಯವಾದುದು. ಸಿಪಿಐ(ಎಂ) ಅಂತೂ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಕೋಮುವಾದಿ ಕೂಟವನ್ನು ಸೋಲಿಸುವುದು, ಕೇಂದ್ರದಲ್ಲಿ ಮತನಿರಪೇಕ್ಷ ಬದಲೀ ಸರಕಾರವೊಂದನ್ನು ಅಧಿಕಾರಕ್ಕೆ ತರುವುದು ಹಾಗೂ ಲೋಕಸಭೆಯಲ್ಲಿ ಎಡಪಕ್ಷಗಳ ಸ್ಥಾನವನ್ನು ಹೆಚ್ಚಿಸುವುದು ಈ ಮೂರೂ ತನ್ನ ಗುರಿಯೆಂದು ಸ್ಪಷ್ಟವಾಗಿ ಹೇಳಿಕೊಂಡಿತ್ತು. ಈ ಮೂರೂ ಉದ್ದೇಶಗಳನ್ನು ಸಾಧಿಸಲಾಗಿದೆ. ಅಷ್ಟು ಮಾತ್ರಕ್ಕೆ ಯುಪಿಎ ಸರಕಾರವು ತನ್ನ ಸಾಮಾನ್ಯ ಕನಿಷ್ಟ ಕಾರ್ಯಕ್ರಮವನ್ನು ಪ್ರಾಮಾಣಿಕವಾಗಿ ಜ್ಯಾರಿಮಾಡುವುದೆಂಬ ಭರವಸೆ ಇಲ್ಲ. ಪ್ರಬಲವಾದ ಜನಾಂದೋಲನ ಮಾತ್ರ ಇದನ್ನು ಖಚಿತಗೊಳಿಸಬಲ್ಲುದು." ಎಂದು ಯೆಚೂರಿ ಹೇಳಿದರು.

ಅವರು ಮುಂದುವರಿದು, "ಭಾರತೀಯ ಸಂವಿಧಾನವು ದೀರ್ಘಕಾಲದ ಸ್ವಾತಂತ್ರ್ಯ ಹೋರಾಟದ ಮತ್ತು ಈ ರಾಷ್ಟ್ರೀಯ ಚಳುವಳಿಯಲ್ಲಿ ಪಾಲುಗೊಂಡಿದ್ದ ವಿವಿಧ ಜನವಿಭಾಗಗಳು ಹೊಂದಿದ್ದ ಆಶೋತ್ತರಗಳ ಪ್ರತಿಬಿಂಬ ವಾಗಿದೆ. ಸ್ವತಂತ್ರ ಭಾರತದ ರಾಜಕೀಯ, ಸಮಾಜ ಹೇಗಿರಬೇಕು ಎಂಬ ಕುರಿತು ನಮ್ಮಲ್ಲಿ ಮೂರು ಮುಖ್ಯ ವಿಭಿನ್ನ ಪರಿಕಲ್ಪನೆಗಳಿದ್ದವು. ಭಾರತವು ಮತನಿರಪೇಕ್ಷ ಪ್ರಜಾಸತ್ತೆಯಾಗಿರಬೇಕೆಂದು (secularism) ಕಾಂಗ್ರೆಸ್‌ನ ಪರಿಕಲ್ಪನೆ ಯಾಗಿದ್ದರೆ, ಕಮ್ಯೂನಿಸ್ಟರು ಇದಕ್ಕೆ ಪೂರಕವಾಗಿ ಆರ್ಥಿಕ ಪ್ರಜಾಸತ್ತೆ, ಸ್ವಾವಲಂಬನೆ ಮತ್ತು ಸಾಮಾಜಿಕ ನ್ಯಾಯಗಳು ಅವಶ್ಯಕವೆಂದೂ ಇವಿಲ್ಲದೆ ನಮ್ಮ ಮತ ನಿರಪೇಕ್ಷ ಪ್ರಜಾಸತ್ತೆಯು ಸುಭದ್ರವಾಗಿರಲಾರದೆಂದೂ ವಾದಿಸಿದ್ದರು. ಈ ಉದ್ದೇಶವನ್ನು ಸಮಾಜವಾದದ ಮೂಲಕ ಮಾತ್ರವೇ ಸಾಧಿಸಬಹುದೆಂದೂ ಎಡಪಂಥೀಯರ ಅಭಿಮತವಾಗಿತ್ತು. ಇದಕ್ಕೆ ವಿರುದ್ಧವಾಗಿ ಆರ್.ಎಸ್.ಎಸ್ ಮತ್ತು ಮುಸ್ಲಿಂ ಲೀಗ್‌ಗಳು ಸ್ವತಂತ್ರ ಭಾರತದ ಸ್ವರೂಪವನ್ನು ಕೋಮುವಾದದ ಚೌಕಟ್ಟಿನೊಳಗೆ ನಿರ್ವಹಿಸಿ ಅದನ್ನೊಂದು ಸಂಕುಚಿತ ಮತಾಧಾರಿತ ರಾಷ್ಟ್ರವಾಗಿ (Theocratic State) ರಾಷ್ಟ್ರವಾಗಿ ನಿರ್ಮಿಸಬಯಸಿದ್ದರು. ದ್ವಿರಾಷ್ಟ್ರ ಸಿದ್ಧಾಂತವು 1935ರಲ್ಲಿ ಸಾವರ್ಕರ್ ಅವರಿಂದಲೂ 1937 ರಲ್ಲಿ ಜಿನ್ನಾ ಅವರಿಂದಲೂ ಪ್ರತಿಪಾದಿಸಲ್ಪಟ್ಟಿತು. ಈ ಮೂರು ಪರಿಕಲ್ಪನೆಗಳ ನಡುವಿನ ಹೋರಾಟ ಈಗಲೂ ಮುಂದುವರಿದಿದೆ ಮತ್ತು ಅದು ಒಂದೇ ಚುನಾವಣೆಯಲ್ಲಿ ಬಗೆ ಹರಿಯಲಾರದು" ಎಂದು ಹೇಳಿದರು.

"ಭಾರತೀಯ ಸಂವಿಧಾನದ ಪ್ರಮುಖ ಆಧಾರಸ್ಥಂಭಗಳಾಗಿರುವ ಮತನಿರಪೇಕ್ಷ ಪ್ರಜಾಸತ್ತೆ, ಒಕ್ಕೂಟವ್ಯವಸ್ಥೆ (Federalism), ಆರ್ಥಿಕ ಸ್ವಾವಲಂಬನೆ ಮತ್ತು ಸಾಮಾಜಿಕ ನ್ಯಾಯದ ತತ್ವಗಳ ಮೇಲೆ ಬಿಜೆಪಿ ಆಡಳಿತದಲ್ಲಿ ನಿರಂತರ ಅಕ್ರಮ ನಡೆದಿದ್ದು ಅವುಗಳನ್ನು


"ಆರ್ಥಿಕ ರಂಗದಲ್ಲಂತೂ ಬಿಜೆಪಿ ನಾಯಕತ್ವದ ಸರಕಾರವು ನಮ್ಮ ಸ್ವಾವಲಂಬನೆಯನ್ನು ಸಾಮ್ರಾಜ್ಯಶಾಹಿಗಳಿಗೆ ಒತ್ತೆಯಿರಿಸಿತು. ನಮ್ಮ ಒಕ್ಕೂಟ ಸ್ವರೂಪಕ್ಕೂ ಧಕ್ಕೆಯುಂಟಾಯಿತು. ಸಾಮಾಜಿಕ ನ್ಯಾಯದ ಪರಿಕಲ್ಪನೆಗಳು ಗಾಳಿಗೆ ತೂರಲ್ಪಟ್ಟವು" ಎಂದ ಕಾಂ. ಯೆಚೂರಿ "ಸಂವಿಧಾನದ ಈ ನಾಲ್ಕು ಪ್ರಮುಖ ಆಧಾರ ಸ್ಥಂಭಗಳಿಗೆ ಮರಳಿ ಬಲ ನೀಡಿ ಭಾರತೀಯ ಗಣತಂತ್ರವನ್ನು ಗಟ್ಟಿ ಗೊಳಿಸಲು ಹಾಗೂ ಅದನ್ನು ಪ್ರಗತಿಯತ್ತ ಕೊಂಡೊಯ್ಯಲು ಇಂದಿನ ಪರಿಸ್ಥಿತಿ ಅಮೂಲ್ಯ ಅವಕಾಶವೊಂದನ್ನು ಒದಗಿಸಿ ಕೊಟ್ಟಿದೆ. ನಾವು ಈ ಅವಕಾಶ ವನ್ನು ಕಳೆದುಕೊಳ್ಳಲಾಗದು" ಎಂದು ಎಚ್ಚರಿಸಿದರು.

"ಅಷ್ಟೇ ಅಲ್ಲದೆ ಜಾಗತಿಕ ಮಟ್ಟದಲ್ಲೂ ಅಮೇರಿಕನ್ ಸಾಮ್ರಾಜ್ಯಶಾಹಿಯ ಯಜಮಾನಿಕೆಯ ಪ್ರಯತ್ನಗಳ ವಿರುದ್ಧ ವಿಶ್ವವ್ಯಾಪಾರ ಸಂಸ್ಥೆ, ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್‌ಗಳು ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಹೇರುತ್ತಿರುವ ಒತ್ತಡದ ವಿರುದ್ಧ ಪ್ರತಿಭಟನೆಯನ್ನು ಕ್ರೋಢೀ ಕರಿಸಲು ಭಾರತಕ್ಕೆ ಇಂದು ಉತ್ತಮ ಅವಕಾಶ ದೊರೆತಿದೆ. ಸಾಮ್ರಾಜ್ಯಶಾಹಿಯ ಗುಲಾಮನಂತೆ ನಡೆದುಕೊಂಡು ಮೊಣಕಾಲೂರಿದ್ದ ಎನ್.ಡಿ.ಎ ಸರಕಾರದ ವರ್ತನೆಗೆ ವಿರುದ್ಧವಾಗಿ ಇದೀಗ ಅಭಿವೃದ್ಧಿಶೀಲ ದೇಶಗಳ ವಕ್ತಾರನಾಗಿ ಪಾತ್ರವಹಿಸುವ ಸುಸಂಧರ್ಭ ಭಾರತಕ್ಕೆ ಒದಗಿ ಬಂದಿದೆ. ಬ್ರೆಝಿಲ್, ರಷ್ಯಾ, ಭಾರತ, ಚೈನಾ ಮತ್ತು ದಕ್ಷಿಣ ಆಫ್ರಿಕಾ ದೇಶಗಳ ಪ್ರಸ್ತಾವಿತ ಒಕ್ಕೂಟವು (BRICS) ಅಮೇರಿಕಾದ ಯಜಮಾನಿಕೆಯ ತಂತ್ರಗಳ ವಿರುದ್ಧ ಪ್ರಬಲವಾದ ಸವಾಲೆಸೆಯ ಬಲ್ಲುದು" ಎಂದೂ ಯೆಚೂರಿ ಹೇಳಿದರು.

"ಎಡರಂಗವು ಅಧಿಕಾರವನ್ನು ಮಾತ್ರ ಹೊಂದಿದೆ, ಹೊಣೆಗಾರಿಕೆಯನ್ನಲ್ಲ ಎಂಬ ಆರೋಪ ಹುರುಳಿಲ್ಲದ್ದು. ವಾಸ್ತವದಲ್ಲಿ ಎಡರಂಗವು ಯಾವುದೇ ಅಧಿಕಾರವಿಲ್ಲದೆ ತನ್ನ

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಫೆಬ್ರವರಿ 5-6, 2005**
  'ಟೀಚರ್ ಪತ್ರಿಕೆ' ವಾರ್ಷಿಕೋತ್ಸವ, ರಾಯಚೂರು
- **ಫೆಬ್ರವರಿ 15,16,17,2005**
  ಭಾರತ ವಿದ್ಯಾರ್ಥಿ ಫೆಡರೇಷನ್(SFI) ರಾಜ್ಯ ಸಮ್ಮೇಳನ, ಸೆನೆಟ್ ಹಾಲ್ ಸೆಂಟ್ರಲ್ ಕಾಲೇಜ್, ಬೆಂಗಳೂರು
- **ಫೆಬ್ರವರಿ 18-24, 2005**
  ವಿಮಾ ನೌಕರರ ಅಖಿಲ ಭಾರತ ಸಮ್ಮೇಳನ (AIIEA) ಅಂಬೇಡ್ಕರ್ ಭವನ, ಬೆಂಗಳೂರು
- **ಫೆಬ್ರವರಿ 19,20-2005**
  ಕರ್ನಾಟಕ ರಾಜ್ಯ ಔಷಧ ಮತ್ತು ಮಾರಾಟ ಪ್ರತಿನಿಧಿಗಳ (KSM ಮತ್ತು SRA) 18ನೇ ರಾಜ್ಯ ಸಮ್ಮೇಳನ, ರಾಯಚೂರು



ವಿಚಾರವಾದಿ, ಧರ್ಮನಿರಪೇಕ್ಷ ಶಿಕ್ಷಕ

ಎಚ್ಚೆನ್ ಇನ್ನಿಲ್ಲ

ಡಾ|| ಎಚ್.ನರಸಿಂಹಯ್ಯ ಕರ್ನಾಟಕದ ಜನರ ಬದುಕಿನಲ್ಲಿ ಹಾಸುಹೊಕ್ಕಾಗಿದ್ದ ವ್ಯಕ್ತಿ. ಹಲವು ಆಯಾಮಗಳ ವ್ಯಕ್ತಿತ್ವ ಹೊಂದಿದ್ದ ಎಚ್ಚೆನ್, ಹಲವುವಿಶಿಷ್ಟತೆಗಳ ಸಂಗಮವಾಗಿದ್ದರು. ದಲಿತ ಹಿನ್ನೆಲೆಯಿಂದ ಬಂದು ಬೆಂಗಳೂರು ವಿಶ್ವ ವಿದ್ಯಾಲಯದ ಉಪಕುಲಪತಿ ಹುದ್ದೆಗೆ ಮತ್ತು ಅದಕ್ಕಿಂತಲೂ ಎತ್ತರ ಬೆಳೆದವರು. ನೊಬೆಲ್ ಪ್ರಶಸ್ತಿ ವಿಜೇತರಾದ ಪ್ರೊ|| ಪಾಲಿಂಗ್ ಜತೆ ಅಮೆರಿಕದಲ್ಲಿ ಸಂಶೋಧನೆ ನಡೆಸಿ ಡಾಕ್ಟರೇಟ್ ಪಡೆದು, ಸ್ವದೇಶಕ್ಕೆ ಮರಳಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು. ಶಿಕ್ಷಣ ಕ್ಷೇತ್ರಕ್ಕೆ ಪ್ರವೇಶಿಸಿ ನಮ್ಮ ಸ್ವಾತಂತ್ರ ಚಳುವಳಿಯ ಮೌಲ್ಯಗಳನ್ನು ಅಲ್ಲಿ ಜೀವನದುದ್ದಕ್ಕೂ ಎತ್ತಿ ಹಿಡಿದವರು. ಅವರ ಸರಳ ಬದುಕು, ನ್ಯಾಶನಲ್ ಎಜುಕೇಶನ್ ಸೊಸೈಟಿಯ ಶಾಲೆ - ಕಾಲೇಜು - ಶಿಕ್ಷಣ ಸಂಸ್ಥೆಗಳ ಗುಂಪನ್ನು ಕಟ್ಟಿ ನಿಲ್ಲಿಸಿದ್ದರಲ್ಲಿ ಅವರ ಪಾತ್ರ ಎಲ್ಲರಿಗೂ ಗೊತ್ತಿರುವಂತಹುದೇ. ನ್ಯಾಶನಲ್ ಸ್ಕೂಲಿಗೆ ವಿದ್ಯಾರ್ಥಿಯಾಗಿ ಬಂದು ಸೇರಿದ ಹಾಸ್ಟೆಲ್ ರೂಮಿನಲ್ಲಿ 50 ವರ್ಷಕ್ಕೂ ಹೆಚ್ಚು ಕಾಲ ಒಬ್ಬಂಟಿಗನಾಗಿ ಬಾಳಿದ ಎಚ್ಚೆನ್ ದಂತಕಥೆಯಾಗಿ ಹೋಗಿದ್ದಾರೆ.

ಇಡೀ ಸಮಾಜಕ್ಕೆ ವಿಚಾರವಾದ, ಧರ್ಮ ನಿರಪೇಕ್ಷತೆಯ ಶಿಕ್ಷಣ ನೀಡಿ ಎಚ್ಚರಿಸಿದ ಎಚ್ಚೆನ್‌ರ ವಿಶಿಷ್ಟ ಕೊಡುಗೆಯ ಮಹತ್ವದ ಬಗ್ಗೆ ಮಾತನಾಡುವವರು ಅಪರೂಪ. ಎಚ್ಚೆನ್‌ರ ವ್ಯಕ್ತಿತ್ವ ಈ ಆಯಾಮದ ಬಗ್ಗೆ ನಮ್ಮ ಮಾಧ್ಯಮಗಳು ಮರೆಸಲು ಬಯಸುತ್ತವೆ. 70ರ ದಶಕದಲ್ಲಿ ಕರ್ನಾಟಕದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದ್ದಾಗ ಹುಟ್ಟಿಕೊಂಡ ಚಳುವಳಿಗಳಲ್ಲಿ ವಿಚಾರವಾದಿ ಚಳುವಳಿಯೂ ಒಂದು. ಸಾಯಿ ಬಾಬಾನ ಪವಾಡ ಬಯಲು, ಬಾನಾಮತಿ ಮುಂತಾದ ಇತರ ಮೂಢ ನಂಬಿಕೆಗಳ ಬಯಲು ಮಾಡುವಲ್ಲಿ ಎಚ್ಚೆನ್ ತಮ್ಮ ಎಲ್ಲಾ ಪ್ರತಿಷ್ಠೆಯನ್ನು ಪಣವಾಗಿಟ್ಟಿದ್ದರು. ಇಂತಹ ಮೂಢನಂಬಿಕೆಗಳನ್ನು ಬಯಲು ಮಾಡಲು ಸಮಿತಿ ರಚಿಸಿ ಸಮಾಜದಲ್ಲಿ ಅದರ ವಿರುದ್ಧ ದೃಢವಾದ ತಿಳುವಳಿಕೆ ಮೂಡಿಸಿದ್ದರಲ್ಲಿ ಅವರ ಕೊಡುಗೆ ಮರೆಯುವಂತಹದಲ್ಲ.

ಅದೇ ರೀತಿ ಅವರ ದೃಢ ಧರ್ಮನಿರಪೇಕ್ಷ ನಿಲುವು, ಧರ್ಮವನ್ನು ಶಿಕ್ಷಣದಿಂದ ಪ್ರತ್ಯೇಕಿಸುವ ನೀತಿಯನ್ನು ನಿಸ್ಪುರತೆಯಿಂದ ಎತ್ತಿ ಹಿಡಿದರು. ಅವರು ಕಟ್ಟಿದ ನ್ಯಾಶನಲ್ ಎಜುಕೇಶನ್ ಸೊಸೈಟಿಯು ಇದಕ್ಕೆ ಉತ್ತಮ ಮಾದರಿಯಾಗಿ ತೆರೆದಿದೆ. ಆ ಸೊಸೈಟಿಯಲ್ಲೇ ಕೋಮುವಾದಿ ಶಕ್ತಿಗಳ ವಿರುದ್ಧ ಹಲವು ಬಾರಿ ಹೋರಾಡಿದ ಎಚ್ಚೆನ್ ಕೊಡುಗೆ ಇಂದಿನ ಸಂದರ್ಭದಲ್ಲಿ ನೆನಪಿನಲ್ಲಿಡಬೇಕಾದ್ದು. ಒಂದು ಕಡೆ ಬರಿಯ ವ್ಯಾಪಾರಿ, ಇನ್ನೊಂದು ಕಡೆ ಮಠಗಳ ಭಾಗವಾಗಿ ಬಿಟ್ಟಿರುವ ಶಿಕ್ಷಣ ಸಂಸ್ಥೆಗಳ ಭರಾಟೆಯಲ್ಲಿ ಎಚ್ಚೆನ್ ಮಾದರಿಯ ಶಿಕ್ಷಣ ಸಂಸ್ಥೆಗಳು ಇನ್ನೂ ನಮ್ಮ ನಾಡಿನ ಧರ್ಮನಿರಪೇಕ್ಷತೆ ಕಾಪಾಡಿಕೊಂಡು ಬಂದಿವೆ.

ಎಡ - ಪ್ರಗತಿಪರ ಚಳುವಳಿಗಳ ಬಗ್ಗೆ ಎಚ್ಚೆನ್ ಹೊಂದಿದ್ದ ಸಹಾನುಭೂತಿ, ಸಹ ಇಲ್ಲಿ ನೆನಪಿಸಬೇಕಾದ್ದು. ಇಂತಹ ಚಳುವಳಿಗಳ ಜತೆ ತಮ್ಮನ್ನು ಯಾವಾಗಲು ತೊಡಗಿಸಿಕೊಳ್ಳುತ್ತಿದ್ದರು. ತಮ್ಮ ಕೈಲಾದ ಎಲ್ಲಾ ಸಹಾಯ ಬೆಂಬಲ ಕೊಡುತ್ತಿದ್ದರು.

ಎಚ್ಚೆನ್ ದಶಕಗಳ ಕಾಲ ನಡೆಸಿಕೊಂಡು ಬಂದ ಬೆಂಗಳೂರು ಸೈನ್ಸ್ ಫೋರಂ ಕರ್ನಾಟಕದಲ್ಲಿ ವೈಜ್ಞಾನಿಕ ಮನೋಭಾವ ಮೂಡಿಸುವಲ್ಲಿ, ವಿಜ್ಞಾನ ಪ್ರಚಾರದಲ್ಲಿ ಮಂಚೂಣಿ ಮಾತ್ರ ವಹಿಸಿದೆ. ಆ ಫೋರಂ ಸಾವಿರಾರು ಫಿಲಂ ಪ್ರದರ್ಶನಗಳು, ವಿಜ್ಞಾನ ಭಾಷಣಗಳನ್ನು ಸಂಘಟಿಸಿದೆ.

ಶಿಕ್ಷಣದಲ್ಲಿ ವ್ಯಾಪಾರೀಕರಣ, ಕೋಮುವಾದೀಕರಣದ ವಿರುದ್ಧ ದೃಢ ಹೋರಾಟ, ನೈಜ ಧರ್ಮನಿರಪೇಕ್ಷತೆಯನ್ನು ಎತ್ತಿ ಹಿಡಿಯುವುದು, ಮೂಢನಂಬಿಕೆ, ಅಜ್ಞಾನಗಳ ವಿರುದ್ಧ ಸತತ ಚಳವಳಿ, ವೈಜ್ಞಾನಿಕ ದೃಷ್ಟಿಕೋಣದ ಬಗ್ಗೆ ವ್ಯಾಪಕ ಪ್ರಚಾರ - ಇವೇ ನಾವೆಲ್ಲಾ ಎಚ್ಚೆನ್ ಸಲ್ಲಿಸಬಹುದಾದ ಶ್ರದ್ಧಾಂಜಲಿ.

- ಶರತ್‌ಚಂದ್ರ

ಎಚ್ಚೆನ್ ನೆನಪು ಕುಂದದಿರಲಿ - ಜಿ.ಆರ್

70ರ ದಶಕದಲ್ಲಿ ಎಚ್ಚೆನ್ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಯಾಗಿದ್ದರು. ಆಗ ಕೆಲವು ಶಕ್ತಿಗಳು ನ್ಯಾಷನಲ್ ಎಜುಕೇಶನ್ ಸೊಸೈಟಿಯನ್ನು ವಶಪಡಿಸಿಕೊಂಡು, ಎಚ್ಚೆನ್‌ರನ್ನು ಅಲ್ಲಿಂದ ಓಡಿಸಲು ಪ್ರಯತ್ನಿಸಿದರು. ಇಂತಹ ಪ್ರಯತ್ನವನ್ನು ನಾವು, ಎಚ್ಚೆನ್ ಜತೆ ಸೇರಿ ಹಿಮ್ಮೆಟ್ಟಿಸಿದ್ದು ಇನ್ನೂ ಹಸಿರಾಗಿದೆ. ಎಚ್ಚೆನ್ ಇಲ್ಲವಾದಾಗ, ಪುನಃ ಈ ಶಕ್ತಿಗಳು ಇಂತಹುದೇ ಪ್ರಯತ್ನ ಮಾಡಬಹುದು. ಅದನ್ನು ಪುನಃ ಸೋಲಿಸುವ ಮೂಲಕ ಎಚ್ಚೆನ್ ನೆನಪು ಕುಂದದಂತೆ ಮಾಡುವುದು ಸಾಧ್ಯವಾಗುತ್ತದೆ ಎಂದು ನನ್ನ ಆಸೆ.

.... ಎಚ್ಚೆನ್ ಹಲವು ವರ್ಷಗಳ ಹಿಂದೆ ಅವರ ಅಣಕ ಶ್ರದ್ಧಾಂಜಲಿ ಸಭೆಯನ್ನು ನಾನು ಸಂಘಟಿಸಲು ಒಪ್ಪಿದ್ದರು: ಆ ಸಭೆಗೆ ಅವರು ಬಂದು ಉತ್ತರಿಸುವುದಾಗಿ ಹೇಳಿದ್ದರು.

-ಎಚ್ಚೆನ್‌ಗೆ ಶ್ರದ್ಧಾಂಜಲಿ ಲೇಖನದಲ್ಲಿ

ಡಾ|| ಜಿ.ರಾಮಕೃಷ್ಣ

ಹೆಚ್.ಎನ್ ನಿಧನಕ್ಕೆ ಸಿಪಿಐ(ಎಂ) ಶೋಕ

ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಶಿಕ್ಷಣತಜ್ಞ, ವಿಚಾರವಾದಿ, ಹೆಚ್.ನರಸಿಂಹಯ್ಯರವರ ನಿಧನಕ್ಕೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿಯು ತನ್ನ ಅತೀವವಾದ ಶೋಕವನ್ನು ವ್ಯಕ್ತಪಡಿಸಿದೆ. ಹಾಗೆಯೇ ನ್ಯಾಷನಲ್ ಕಾಲೇಜು ಹಾಗೂ ಹೈಸ್ಕೂಲುಗಳ ಬಳಗದ ದುಃಖದಲ್ಲಿ ತಾನೂ ಬಾಗಿ ಎಂದು ಸಿಪಿಐ(ಎಂ) ಹೇಳಿದೆ.

ಡಾ.ಹೆಚ್.ಎನ್.ರವರು ವಿದ್ಯಾರ್ಥಿ ದೆಸೆಯಿಂದಲೂ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಟದ ಕಣದಲ್ಲಿ ಧುಮುಕಿ ರಾಷ್ಟ್ರಪ್ರೇಮಕ್ಕೆ ಮಾದರಿಯಾಗಿದ್ದರು. ಅಂಧಶ್ರದ್ಧೆ, ಮೂಢನಂಬಿಕೆ, ಪವಾಡ ವಿರುದ್ಧ ಸಮರವನ್ನೇ ಸಾರಿ ವೈಜ್ಞಾನಿಕ ಮನೋಭಾವವನ್ನು ಪಸರಿಸುವ ಮೂಲಕ ಕರ್ನಾಟಕಕ್ಕೆ ದೊಡ್ಡ ಕೊಡುಗೆಯನ್ನು ನೀಡಿದರು.

ಎಲ್ಲಾ ಬಗೆಯ ಮತಾಂಧತೆಯನ್ನು ತೀವ್ರವಾಗಿ ವಿರೋಧಿಸಿದ ಡಾ.ಹೆಚ್.ಎನ್ ರವರು ಕೋಮುಸೌಹಾರ್ದತೆಗಾಗಿ ಶ್ರಮಿಸಿದರಲ್ಲದೆ, ಧರ್ಮನಿರಪೇಕ್ಷತೆಯನ್ನು (secularism) ಎತ್ತಿ ಹಿಡಿದರು. ಎಲ್ಲರೂ ಸರ್ವಧರ್ಮ ಸಮಭಾವವೇ ಸೆಕ್ಯೂಲಾರಿಸಂ ಎಂದು ಅದರ ಅರ್ಥವನ್ನು ತಿರುಚುತ್ತಿದ್ದಾಗ ಧರ್ಮವನ್ನು ಪ್ರಭುತ್ವದಿಂದ ಬೇರ್ಪಡಿಸುವುದೇ ನಿಜವಾದ ಸೆಕ್ಯೂಲಾರಿಸಂನ ಅರ್ಥ ಎಂದು ದೃಢವಾಗಿ ಪ್ರತಿಪಾದಿಸಿದರು.

ನ್ಯಾಷನಲ್ ಎಜುಕೇಷನ್ ಸೊಸೈಟಿಯಲ್ಲಿ ನಡೆಸಿದ ಹಲವಾರು ಪ್ರಯೋಗಗಳ ಮೂಲಕ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಶಿಕ್ಷಣ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆ ಸ್ಮರಣಾರ್ಹ ಎಂದು ಸಿಪಿಐ(ಎಂ) ತನ್ನ ಶೋಕದಲ್ಲಿ ತಿಳಿಸಿದೆ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಪರವಾಗಿ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಮತ್ತು ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್ ಮೃತರ ದೇಹದ ಮೇಲೆ ಪುಷ್ಪಗುಚ್ಛವನ್ನಿರಿಸಿ ಅಂತಿಮ ಗೌರವ ಸಲ್ಲಿಸಿದರು.

ವಿದ್ಯುತ್ ಖಾಸಗೀಕರಣ ಮತ್ತು ಮೀಟರಿಕರಣಕ್ಕೆ ಸಿಪಿಐ(ಎಂ) ದೃಢ ವಿರೋಧ

ಭಾರತ ಕಮ್ಯುನಿಸ್ಟ್ ಪಕ್ಷ(ಸಿಪಿಐ-ಎಂ)ದ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್‌ರವರು 31.1.2005 ರಂದು ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿಯನ್ನು ನಡೆಸಿದ್ದು ಜನತೆಯ ವಿವಿಧ ಸಮಸ್ಯೆಗಳ ಕುರಿತು ಸರ್ಕಾರದ ಹಾಗೂ ಜನರ ಗಮನ ಸೆಳೆದಿದ್ದಾರೆ.

ಕರ್ನಾಟಕದ ಮೈತ್ರಿಕೂಟದ ಸರ್ಕಾರವು ವಿದ್ಯುತ್‌ನ ಉತ್ಪಾದನೆ ಮತ್ತು ವಿತರಣೆಯನ್ನು ಖಾಸಗೀಕರಿಸುವ ಪ್ರಕ್ರಿಯೆಯನ್ನು ತೀವ್ರಗೊಳಿಸುವದಾಗಿ ಪ್ರಕಟಿಸಿರುವುದನ್ನು ಸಿಪಿಐ(ಎಂ) ತೀವ್ರವಾಗಿ ವಿರೋಧಿಸಿದೆ. ದರಗಳನ್ನು ದುಬಾರಿಗೊಳಿಸುವುದಲ್ಲದೇ ಪಂಪ್‌ಸೆಟ್, ಭಾಗ್ಯಜ್ಯೋತಿಯಂತಹ ಸಾಮಾನ್ಯ ರೈತ ಹಾಗೂ ಕೂಲಿಕಾರರಂತಹ ಬಡ ಬಳಕೆದಾರರ ಸಂಪರ್ಕಗಳಿಗೆ ಮೀಟರ್ ಅಳವಡಿಸಿಯೇ ತೀರುವುದಾಗಿ ವಿದ್ಯುತ್ ಖಾತೆ ಸಚಿವರು ಹೇಳಿದ್ದಾರೆ. ಕೃಷಿ ಹಾಗೂ ಕೈಗಾರಿಕಾ ರಂಗಗಳು ಅತ್ಯಂತ ತೀವ್ರವಾದ ಬಿಕ್ಕಟ್ಟಿಗೆ ಸಿಲುಕಿದ್ದು ಸರ್ಕಾರದ ಈ ಕ್ರಮವನ್ನು ಬಳಕೆದಾರರು ಒಪ್ಪಲು ಸಾಧ್ಯವೇ ಇಲ್ಲ.

ಹಿಂದಿನ ಕಾಂಗ್ರೆಸ್ ಸರ್ಕಾರದ ನೀತಿಗಳ ದಾರಿಯನ್ನೇ ಇಂದಿನ ಕಾಂಗ್ರೆಸ್ ಹಾಗೂ ಜೆಡಿ(ಎಸ್)ನ ಮೈತ್ರಿಕೂಟದ ಸರ್ಕಾರವು ಅನುಸರಿಸುತ್ತಿರುವುದು ಅನಾಹುತಕಾರಿಯಾಗಿದೆ.

ಇಂತಹ ಒಟ್ಟು ಕ್ರಮಗಳನ್ನು ವಿಶ್ವಬ್ಯಾಂಕ್‌ನ ನಿರ್ದೇಶನದ ಒತ್ತಡಗಳಿಂದಲೇ ಮಾಡಲಾಗುತ್ತಿದೆ ಎಂದು ಸರ್ಕಾರ ಹೇಳಿರುವುದು ನಾಚಿಕೆಗೇಡಿತನದ ಸಂಗತಿ. ಸರ್ಕಾರದ ಈ ಕ್ರಮಗಳನ್ನು ವಿರೋಧಿಸುವವರನ್ನು ಗೂಂಡಾ ಕಾಯ್ದೆ ಅನ್ವಯಿಸಿ ಜೈಲಿಗೆ ತಳ್ಳಲು ಸರ್ಕಾರ ನಿರ್ಧರಿಸಿರುವುದು ಖಂಡನೀಯ. ಈ ಮೂಲಕ ಮೈತ್ರಿಕೂಟದ ಸರ್ಕಾರವು ಜನತೆಯೊಂದಿಗೆ ಸಂಘರ್ಷಕ್ಕಿಳಿಯಲು ಸಿದ್ಧವಾಗಿದೆಯೆಂದೇ ಭಾವಿಸಬೇಕಾಗುತ್ತದೆ.

ಸರ್ಕಾರದ ಈ ನಿರ್ಧಾರವನ್ನು ಸಿಪಿಐ(ಎಂ) ಅತ್ಯುಗ್ರವಾಗಿ ವಿರೋಧಿಸುವುದಲ್ಲದೇ ಅಂತಹ ಕ್ರಮಗಳಿಗೆ ಮುಂದಾದರೆ ರಾಜ್ಯದಾದ್ಯಂತ ಪ್ರಬಲವಾದ ಚಳುವಳಿಯನ್ನು ನಡೆಸುತ್ತದೆ.

ಪರಿಹಾರ ಸೂಚಿಸದಿರುವ ರಾಜ್ಯಪಾಲರ ಭಾಷಣ

ರಾಜ್ಯದ ಮೈತ್ರಿ ಕೂಟದ ಸರ್ಕಾರವು ಅಸ್ತಿತ್ವಕ್ಕೆ ಬಂದು ಹಲವು ತಿಂಗಳುಗಳ ವಿಳಂಬದ ಬಳಿಕ ಜನರ ತಾಳ್ಮೆ ಪರೀಕ್ಷಿಸಿ ಸಚಿವ ಸಂಪುಟವನ್ನು ರಚಿಸಿತು. ಪೂರ್ಣ ಪ್ರಮಾಣದ ಆಡಳಿತವನ್ನು ನಿರೀಕ್ಷಿಸಿದ ಜನತೆ ಈ ಸರ್ಕಾರದಿಂದ ತಾವು ಅನುಭವಿಸುತ್ತಿದ್ದ ಸಂಕಷ್ಟಗಳಿಗೆ ಪರಿಹಾರವನ್ನು ನಿರೀಕ್ಷಿಸಿದರು. ಸಂಪುಟ ವಿಸ್ತರಣೆಯಾದರೂ ಪೂರ್ಣಪ್ರಮಾಣದಲ್ಲಿ ಆಡಳಿತ ನಡೆಸಲು ಇಳಿದಿದೆ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿಲ್ಲ. ಕೃಷಿ ಬಿಕ್ಕಟ್ಟಿನಿಂದ ಬೆಳಲಿರುವ ಆತ್ಮಹತ್ಯೆ - ಹಸಿವಿನ ಸಾವಿಗೆ ಈಡಾದ ರೈತ - ಕೂಲಿಕಾರರ ಸಮೂಹದ ಸಮಸ್ಯೆಗಳ ಇತ್ಯರ್ಥಕ್ಕಾಗಲೀ, ಕೈಗಾರಿಕೆ ಬಿಕ್ಕಟ್ಟು ನಿವಾರಿಸಲು, ಪರಂಪರಾನುಗತ ಕೈಗಾರಿಕೆ ಉಳಿಸಲು ಈ ಸರ್ಕಾರದ ಕ್ರಮಗಳು ಅಷ್ಟಾಗಿ ಇಲ್ಲ.

ವಿಧಾನಸಭೆಯ ಈ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ರಾಜ್ಯಪಾಲರ ಭಾಷಣ ಇಂತಹ ಗಂಭೀರ ಪ್ರಶ್ನೆಗಳಿಗೆ ಯಾವುದೇ ಪರಿಹಾರ ಸೂಚಿಸಿಲ್ಲ.

ಮುಂಬರುವ ಬಜೆಟ್‌ನಲ್ಲಾದರೂ ಹಲವಾರು ಪರಿಹಾರಾತ್ಮಕ ಕ್ರಮಗಳು ಇರಬೇಕೆಂಬುದು ಜನತೆಯ ಅಗಾಧ ನಿರೀಕ್ಷೆಯಾಗಿದೆ. ಇಲ್ಲವಾದಲ್ಲಿ ಜನತೆಯ ಸಂಕಷ್ಟಗಳು ಹೆಚ್ಚುತ್ತ ಹೋಗಿ, ಬೆಳೆದ ಅತೃಪ್ತಿಯಿಂದ ಬಿಜೆಪಿಯ ಬೆಳವಣಿಗೆಗೆ ಇದು ಅವಕಾಶ ಮಾಡಿಕೊಡಲಿದೆ. ಕೋಮುವಾದಿ ಬಿಜೆಪಿಯನ್ನು ಅಧಿಕಾರದಿಂದ ದೂರವಿಡಲೆಂದೇ ಈ ಮೈತ್ರಿಕೂಟ ರಚಿತವಾಗಿದೆಯೆಂದು ಘೋಷಿಸಿರುವ ಸರ್ಕಾರ, ಆ ಉದ್ದೇಶವನ್ನೇ

ಪುಟ 9 ಕ್ಕೆ

ವಿಧಾನಸೌಧದ ಎದುರು ಗ್ರಾಮ ಪಂಚಾಯತ್ ನೌಕರರ ಧರಣಿ

ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನಕರರ ಸಂಘದ ರಾಜ್ಯ ಸಮಿತಿ ತೀರ್ಮಾನದಂತೆ ಜನವರಿ 3 ರಿಂದ 10ರವರೆಗೆ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯತ್ ಎದುರುಗಡೆ ಧರಣಿ ಪ್ರತಿಭಟನೆ, ಮುತ್ತಿಗೆಯಂತಹ ಕಾರ್ಯಕ್ರಮವನ್ನು 21 ಜಿಲ್ಲೆಗಳಲ್ಲಿ ಯಶಸ್ವಿಯಾಗಿ ನಡೆಸಲಾಗಿದೆ. 12 ಜಿಲ್ಲೆಗಳಲ್ಲಿ ಬಂಧನಕ್ಕೆ ಒಳಗಾಗಿದ್ದಾರೆ. 6000 ಜನ ಬಂಧನಕ್ಕೆ ಒಳಗಾಗಿದ್ದು, ಧರಣಿ ಮೆರವಣಿಗೆನ್ನು ನಡೆಸಿದ್ದಾರೆ. ಒಟ್ಟಾರೆ 18,000 ಜನ ಭಾಗವಹಿಸಿದ್ದಾರೆ. ಇದರ ಮುಂದುವರೆದ ಭಾಗವಾಗಿ ವಿಧಾನಸೌಧದ ಎದುರು ಜನವರಿ 31 ರಿಂದ ಅನಿರ್ಧಿಷ್ಟ ಧರಣಿ ನಡೆಸಲಾಯಿತು. ಮೊದಲನೆಯ ದಿನ ಮಂಡ್ಯ, ಕೋಲಾರ, ತುಮಕೂರು, ಬಳ್ಳಾರಿ, ಹಾಸನ ಜಿಲ್ಲೆಯಿಂದ 2,500 ಜನ ಭಾಗವಹಿಸಿದ್ದರು. ಅಂದು ರೈಲ್ವೆ ನಿಲ್ದಾಣದಿಂದ ಮೆರವಣಿಗೆ ಮುಖಾಂತರ ಬನ್ನಪ್ಪ ಪಾರ್ಕ್‌ನಲ್ಲಿ ಧರಣಿ ಪ್ರಾರಂಭಿಸಲಾಯಿತು. ಗ್ರಾಮೀಣ ಅಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಬಂದು ಮನವಿಯನ್ನು ಸ್ವೀಕರಿಸಿದರು.

1-2-05 ರಂದು ಸಂಜೆ ಸಚಿವರ ಕಛೇರಿಯಲ್ಲಿ ಸಭೆ ನಡೆಯಿತು. ಅಂದಿನ ಸಭೆಯಲ್ಲಿ ಪ್ರಮುಖ ಬೇಡಿಕೆಯಾದ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವಂತೆ ಕೇಳಲಾಯಿತು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಅಷ್ಟೊಂದು ವೇತನ ಹೆಚ್ಚಿಗೆ ಮಾಡಲು ಆಗುತ್ತಿಲ್ಲ. ಆದರೆ ಕನಿಷ್ಠ ವೇತನ ಜಾರಿ ಮಾಡುವುದಾಗಿ ತಿಳಿಸಿದರು.



ಎರಡನೇ ಬೇಡಿಕೆಯಾದ, ಬಡ್ತಿಯಲ್ಲಿ ತಿದ್ದುಪಡಿ ಮಾಡಿ ಬಾಲವಾಡಿ ಶಿಕ್ಷಕಿಯರು, ವಾಟರ್‌ಮನ್, ಇತರೆ ಸಿಬ್ಬಂದಿಗೂ ಎಸ್‌ಎಸ್‌ಎಲ್‌ಸಿ ಆಗಿದ್ದರೆ ಬಡ್ತಿ ನೀಡಲು ಒಪ್ಪಿಗೆ ಸೂಚಿಸಿದರು. ವಿಶ್ವಬ್ಯಾಂಕಿನ ನಿರ್ದೇಶನದಂತೆ ವಿದ್ಯುತ್ ಕಂಪನಿಗಳಿಗೆ 4.37 ಲಕ್ಷ ಪ್ರತಿ ಪಂಚಾಯತ್‌ಗಳಿಂದ ಅನುದಾನ ಕಡಿತ ಮಾಡಿ ಪಾವತಿಸುವ ಸರಕಾರದ ನಿರ್ಧಾರವನ್ನು ಕೈಬಿಡಬೇಕು ಅದರಲ್ಲಿ ಸಿಬ್ಬಂದಿ ವೇತನಕ್ಕೆ ಹಣ ನೀಡಬೇಕೆಂದು ಒತ್ತಾಯಿಸಲಾಯಿತು. ಈ ವಿಷಯ, ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯೊಡನೆ ಚರ್ಚೆ ಮಾಡುವುದಾಗಿ ತಿಳಿಸಿದರು. ಸ್ತ್ರೀಶಕ್ತಿ ಗುಂಪುಗಳಿಗೆ ಕರವಸೂಲಿ ಕೊಡುವವರನ್ನು ಕೈಬಿಡಲು ಕೇಳಿದಾಗ ಅವರು ಇದು ಸರಕಾರದ ಪಾಲಿಸಿ ನಾವು ಒತ್ತಾಯ ಮಾಡಿ ಸ್ತ್ರೀಶಕ್ತಿ ಗುಂಪುಗಳಿಗೆ ನೀಡುವುದಿಲ್ಲ. ಇದರಿಂದ ನಿಮಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವುದಾಗಿ ಆಶ್ವಾಸನೆ ನೀಡಿದರು. ಸಚಿವರು ನೀಡಿದ ಭರವಸೆಯ ಆಧಾರದಲ್ಲಿ ಜನವರಿ 31ರಿಂದ ಕೈಗೊಂಡ ಅನಿರ್ಧಿಷ್ಟ ಧರಣಿಯನ್ನು ಕೈಬಿಡಲಾಯಿತು. ದಿನಾಂಕ 1.02.2005 ರಂದು ಗದಗ, ಬೀದರ್‌ನಿಂದ 500 ಜನ ದಿನಾಂಕ 2.02.2005 ರಂದು ಮೈಸೂರು, ಹಾವೇರಿ, ಧಾರವಾಡ, ಶಿವಮೊಗ್ಗ, ಜಿಲ್ಲೆಗಳಿಂದ 600 ಜನ ಭಾಗವಹಿಸಿದ್ದರು.

ಅಕ್ಷರದಾಸೋಹ ನೌಕರರ ವಿಧಾನಸೌಧ ಚಲೋ

ಕರ್ನಾಟಕ ರಾಜ್ಯ ಅಕ್ಷರದಾಸೋಹ ನೌಕರರು ತಮ್ಮ ಬೇಡಿಕೆಗಳಿಗಾಗಿ ಒತ್ತಾಯಿಸಿ ಜನವರಿ 28 ವಿಧಾನಸೌಧ ಚಲೋ ಕಾರ್ಯಕ್ರಮವನ್ನು ಸಿಐಟಿಯು ನೇತೃತ್ವದಲ್ಲಿ ಹಮ್ಮಿಕೊಂಡಿದ್ದರು. ಮಕ್ಕಳಲ್ಲಿ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಲು, ಶಾಲೆಯಲ್ಲಿ ಅವರ ಹಾಜರಾತಿ ಮಟ್ಟವನ್ನು ಸುಧಾರಿಸುವ ಸಲುವಾಗಿ ಮಧ್ಯದಲ್ಲಿಯೇ ಶಾಲೆ ಬಿಡುವ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡುವ ಸಲುವಾಗಿ ಮತ್ತು ಮಕ್ಕಳ ಕಲಿಕಾ ಸಾಧನಾಮಟ್ಟವನ್ನು ವೃದ್ಧಿಸುವುದನ್ನು ಗುರಿಯಾಗಿಟ್ಟುಕೊಂಡಿರುವ ಯೋಜನೆಯೇ ಅಕ್ಷರದಾಸೋಹ.

ಆದರೆ ಈ ಯೋಜನೆಯನ್ನು ಜಾರಿ ಮಾಡುವ ಮೊದಲು ಅದರ ಸಾಧಕಬಾಧಕಗಳನ್ನು ಅರಿಯದೇ ಇರುವುದು ವಿಷಾದನೀಯ. ಈ ಯೋಜನೆಯಡಿ ಕೆಲಸ ಮಾಡುವ ಮಹಿಳೆಯರ ಸಂಖ್ಯೆ ಸುಮಾರು 96 ಸಾವಿರ. ಈ ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರಿ ಶಾಲೆಗೆ ಹೋಗುವ ಮಕ್ಕಳ ತಾಯಿ-ತಂದರೆಯರು ಕೃಷಿ ಕೂಲಿಕಾರರು, ಬಡರೈತರು, ದಿನಗೂಲಿ ನೌಕರರು ಆಗಿರುತ್ತಾರೆ. ಇದೇ ಜನರೇ ಇಂದು ಈ ಯೋಜನೆಯಲ್ಲಿ ಮುಖ್ಯ ಅಡುಗೆ ಹಾಗೂ ಸಹಾಯಕರಾಗಿ ದುಡಿಯುತ್ತಿದ್ದಾರೆ. ಇವರನ್ನು ನೇಮಕ ಮಾಡುವಾಗಲೇ ಸರ್ಕಾರ ಈ ರೀತಿಯ ಸುತ್ತೋಲೆಗಳನ್ನು ಹೊರಡಿಸುವ ಮುಖಾಂತರ ಬರೀ 10 ತಿಂಗಳು ಮಾತ್ರವೇ ಕೆಲಸ. ಮುಖ್ಯ ಅಡುಗೆಯವರಿಗೆ ತಿಂಗಳಿಗೆ ರೂ.650 ಸಹಾಯಕಯರಿಗೆ ರೂ.450-300 ರೂ, ವೇತನ ಮಾತ್ರವೇ ಉಳಿದ ಯಾವುದೇ ಸೌಲಭ್ಯಗಳಿಲ್ಲ ಎಂಬ ಷರತ್ತನ್ನು ಹಾಕಿದೆ. ಇದರಿಂದಲೇ ಸ್ಪಷ್ಟವಾಗುತ್ತದೆ. ಸರ್ಕಾರವು ಈ ಮಹಿಳೆಯರ ಬಗ್ಗೆ ಕಿಂಚಿತ್ತು ಕಾಳಜಿವಹಿಸದಿರುವುದು, ಇದನ್ನು ಮನಗಂಡು ಕರ್ನಾಟಕ ರಾಜ್ಯ ಅಕ್ಷರದಾಸೋಹ ನೌಕರರು ಈ ಕೆಳಕಂಡ ಬೇಡಿಕೆಗಳಿಗಾಗಿ ಒತ್ತಾಯಿಸಿ ವಿಧಾನಸೌಧ ಚಲೋ ಕಾರ್ಯಕ್ರಮ ನಡೆಸಿ ಸರ್ಕಾರದ ಗಮನ ಸೆಳೆದರು. ಈ ಬೃಹತ್ ರ್‍ಯಾಲಿ ನಗರದ ರೈಲು ನಿಲ್ದಾಣದಿಂದ 12 ಗಂಟೆಗೆ ಹೊರಟಿತು. ಈ ರ್‍ಯಾಲಿಗೆ ಕರ್ನಾಟಕದ ಎಲ್ಲಾ ಜಿಲ್ಲೆಗಳಿಂದ 5000 ಮಹಿಳೆಯರು ಆಗಮಿಸಿದ್ದರು. ರ್‍ಯಾಲಿಯು ಸರ್ಕಾರಿ ಆರ್ಟ್ಸ್ ಕಾಲೇಜಿನ ಆವರಣದಲ್ಲಿ ಸೇರಿ ಬಹಿರಂಗ ಸಭೆಯೊಂದಿಗೆ ಮುಕ್ತಾಯವಾಯಿತು.

ಸಭೆಯನ್ನುದ್ದೇಶಿಸಿ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಲೀಲಾವತಿ ಯವರು ಪ್ರಸ್ತಾವನೆ ಮಾಡಿದರು. ಕಾರ್ಮಿಕರ ಕರೆಗೆ ಓಗೊಟ್ಟು ಬಹಿರಂಗ ಸಭೆಗೆ ಆಗಮಿಸಿದ ಶಿಕ್ಷಣ ಇಲಾಖಾ ಸಚಿವರಾದ ರಾಮಲಿಂಗಾರೆಡ್ಡಿಯವರು ನಿಮ್ಮ ಬೇಡಿಕೆಗಳ ಬಗ್ಗೆ ನಾನು ಖಂಡಿತ ಗಮನ ಹರಿಸಿ ನಿಮ್ಮ ಬೇಡಿಕೆಗಳನ್ನು ಈಡೇರಿಸಲು ಪ್ರಯತ್ನಿಸುತ್ತೇನೆ, ಇನ್ನೊಂದು ವಾರದಲ್ಲಿ ಸಿಐಟಿಯು ಮುಖಂಡರುಗಳೊಡನೆ ಈ ವಿಚಾರವಾಗಿ ಮಾತನಾಡುತ್ತೇನೆ ಎನ್ನುವ ಭರವಸೆಯನ್ನು ಕೊಟ್ಟರು. ನಂತರ ಮಾತನಾಡಿದ ಸಿಪಿಐ(ಎಂ) ಪಕ್ಷದ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿಯವರು ಕನಿಷ್ಠ ಸೌಲಭ್ಯಗಳು ಇಲ್ಲದೆ ದುಡಿಯುತ್ತಿರುವ ನೌಕರರ ಬಗ್ಗೆ ಸರ್ಕಾರ ಕೂಡಲೇ ಗಮನ ಹರಿಸುವಂತೆ ಪ್ರಯತ್ನಿಸುತ್ತೇನೆ ಎಂದರು. ಸಿಐಟಿಯುವಿನ ರಾಜ್ಯ ಪದಾಧಿಕಾರಿಗಳಾದ ಇ.ಕೆ.ಎನ್.ರಾಜನ್ ಮತ್ತು ಗ್ರಾಮ ಪಂಚಾಯಿತಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷರಾದ ಪ್ರಕಾಶ್ ಮಾತನಾಡಿ ಸರ್ಕಾರವು ಕೂಡಲೇ ನಮ್ಮ ಬೇಡಿಕೆಗಳಿಗೆ ಸ್ಪಂದಿಸಬೇಕು. ಕನಿಷ್ಟ ಸೌಲಭ್ಯಗಳಾದರೂ ಸಿಗುವಂತಾಗಬೇಕು ಎಂದರು.



ಸಿಐಟಿಯುವಿನ ರಾಜ್ಯ ಪದಾಧಿಕಾರಿಗಳಾದ ರಮಣಿಯವರು ಮಾತನಾಡುತ್ತಾ ಅಕ್ಷರದಾಸೋಹ ನೌಕರರು ಇನ್ನು ಹೆಚ್ಚಿನ ರೀತಿಯಲ್ಲಿ ಸಂಘಟಿತರಾಗಬೇಕು. ನಮ್ಮ ಕೂಗು ಸರ್ಕಾರಕ್ಕೆ ಕೇಳಿಸುವಂತೆ ಮಾಡಬೇಕು ಎಂದು ಕರೆ ಇತ್ತರು.

ನಂತರ ಬಳ್ಳಾರಿ ಜಿಲ್ಲೆಯ ನಾಗರತ್ನ, ದಕ್ಷಿಣ ಕನ್ನಡ ಜಿಲ್ಲೆಯ ಪದ್ಮಾವತಿ ಶೆಟ್ಟಿ, ಕೋಲಾರ ಜಿಲ್ಲೆಯ ಗೀತಾ ಮತ್ತು ತುಮಕೂರು ಜಿಲ್ಲೆಯ ರವೀಂದ್ರ ಇವರುಗಳು ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಂಘದ ಅಧ್ಯಕ್ಷರಾದ ಎಸ್.ವರಲಕ್ಷ್ಮಿ ಮಾತನಾಡಿ ನಾವುಗಳ ಇನ್ನು ಹೆಚ್ಚಿನ ರೀತಿಯಲ್ಲಿ ಹೋರಾಟಕ್ಕೆ ಸನ್ನದ್ದರಾಗಬೇಕು. ಸರ್ಕಾರವು ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದ ಪಕ್ಷದಲ್ಲಿ ನಾವು ಮುಂದೆ ಉಗ್ರವಾದ ಹೋರಾಟಕ್ಕೆ ಸಿದ್ಧರಾಗಬೇಕೆಂದರು. ಬಸಮ್ಮ . ವಂದನಾರ್ಪಣೆ ಮಾಡುವುದರೊಂದಿಗೆ ಬಹಿರಂಗ ಸಭೆ ಮುಕ್ತಾಯವಾಯಿತು.

ಬೇಡಿಕೆ

ಅಕ್ಷರದಾಸೋಹ ನೌಕರರಿಗೆ '10 ತಿಂಗಳು ಮಾತ್ರವೇ' ಕೆಲಸ ಎಂಬ ನಿಬಂಧನೆಯನ್ನು ತೆಗೆಯಬೇಕು.

ಈ ನೌಕರರನ್ನು ಶಿಕ್ಷಣ ಇಲಾಖೆಯ ಆಡಳಿತ ವ್ಯವಸ್ಥೆಗೆ ತರುವುದು.

ನೌಕರರಿಗೆ ಕೆಲಸದ ಭದ್ರತೆ ಒದಗಿಸುವುದು.

ತಿಂಗಳಿಗೆ ನೀಡುತ್ತಿರುವ ಸಂಬಾವನೆಯನ್ನು ಕನಿಷ್ಠ ಪ್ರತಿ ಹಂತಕ್ಕೂ 500 ರೂ.ಗಳನ್ನು ಹೆಚ್ಚಿಸುವುದು. ಈ ನೌಕರರಿಗೆ ಹೆರಿಗೆ ಭತ್ಯೆ, ಬೇಸಿಗೆ ರಜೆ, ಇತರೆ ಸರ್ಕಾರಿ ರಜೆಗಳನ್ನು ನೀಡುವುದು ಇತ್ಯಾದಿ.

ಸಿ.ಇ.ಟಿ ಬಿಕ್ಕಟ್ಟು ಶಾಶ್ವತ ಪರಿಹಾರಕ್ಕೆ ಆಗ್ರಹಿಸಿ ಸಿಪಿಐ(ಎಂ) ಪ್ರತಿಭಟನೆ

ಬೆಂಗಳೂರಿನಲ್ಲಿ ನಡೆಯುತ್ತಿದ್ದ ವಿವಿಧ ರಾಜ್ಯಗಳ ಶಿಕ್ಷಣ ಸಚಿವರುಗಳ ಸಮ್ಮೇಳನದಲ್ಲಿ ವೃತ್ತಿಶಿಕ್ಷಣದ ಬಿಕ್ಕಟ್ಟಿಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವ ರೀತಿಯಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಲು ಒತ್ತಡವನ್ನು ಹೇರುವ ಸಲುವಾಗಿ ಜನವರಿ 11 ರಂದು ಬೆಂಗಳೂರಿನ ಮೈಸೂರ್ ಬ್ಯಾಂಕ್‌ವೃತ್ತದಲ್ಲಿ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ಬೃಹತ್ ಪ್ರತಿಭಟನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಈ ಪ್ರತಿಭಟನಾ ಕಾರ್ಯಕ್ರಮದಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್‌ರವರು ಮಾತನಾಡಿ ಕೇಂದ್ರದಲ್ಲಿ ಆರು ವರ್ಷಗಳ ಕಾಲ ಅದಿಕಾರದಲ್ಲಿದ್ದ ಎನ್‌ಡಿಎ ಸರ್ಕಾರವು ವೃತ್ತಿ ಶಿಕ್ಷಣದ ಬಿಕ್ಕಟ್ಟನ್ನು ಬಗೆಹರಿಸಲು ಮುಂದಾಗಲಿಲ್ಲ. ಆದರೆ ಸರ್ಕಾರ ಬದಲಾದ ತಕ್ಷಣ ವೃತ್ತಿಶಿಕ್ಷಣ ಬಿಕ್ಕಟ್ಟಿಗೆ ಕೇಂದ್ರದಲ್ಲಿ ಶಾಸನ ರೂಪಿಸಬೇಕು ಎಂದು ಹೇಳುವ ಮೂಲಕ ಅದರ ಬಾಲಂಗೋಚಿ ಸಂಘಟನೆಯಾದ ಎ.ಬಿ.ವಿ.ಪಿಯ ಮೂಲಕ ವೃತ್ತಿಶಿಕ್ಷಣಕ್ಕೆ ಶಾಶ್ವತ ಪರಿಹಾರಕ್ಕಾಗಿ ಹೋರಾಟ ನಡೆಸಲು ಹೋಗುತ್ತಿದ್ದ ವಿದ್ಯಾರ್ಥಿಗಳನ್ನು ತಡೆಯುವ ಕೆಲಸವನ್ನು ಮಾಡುತ್ತಿದೆ. ಇದರಲ್ಲೇ ಅರ್ಥವಾಗುತ್ತದೆ. ಅದರ ಮೂಲ ಉದ್ದೇಶವೇನು ಎಂಬುದು ಎಂದು ಬಿಜೆಪಿ ಮತ್ತು ಎಬಿವಿಪಿಗಳ ನಿಲುವನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ನಂತರ ಮಾತನಾಡಿದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಹೆಚ್.ಎನ್ ಗೋಪಾಲಗೌಡರು ವೃತ್ತಿಶಿಕ್ಷಣದ ಕಾಲೇಜುಗಳನ್ನು ನಡೆಸುತ್ತಿರುವುದು ಕಾಂಗ್ರೆಸ್ ಮತ್ತು ಬಿಜೆಪಿ ಮುಖಂಡರುಗಳೇ ಆದ್ದರಿಂದ ಇದಕ್ಕೆ ಶಾಸನವನ್ನು ತಂದರೆ ತಮ್ಮ ಬೇಳೆ ಬೇಯುವುದಿಲ್ಲ ಎಂದು ಬಿಜೆಪಿ ಕಾಂಗ್ರೆಸ್ ಮುಖಂಡರುಗಳು ಶಾಸನ ಬರದಂತೆ ಒತ್ತಡವನ್ನು ಹೇರುತ್ತಿದ್ದಾರೆ ಎಂದರು.

ಪಕ್ಷದ ರಾಜ್ಯಸಮಿತಿ ಸದಸ್ಯರು ಯುವ ಸಂಘಟನೆ ಮುಖಂಡರು ಆದ ಕೆ.ಎನ್.ಉಮೇಶ್ ರವರು ಮಾತನಾಡಿ ಇಂದು ವೃತ್ತಿಶಿಕ್ಷಣ ಈ ಹಂತಕ್ಕೆ ಹೆಸರಿನಲ್ಲಿ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವುದೇ ಕಾರಣ. ಒಂದೊಂದು ಜಾತಿಯ ಹೆಸರಿನಲ್ಲಿ ಒಂದೊಂದು ಮಠಗಳನ್ನು ಸ್ಥಾಪನೆ ಮಾಡಿಕೊಂಡು ಈ ಮಠಗಳಿಂದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಕೊಂಡು ಶಿಕ್ಷಣ ಕೊಡುವ ನೆಪದಲ್ಲಿ ಬಡವರ ರಕ್ತವನ್ನು ಹೀರುತ್ತಿದ್ದಾರೆ ಎಂದು ಹೇಳಿದರು.

ಜಿಲ್ಲಾ ಕಾರ್ಯದರ್ಶಿಯಾದ ಪ್ರಕಾಶ್ ಕೆ.ರವರು ಮಾತನಾಡಿ ಈಗ ಬೆಂಗಳೂರಿನಲ್ಲಿ ನಡೆದಶಿಕ್ಷಣ ಸಚಿವರುಗಳ ಸಮ್ಮೇಳನದಲ್ಲಿ ಖಾಸಗಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುವ ಪ್ರಸ್ತಾಪವನ್ನು ಇಟ್ಟಿದ್ದಾರೆ. ಈಗೇನಾದರೂ ಆದರೆ ಎಲ್ಲಾ ಶಿಕ್ಷಣ ಸಂಸ್ಥೆಗಳು ಒಂದೊಂದು ವಿಶ್ವವಿದ್ಯಾನಿಲಯಗಳಾಗಿ ಮಾರ್ಪಾಡಾಗುವ ಸಂಭವವಿದೆ. ಅಲ್ಲದೆ, ಈ ಶಿಕ್ಷಣ ರಂಗಕ್ಕೆ ಉದ್ಯಮಿಗಳು ಪ್ರವೇಶ ಮಾಡಿ ಸುಲಭವಾಗಿ ಹಣ ಮಾಡುವ ಆಸೆಯಿಂದ ಫ್ಯಾಕ್ಟರಿಗಳನ್ನು ಬಿಟ್ಟು ಒಂದೊಂದು ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುವ ಅಪಾಯವಿದೆ ಎಂದು ಎಚ್ಚರಿಸಿದರು. ○

ಜಾತ್ಯಾತೀತ ಪಕ್ಷಗಳು ಸಂಯಮದಿಂದ ವರ್ತಿಸಬೇಕು

ಹರ್ಕಿಶನ್ ಸಿಂಗ್‌ಸುರ್ಜಿತ್



ಹರ್ಯಾಣಾ, ಬಿಹಾರ, ಝಾರ್ಖಂಡ್ ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳ ಪ್ರಕ್ರಿಯೆ ಅಂತಿಮ ಹಂತ ತಲುಪಿದ್ದು ಆಯಾ ರಾಜ್ಯಗಳ ರಾಜಕೀಯ ಸ್ಥಿತಿಗಳತ್ತ ಚುನಾವಣಾ ಪೂರ್ವದ ಆರಂಭಿಕ ನೋಟ

ಹರ್ಯಾಣಾ, ಬಿಹಾರ್ ಮತ್ತು ಝಾರ್ಖಂಡ್‌ನ ವಿಧಾನಸಭಾ ಚುನಾವಣೆಗಳ ಪ್ರಕ್ರಿಯೆ ನಡೆದಿದ್ದು. ಇಡೀ. ಹರ್ಯಾಣದಲ್ಲಿ ಮುಂದಿನ ತಿಂಗಳ 3 ರಂದು ಚುನಾವಣೆ ನಡೆದರೆ, ಉಳಿದ ಎರಡು ರಾಜ್ಯಗಳಲ್ಲಿ ಅದೇ ದಿನ ಮೊದಲ ಹಂತದ ಚುನಾವಣೆ ನಡೆಯಲಿದೆ.

ಈ ರಾಜ್ಯಗಳಲ್ಲಿ ಸಹಜವಾಗಿಯೇ ಬಿರುಸಿನ ಚಟುವಟಿಕೆಗಳು ಆರಂಭವಾಗಿವೆ. ಹರ್ಯಾಣಾದಲ್ಲಿ ಪರಿಸ್ಥಿತಿ ಸುಮಾರಾಗಿ ಸ್ಪಷ್ಟವಾಗಿದೆಯೆನ್ನಬಹುದು. ಅಲ್ಲಿ ಕಾಂಗ್ರೆಸ್ ಮತ್ತು ಅಧಿಕಾರದಲ್ಲಿರುವ ಐಎನ್‌ಎಲ್‌ಡಿಯು ನಡುವೆ ನೇರ ಹಣಾಹಣಿಯಿದೆ. ಬಿಜೆಪಿ ಈ ಬಾರಿ ಏಕಾಂಗಿಯಾಗಿ ಕಣಕ್ಕಿಳಿದಿದೆ. ಇದರಿಂದ ಐಎನ್‌ಎಲ್‌ಡಿಗೆ ತೊಂದರೆಯಾಗಬಹುದು. ಆದರೆ ಅದಕ್ಕನುಗುಣವಾಗಿ ಬಿಜೆಪಿಗೇನು ಪ್ರಯೋಜನವಾಗಲಿಕ್ಕಿಲ್ಲ. ಚೌಧುರಿ ಬನ್ಸಿಲಾಲ್ ತನ್ನ ಹರ್ಯಾಣಾ ವಿಕಾಸ್ ಪಾರ್ಟಿಯನ್ನು ವಿಸರ್ಜಿಸಿ ಕಾಂಗ್ರೆಸ್ಸಿಗೆ ಮತ್ತೆ ಸೇರಿರುವುದರಿಂದಲೂ ಕಾಂಗ್ರೆಸ್ಸಿಗೆ ಪ್ರಯೋಜನವಾಗುತ್ತದೆ. ಕಳೆದ ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಇಲ್ಲಿ 10 ರಲ್ಲಿ 9 ಸ್ಥಾನ ಪಡೆದಿತ್ತು ಎಂಬುದನ್ನು ಗಮನಿಸಬಹುದು.


ಆದರೆ ಉಳಿದೆರಡು ರಾಜ್ಯಗಳಲ್ಲಿ ಪರಿಸ್ಥಿತಿ ಇಷ್ಟು ಸರಳವಾಗಿಲ್ಲ. ಯಾವುದೇ ಒಂದು ಪಕ್ಷ ಅಧಿಕಾರಕ್ಕೆ ಬರುವ ಸ್ಥಿತಿಯಲ್ಲಿಲ್ಲ. ಬಿಹಾರವನ್ನು ಇಬ್ಭಾಗ ಮಾಡಿದಾಗ ಝಾರ್ಖಂಡ್ ಬಿಜೆಪಿಯ ಮಡಿಲಿಗೆ ಬಂದು ಬಿದ್ದಂತಾಗಿತ್ತು. ಕಳೆದ ವಿಧಾನಸಭಾ ಚುನಾವಣೆಗಳಲ್ಲಿ ಅವಿಭಜಿತ ಬಿಹಾರಿನಲ್ಲಿ ಬಿಜೆಪಿ, ಜೆಡಿ(ಯು) ಮತ್ತು ಜೆಎಂಎಂ (ಝಾರ್ಖಂಡ್ ಮುಕ್ತಿ ಮೋರ್ಚಾ) ಮೈತ್ರಿಯಿತ್ತು. ಅವು ಬಹಳಷ್ಟು ಸ್ಥಾನಗಳನ್ನು ಪಡೆದವು. ಆದರೆ ಬಿಹಾರದ ಇಬ್ಭಾಗ ಬಿಜೆಪಿ ಮತ್ತು ಜೆಎಂಎಂ ನಡುವೆ ಮನಸ್ತಾಪ ತಂದಿತು. ಈ ರಾಜ್ಯದ ರಚನೆ ಮುಂಚೂಣಿಯಲ್ಲಿದ್ದ ತನಗೆ ಈ ರಾಜ್ಯದ ಸರಕಾರದ ನೇತೃತ್ರ ಸಿಗಬೇಕಾಗಿತ್ತು ಎಂಬುದು ಜೆಎಂಎಂ ಭಾವನೆಯಾಗಿತ್ತು. ಆದರೆ ಬಿಜೆಪಿ ತನ್ನದೇ ಸರಕಾರ ರಚಿಸುವ ಹಠ ತೊಟ್ಟಿತ್ತು. ಇದರಿಂದ ಗಂಭೀರ ವಿವಾದವುಂಟಾಗಿ ಈ "ಭಿನ್ನ ರೀತಿಯ ಪಕ್ಷ" ಅತ್ಯಂತ ಅನೀತಿಯುತವಾಗಿ ವರ್ತಿಸಿ ಅಧಿಕಾರ ಗಿಟ್ಟಿಸಿಕೊಂಡಿತು.

ಪ್ರತ್ಯುತ್ತರವಾಗಿ ಮೇ 2004 ರ ಲೋಕಸಭಾ ಚುನಾವಣೆಗಳಲ್ಲಿ ಅವಕಾಶ ಸಿಕ್ಕಾಗ ಜೆಎಂಎಂ ಪಕ್ಷವು ಕಾಂಗ್ರೆಸ್ ಮತ್ತು ಇತರ ಪಕ್ಷಗಳೊಂದಿಗೆ ಸೇರಿಕೊಂಡಿತು. ಇದರಿಂದ ಬಿಜೆಪಿ ಮತ್ತು ಅವರ ಮಿತ್ರರಿಗೆ ಭಾರೀ ಹೊಡೆತವಾಯಿತು. ಈಗಲೂ ಕಾಂಗ್ರೆಸ್, ಆರ್‌ಜೆಡಿ, ಜೆಎಂಎಂ ಮತ್ತು ಎಡಪಕ್ಷಗಳು ಸೇರಿದರೆ ಬಿಜೆಪಿ ಮತ್ತು ಅದರ ಮಿತ್ರರನ್ನು ಸಂಪೂರ್ಣ ಪರಾಭವಗೊಳಿಸಲು ಸಾಧ್ಯ.

ಬಿಹಾರದಲ್ಲಿ ಕಳೆದ ವಿಧಾನಸಭಾ ಚುನಾವಣೆಗಳ ಫಲಿತಾಂಶ ಕ್ಲಿಷ್ಟತರದ್ದಾಗಿತ್ತು. ಆಗ ಬಿಜೆಪಿ ನೇತೃತ್ವದ ಎನ್‌ಡಿಎ ಕೇಂದ್ರದಲ್ಲಿ ಅಧಿಕಾರದಲ್ಲಿತ್ತು. ಪಾಟ್ನಾದ ರಾಜಭವನದಲ್ಲಿ ಇದ್ದದ್ದು ಒಬ್ಬ ಬಿಜೆಪಿ ಮನುಷ್ಯ. ಆಳುವ ಆರ್‌ಜೆಡಿಗೆ ಸ್ಪಷ್ಟ ಬಹುಮತ ಸಿಕ್ಕಿರಲಿಲ್ಲವಾದ್ದರಿಂದ ರಾಜ್ಯಪಾಲರಿಗೆ ಹೊಲಸು ಆಟ ಆಡಲು ಅವಕಾಶವಾಯಿತು. ಆತ ಜೆಡಿ(ಯು)ನ ನಿತೀಶ್‌ಕುಮಾರ್‌ಗೆ ಸರಕಾರ ರಚಿಸಲು ಆಹ್ವಾನ ನೀಡಿದರು. ಆದರೆ ನಿಗದಿತ ದಿನಾಂಕದೊಳಗೆ ಬಹುಮತ ಒಟ್ಟುಹಾಕಲು ಆತನಿಗೆ ಸಾಧ್ಯವಾಗಲಿಲ್ಲ. ಆದ್ದರಿಂದ ತನ್ನ ನಿಜಮುಖಂಡ ವಾಜಪೇಯಿ ಮಾಡಿಕೊಟ್ಟ ಉದಾಹರಣೆಯನ್ನೇ ಅನುಸರಿಸಿ ಒಂದು ವಾರದ ನಂತರ ವಿಧಾನಸಭೆಯನ್ನು ಎದುರಿಸದೆ ಓಡಿ ಹೋದರು.

ಇದರಿಂದ ಆರ್‌ಜೆಡಿ ನೇತೃತ್ವದಲ್ಲಿ ಕಾಂಗ್ರೆಸ್‌ನೊಂದಿಗೆ ಸಮ್ಮಿಶ್ರ ಸರಕಾರ ರಚನೆಯಾಗುವಂತಾಯಿತು. ಎಡಪಕ್ಷಗಳು ಕೋಮುವಾದಿ ಶಕ್ತಿಗಳನ್ನು ಅಧಿಕಾರದಿಂದ ಹೊರಗಿಡುವ ತಮ್ಮ ನೀತಿಗನುಗುಣವಾಗಿ ಹೊರಗಿನಿಂದ ಈ ಸರಕಾರಕ್ಕೆ ಬೆಂಬಲ ನೀಡಿದವು.

ಹೀಗೆ ಈ ಎರಡು ರಾಜ್ಯಗಳಲ್ಲಿ ಬಲಾಬಲಗಳ ಪರೀಕ್ಷೆಯಿರುವುದು ಮೈತ್ರಿಕೂಟಗಳ ನಡುವೆಯೆಂಬುದು ಸ್ಪಷ್ಟ.


ಲಾಲೂ ಪ್ರಸಾದ್ ಯಾದವ್


ಸೋನಿಯಾ


ಪಾಸ್ವಾನ್

ಸಂಯಮ ಅಗತ್ಯ

ಬಿಹಾರದಲ್ಲಿ ಕಳೆದ ವಿಧಾನಸಭಾ ಚುನಾವಣೆಗಳಲ್ಲಿ ಎನ್‌ಡಿಎ ಸುಮಾರಾಗಿ ಬಹುಮತ ಗಳಿಸುವ ಸಮೀಪ ಬಂದೇ ಬಿಟ್ಟಿತ್ತು ಎಂಬುದನ್ನು ನೆನಪಿಸಿಕೊಳ್ಳುವುದು ಅಗತ್ಯ. ಕೆಲವು ಎಂಎಲ್‌ಎಗಳು ಆಕಡೆ ಹೋಗಿದ್ದರೆ ಎನ್‌ಡಿಎ ಸರಕಾರವೇ ಆಗುತ್ತಿತ್ತು. ಅದೃಷ್ಟವಶಾತ್ ಹಾಗಾಗಲಿಲ್ಲ. ಆರ್‌ಜೆಡಿ ಕೂಡಾ ತಾನೊಂದೇ ಅಧಿಕಾರ ನಡೆಸುವ ಸ್ಥಿತಿಯಲ್ಲಿರಲಿಲ್ಲ. ಅದರ ಹಿಂದಿನ ಸೆಪ್ಟೆಂಬರ್ 1999 ರ ಚುನಾವಣೆಗಳಲ್ಲಿ ಆರ್‌ಜೆಡಿ ಸ್ಥಾನಗಳ ಸಂಖ್ಯೆ ಕನಿಷ್ಟಕ್ಕಿಳಿದಿತ್ತು.

ಅಂದರೆ ಇತರ ಪಕ್ಷಗಳ ದಾವೆಗಳು ವಾಸ್ತವಿಕವಾಗಿರಬೇಕೆಂಬುದು ನಿಜವಾದರೂ ಆರ್‌ಜೆಡಿ ಕೂಡಾ ಹೊಂದಿಕೊಂಡು ಹೋಗಬೇಕಾಗುತ್ತದೆ ಎಂಬುದು ಸ್ಪಷ್ಟ. ಬಿಹಾರದಲ್ಲಾಗಲೀ ಝಾರ್ಖಂಡ್‌ನಲ್ಲಾಗಲಿ ಎಲ್ಲಾ ಜಾತ್ಯಾತೀತ ಪಕ್ಷಗಳು ತಾವು ಕೋಮುವಾದಿ ಶಕ್ತಿಗಳನ್ನು ಎದುರಿಸಿ ಸೋಲಿಸ ಬೇಕಾಗಿದೆ ಎಂಬ ಮೂಲಭೂತ ಗುರಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಸಂಘಪರಿವಾರದ ಪ್ರಯತ್ನ

ಸಂಘಪರಿವಾರ ಮತ್ತೆ ಒಂದಾಗಲು ಪ್ರಯತ್ನಿಸುತ್ತಿರುವುದರಿಂದ ಇದು ಅಗತ್ಯ ನಿಜ, ಸಂಘ ಪರಿವಾರ ತನ್ನ ಹತಾಶೆ ಹಾಗೂ ಆಂತರಿಕ ಭಿನ್ನಾಭಿಪ್ರಾಯಗಳನ್ನು 'ನಿವಾರಿಸಿಕೊಳ್ಳುವುದು ಇನ್ನೂ ಸಾಧ್ಯವಾಗಿಲ್ಲ. ಆದರೆ ಅತ್ಯಂತ ಹೀನಕೋಮುವಾದಿ ಆಧಾರದಲ್ಲಿ ಅಣಿನೆರೆಸಲು ಪ್ರಯತ್ನಿಸುತ್ತಿದೆ. ದೇಶದ ದುರ್ದೈವವೆಂದರೆ ಜನಗಳ ನೈಜ ಹಿತಾಸಕ್ತಿಗಳು, ದೇಶದ ಐಕ್ಯತೆ ಮತ್ತು ಜಾತ್ಯಾತೀತ ರಚನೆಗಿಂತ ಅಧಿಕಾರದ ಕುರ್ಚಿಗಳೇ ಮುಖ್ಯವಾಗಿರುವ ಕೆಲವು ಮಿತ್ರರನ್ನು ಪಡೆಯಲು ಬಿಜೆಪಿಗೆ ಸಾಧ್ಯವಾಗಿದೆ.

ಜೆಡಿ(ಯು) ಇಂತಹ ಒಂದು ಪಕ್ಷ. ಅದರ ಮುಖಂಡರಿಗೆ ಬಿಹಾರ, ಝಾರ್ಖಂಡ್‌ಗಳಲ್ಲಿ ಸ್ವಲ್ಪ ಮಟ್ಟಿನ ಜಾತಿ-ಆಧಾರಿತ ಬೆಂಬಲವಿದೆ. ಉದಾ: ನಿತೀಶ್‌ಕುಮಾರ್ ಜಾರ್ಜ್ ಫರ್ನಾಂಡಿಸ್‌ರಂತಹ ಚುಕ್ಕಾಣಿಯಿಲ್ಲದವರು ಇದ್ದಾರೆ. ಈ ಜೆಡಿ(ಯು) ಮುಖಂಡರ ಅಜೆಂಡಾ ಒಂದೇ-ಹೇಗಾದರೂ ಮಾಡಿ ಲಾಲೂ ಪ್ರಸಾದ್ ಯಾದವ್‌ರನ್ನು, ಅವರ ಆರ್‌ಜೆಡಿಯನ್ನು ಸೋಲಿಸುವುದು. ಅವರ ಎಲ್ಲಾ ಕಸರತ್ತುಗಳು ಇದೊಂದೇ ಉದ್ದೇಗ ಹೊಂದಿವೆ.

ನಿತೀಶ್ ಕುಮಾರ್‌ರವರು ಬಿಜೆಪಿ ತನ್ನ ಕೋಮುವಾದಿ ನೀತಿಗಳಿಗೆ ಹಿಂದಿರುಗುವುದನ್ನು ಕಂಡರೆ ತಮ್ಮ ಪಕ್ಷ ಅದರೊಂದಿಗೆ ಸಂಬಂಧ ಕಡಿದುಕೊಳ್ಳುವುದಾಗಿ ಹೇಳಿದರು. ಅದೇ ರೀತಿಯಲ್ಲಿ ಅವರು ಬಿಜೆಪಿಯೊಂದಿಗೆ ಮೈತ್ರಿ ಈ ಎರಡು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳವರೆಗಾದರೂ ಮುಂದುವರಿಯುತ್ತದೆ ಎಂದರು. ಅತ್ತ ಫರ್ನಾಂಡಿಸ್ ಬಿಜೆಪಿಯ ಹೇಳಿಕೆಗಳಲ್ಲಿ ಕೋಮುವಾದಿಯಾದದ್ದು ಏನೂ ಇಲ್ಲ ಎಂದು ಸರ್ಟಿಫಿಕೇಟ್ ನೀಡಿದರು.

ಈಗ ಅದೇ ಜೆಡಿ(ಯು) ಮುಖಂಡರು ರಾಮ್‌ವಿಲಾಸ್ ಪಾಸ್ವಾನ್‌ರನ್ನು ಸೆಳೆದುಕೊಂಡು ಲಾಲೂ ಪ್ರಸಾದ್ ವಿರುದ್ಧ ಮಹಾಮೈತ್ರಿಕೂಟ ರಚಿಸುವ ಶತಪ್ರಯತ್ನ ನಡೆಸಿದರು. ಪಾಸ್ವಾನ್‌ರ ಎಲ್‌ಜೆಪಿಗೆ ಬಿಹಾರದಲ್ಲಿ ಸೀಮಿತ ಬೆಂಬಲ ಇದೆ. 1999ರ ಲೋಕಸಭೆ ಚುನಾವಣೆಗಳಲ್ಲಿ ಅದು ಎನ್‌ಡಿಎ ಸೇರಿತ್ತು. ಆದರೆ 2002 ರಲ್ಲಿ ಗುಜರಾತ್‌ನಲ್ಲಿ ಮುಸ್ಲೀಮರ ಸಾಮೂಹಿಕ ಹತ್ಯೆಗಳ ನಂತರ ಹೊರಬಂದಿತ್ತು. 2004 ರ ಲೋಕಸಭಾ ಚುನಾವಣೆಗಳಲ್ಲಿ ಆರ್‌ಜೆಡಿ ಮತ್ತು ಕಾಂಗ್ರೆಸ್ಸಿನೊಂದಿಗೆ ಸೇರಿಕೊಂಡಿತ್ತು. ಈಗ ಅದು ಕೇಂದ್ರದಲ್ಲಿ ಯುಪಿಎ ಅಂಗಪಕ್ಷ.



ಆದರೆ ಅವರಿಗೂ ಲಾಲೂ ಪ್ರಸಾದ್‌ರಿಗೂ ಮನಸ್ತಾಪವಿರುವುದರಿಂದ ನಿತೀಶ್ ಕುಮಾರ್ ಅವರನ್ನು ಸೆಳೆಯಲು ಪ್ರಯತ್ನಿಸುತ್ತಿದ್ದರು. ಇದರಲ್ಲಿ ಪರದೆಯ ಹಿಂದೆ ಬಿಜೆಪಿ ಅಧ್ಯಕ್ಷ ಅಡ್ವಾಣಿಯವರಿದ್ದಾರೆ ಎಂಬುದು ಎಲ್ಲರಿಗೂ ಗೊತ್ತು. ನಿತೀಶ್ ಕುಮಾರ್ ಎನ್‌ಡಿಎ-ಎಲ್‌ಜೆಪಿ ಗೆದ್ದರೆ ಪಾಸ್ವಾನ್‌ಗೆ ಮುಖ್ಯ ಮಂತ್ರಿ ಸ್ಥಾನ ಕೊಡುವುದಾಗಿಯೂ ಹೇಳಿದ್ದಾರೆ. ಅತ್ತ ಪಾಸ್ವಾನ್ ಜೆಡಿ(ಯು) ಪಕ್ಷವು ಬಿಜೆಪಿಯೊಂದಿಗೆ ಸಂಬಂಧ ಕಡಿದುಕೊಂಡರೆ ಮಾತ್ರ ತಾನು ಸಿದ್ಧ ಎಂದಿದರು. ಜೆಡಿ(ಯು)ಗೆ ಇದು ಒಪ್ಪಿಗೆಯಿಲ್ಲ. ಇಂತಹ ಸ್ಥಿತಿಯಲ್ಲಿ ಅದು ಏಕಾಂಗಿಯಾಗಿ ಸ್ಪರ್ಧಿಸಬಹುದು, ತನ್ನ 4 ಶೇಕಡಾ ಜನ ಬೆಂಬಲದಿಂದ ಜಾತ್ಯಾತೀತ ಮತಗಳಿಗೆ ಸ್ವಲ್ಪ ತೊಂದರೆ ತರಬಹುದು. ಆದರೆ ಇದು ಫಲಿತಾಂಶವನ್ನೇ ಬದಲಿಸುವಷ್ಟು ತೊಂದರೆ ಉಂಟುಮಾಡಲಿಕ್ಕಿಲ್ಲ.

ಮತ್ತೆ ರಾಜಕೀಯಕ್ಕಾಗಿ ಧರ್ಮದ ದುರುಪಯೋಗ

ಬಿಜೆಪಿ ಮತ್ತು ಸಂಘಪರಿವಾರ ಸದ್ಯಕ್ಕೆ ಶಂಕರಾಚಾರ್ಯ ಪ್ರಶ್ನೆಯನ್ನು ಬಡಿದೆಬ್ಬಿಸುವ ಪ್ರಯತ್ನ ಮಾಡಿದರು. ಕಳೆದ ಒಂದೂವರೆ ತಿಂಗಳಲ್ಲಿ ಈ ಘಟನೆಯ ಲಾಭ ಪಡೆಯುವ ಸಂಘಪರಿವಾರದ ಯತ್ನ ವಿಫಲವಾಯಿತು. ಇದು ನಮ್ಮ ಜನಸಮೂಹಗಳ ರಾಜಕೀಯ ಪ್ರೌಢತೆಗೆ ಸಾಕ್ಷಿ. ಅವರು 1998 ರಿಂದ 2004 ರವರೆಗೆ ಧರ್ಮವನ್ನು ರಾಜಕೀಯಕ್ಕೆ ಬಳಸುವುದರಿಂದ ಭೀಕರ ಪರಿಣಾಮಗಳನ್ನು ಕಂಡಿದ್ದಾರೆ.

ಆದರೆ ಕೋಮುವಾದದ ಬೆದರಿಕೆ ಇನ್ನೂ ಇದೆ. ಯಾವಾಗ ಮತ್ತೆ ಭುಗಿಲೇಳುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಸಂಘ ಪರಿವಾರದ ಹತಾಶೆ ಹೆಚ್ಚಿದಷ್ಟು ವಿಪರೀತ ಕ್ರಮಕ್ಕಿಳಿಯುವ ಸಾಧ್ಯತೆ ಹೆಚ್ಚು.

ಇಂತಹ ಸನ್ನಿವೇಶದಲ್ಲಿ ಜಾತ್ಯಾತೀತ ಶಕ್ತಿಗಳು ಸಂಯಮದಿಂದ ಬಿಜೆಪಿ ವಿರೋಧಿ ಮತಗಳು ಒಡೆಯದಂತೆ, ಸಂಘಪರಿವಾರಕ್ಕೆ ಈ ವಿಧಾನಸಭಾ ಚುನಾವಣೆಗಳಲ್ಲಿ ಮತ್ತೊಂದು ಹೊಡೆತ ನೀಡಲು ಸಾಧ್ಯವಾಗಬೇಕು. ○

ಟೆಲಿಕಾಂ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ (FDI) ಹೆಚ್ಚಳದ ವಿರುದ್ಧ ಫೆಬ್ರುವರಿ 7 ರಂದು ದೇಶದಾದ್ಯಂತ ಪ್ರತಿಭಟನೆಗೆ ಎಡಪಕ್ಷಗಳ ಕರೆ

ದೂರಸಂಪರ್ಕ (ಟೆಲಿಕಾಂ) ಕೇಂದ್ರದಲ್ಲಿ ವಿದೇಶಿ ನೇರ ಬಂಡವಾಳ (FDI)ವನ್ನು ಶೇ.49 ರಿಂದ ಶೇ.74 ಕ್ಕೆ ಹೆಚ್ಚಿಸಲು ಅವಕಾಶ ನೀಡಿದ ಕೇಂದ್ರ ಸರಕಾರದ ಕ್ರಮವನ್ನು ತೀವ್ರವಾಗಿ ಖಂಡಿಸಿರುವ ಎಡಪಕ್ಷಗಳು ಫೆಬ್ರವರಿ 7 ರಂದು ದೇಶದಾದ್ಯಂತ ಪ್ರತಿಭಟನೆಗೆ ಕರೆ ನೀಡಿವೆ.

ಫೆಬ್ರುವರಿ 3 ರಂದು ನವದೆಹಲಿಯಲ್ಲಿ ಸಭೆ ಸೇರಿದ ಸಿಪಿಐ(ಎಂ), ಸಿಪಿಐ ಮತ್ತು ಫಾರ್ವರ್ಡ್ ಬ್ಲಾಕ್ ಪಕ್ಷಗಳು, ದೇಶದ ಆರ್ಥಿಕ ಸಾರ್ವಭೌಮತೆಗೆ ಧಕ್ಕೆ ತರುವ ಹಾಗೂ ಆಯಕಟ್ಟಿನ ಜಾಗವಾದ ದೂರ ಸಂಪರ್ಕದಲ್ಲಿ ವಿದೇಶಿ ನೇರ ಬಂಡವಾಳ ಹೆಚ್ಚಿಸಿದಲ್ಲಿ ಭವಿಷ್ಯದಲ್ಲಿ ಗಂಡಾಂತರ ಕಾದಿದೆ ಎಂದು ಹೇಳಿದರು. ಈ ಸಭೆಯಲ್ಲಿ ಸಿಪಿಐ(ಎಂ) ನ ಸೀತಾರಾಂ ಯೆಚೂರಿ, ಸಿಪಿಐನ ಎ.ಬಿ.ವರ್ಧನ್, ಡಿ.ರಾಜಾ ಮತ್ತು ಪಲ್ಲಬ್ ಸೇನ್‌ಗುಪ್ತಾ ಹಾಗೂ ಫಾರ್ವರ್ಡ್ ಬ್ಲಾಕ್‌ನ ಜಿ.ದೇವರಾಜನ್ ಭಾಗವಹಿಸಿದ್ದರು. ಕಾರಣಾಂತರಗಳಿಂದ ಭಾಗವಹಿಸಲಾಗದ ಆರ್.ಎಸ್.ಪಿ, ಈ ಸಭೆಯಲ್ಲಿ ತೆಗೆದುಕೊಳ್ಳುವ ನಿರ್ಣಯಕ್ಕೆ ತಾನು ಬದ್ಧ ಎಂದು ಹೇಳಿದೆ.

ಪೇಟೆಂಟ್ ಕಾಯಿದೆಗೆ ತಿದ್ದುಪಡಿ, ಭಾರತದ ಖಾಸಗಿ ಬ್ಯಾಂಕುಗಳ ಶೇ.74ರಷ್ಟು ಶೇರುಗಳನ್ನು ಖರೀದಿಸಲು ವಿದೇಶಿ ಬ್ಯಾಂಕುಗಳಿಗೆ ಅವಕಾಶ ಹಾಗೂ ಬ್ಯಾಂಕುಗಳ

ಪುಟ 11 ಕ್ಕೆ



ನೇಪಾಳದಲ್ಲಿ ದೊರೆಯ ಕ್ಷಿಪ್ರಕ್ರಾಂತಿ

ಅನಿಲ್ ಬಿಸ್ವಾಸ್

ಫೆಬ್ರವರಿ 1, 2005 ರಂದು ನೇಪಾಳ ಇನ್ನೊಂದು ಕ್ಷಿಪ್ರಕ್ರಾಂತಿ ಕಂಡಿತು. ಸ್ವತಃ ನೇಪಾಳ ದೊರೆಯೇ ಇದನ್ನು ಏರ್ಪಡಿಸಿದ್ದು, ಅದರನೇತಾರ ಕೂಡಾ. ಮತ್ತೊಮ್ಮೆ ನೇಪಾಳದಲ್ಲಿ ಪ್ರಜಾಪ್ರಭುತ್ವದ ಕತ್ತು ಹಿಸುಕಿ ಅದರ ಜಾಗದಲ್ಲಿ ಒಂದು ನಿರಂಕುಶ ರಾಜಪ್ರಭುತ್ವವನ್ನು ಹೇರಲಾಗಿದೆ. ಅಲ್ಲಿ ಈಗ ತುರ್ತುಪರಿಸ್ಥಿತಿ ಘೋಷಿಸಲಾಗಿದೆ. ರಾಜಕೀಯ ಮುಖಂಡರನ್ನು ಗೃಹಬಂಧನದಲ್ಲಿರಿಸಲಾಗಿದೆ. ನೇಪಾಳದ ಸಂವಿಧಾನದ ಕೆಲವು ಅಂಶಗಳನ್ನು ಅಮಾನತುಗೊಳಿಸಲಾಗಿದೆ. ಮಾಧ್ಯಮದ ಮೇಲೆ ಮಿತಿ ಹೇರಲಾಗಿದೆ.

ಒಂದು ಸರ್ವಾಧಿಕಾರಶಾಹಿ ಆಳ್ವಿಕೆಯ ಹೇರಿಕೆಯಿಂದಾಗಿ ಕ್ಷಿಪ್ರಕ್ರಾಂತಿಯ ನಂತರ ಮಾವೋವಾದಿ ಉಗ್ರಗಾಮಿಗಳ ಭಯೋತ್ಪಾದಕ ಚಟುವಟಿಕೆಗಳು ಇನ್ನಷ್ಟು ಹೆಚ್ಚುತ್ತವೆ, ಅಲ್ಲಿನ ರಾಜಕೀಯ ಬಿಕ್ಕಟ್ಟು ತೀವ್ರಗೊಳ್ಳುತ್ತದೆ ಎಂದು ಭಾರತ ಸರ್ಕಾರ ಸರಿಯಾಗಿಯೇ ಟಿಪ್ಪಣಿ ಮಾಡಿದೆ.

ನಿಜ ಸಂಗತಿಯೆಂದರೆ ನೇಪಾಳದ ಆಗಸದಲ್ಲಿ ರಾಜಕೀಯ ಕಾರ್ಮೋಡ ಕವಿದಿದೆ. ಅದು ದಿನೇದಿನೇ ಇನ್ನಷ್ಟು ದಟ್ಟವಾಗುತ್ತಾ ಸಾಗುತ್ತದೆ. ಅದು ನೇಪಾಳದ ಗಡಿಗಳಿಗೇ ಸೀಮಿತವಾಗುವುದಿಲ್ಲ. ರಾಜಕೀಯ ಬಿಕ್ಕಟ್ಟಿನ, ಅದರಲ್ಲೂ ಮಾವೋವಾದಿಗಳ ಹಿಂಸಾತ್ಮಕ ಕೃತ್ಯಗಳ ಒಟ್ಟು ಪರಿಣಾಮಗಳು ಬಾಂಗ್ಲಾದೇಶ ಮಾತ್ರವಲ್ಲ, ಝಾರ್ಖಂಡ್, ಬಂಗಾಳ, ಬಿಹಾರದ ಗಡಿ ಪ್ರದೇಶಗಳನ್ನೂ ತಟ್ಟಿದೆ.


ಭಾರತದ ಪ್ರಜಾಪ್ರಭುತ್ವ ಪ್ರಜ್ಞೆಯ ಜನಗಳು ನೇಪಾಳದಲ್ಲಿನ ಇತ್ತೀಚಿನ ಆಂತರಿಕ ಬೆಳವಣಿಗೆಗಳ ಬಗ್ಗೆ ಮೂಕ ಪ್ರೇಕ್ಷಕರಾಗಿರಲು ಸಾಧ್ಯವಿಲ್ಲ. ನೇಪಾಳದ ರಾಜಕೀಯ ಬಿಕ್ಕಟ್ಟಿನ ನೆರಳಲ್ಲಿ ನಮ್ಮ ಉಪಖಂಡದಲ್ಲಿ ಪ್ರತ್ಯೇಕತಾವಾದಿಗಳ ಚಟುವಟಿಕೆಗಳು ಸಾಮ್ರಾಜ್ಯಶಾಹೀ ಶಕ್ತಿಗಳ ನೆರವಿನಿಂದ ಹೆಚ್ಚುತ್ತಾ ಹೋಗಬಹುದು.

14ವರ್ಷಗಳಲ್ಲಿ 14 ಪ್ರಧಾನಿಗಳು

ನೇಪಾಳ ದಕ್ಷಿಣ-ಪೂರ್ವ ಏಶ್ಯಾದ ಅತಿ ಬಡ ದೇಶಗಳಲ್ಲಿ ಒಂದು ಹಸಿವಿನ ತಾಪದಿಂದಾಗಿ ಅಲ್ಲಿನ ಶೇ 30 ರಷ್ಟು ಜನ ಬದುಕು ಅರಸಿಕೊಂಡು ಬೇರೆಡೆ ಹೋಗುತ್ತಾರೆ. ಯುಗಯುಗಳಿಂದ ನೇಪಾಳದ ರಾಜಪ್ರಭುತ್ವದ ಕ್ರೂರ ಶೋಷಣೆ ಜನಗಳ ಬದುಕನ್ನು ದುರ್ಬರಗೊಳಿಸಿದೆ. ಆದ್ದರಿಂದ ರಾಜಪ್ರಭುತ್ವವನ್ನು ಕೊನೆಗಾಣಿಸಿ ಒಂದು ಪ್ರಜಾಪ್ರಭುತ್ವದ ರಚನೆಗಾಗಿ ಅಲ್ಲಿ ಬಹಳ ಕಾಲದಿಂದ ಹೋರಾಟಗಳು ನಡೆಯುತ್ತಿವೆ. ನೇಪಾಳ ಕಾಂಗ್ರೆಸ್ ಪಕ್ಷ ಮತ್ತು ನೇಪಾಳ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ-ಲೆನಿನ್ ವಾದಿ) ದ ನೇತೃತ್ವದಲ್ಲಿ ಈ ಹೋರಾಟ ನಡೆಯುತ್ತಿದೆ.

1990 ರಲ್ಲಿ ಪ್ರಜಾಪ್ರಭುತ್ವವಾದಿ ಪಕ್ಷಗಳ ಕಠಿಣ ಹೋರಾಟದಿಂದಾಗಿ ನೇಪಾಳದಲ್ಲಿ ಒಂದು ಬಹುಪಕ್ಷ ಪ್ರಜಾಪ್ರಭುತ್ವ ಸ್ಥಾಪನೆಗೊಂಡಿತು. ಅರಮನೆಯ ಹತೋಟಿಯ ಪಂಚಾಯತ್ ವ್ಯವಸ್ಥೆಯ ಬದಲು ಹೊಸದೊಂದು ಪಂಚಾಯತ್ ವ್ಯವಸ್ಥೆ ತರಲಾಯಿತು ಮತ್ತು ಒಂದು ಪ್ರಜಾಪ್ರಭುತ್ವ ಕಾರ್ಯಕ್ರಮವನ್ನು ಮುಂಡಿಡಲಾಯಿತು.


ಆದರೂ ಅಂದಿನಿಂದ 14 ವರ್ಷಗಳು ಸರಿದರೂ ಬಹುಪಕ್ಷ ಪ್ರಜಾಪ್ರಭುತ್ವ ನೇಪಾಳದಲ್ಲಿ ಬೇರು ಬಿಡಲಿಲ್ಲ. ಪ್ರೌಢತೆ ಗಳಿಸಲಿಲ್ಲ. ಶೇರ್ ಬಹುದ್ದೂರ್ ದೇವ್ ಬಾ ಸರ್ಕಾರವನ್ನು ಲೆಕ್ಕಕ್ಕೆ ತಗೊಂಡರೆ ಅಲ್ಲಿ 14 ವರ್ಷಗಳಲ್ಲಿ 14 ಪ್ರಧಾನ ಮಂತ್ರಿಗಳನ್ನು ಬದಲಿಸಲಾಗಿದೆ. ಇತ್ತೀಚಿನ ಅವಧಿಯಲ್ಲಿ ಇಂತಹ ಒಂದು ರಾಜಕೀಯ ಚಡಪಡಿಕೆ ಬೇರಾವ ದೇಶದಲ್ಲೂ ಕಂಡುಬಂದಿಲ್ಲ.



ರಾಜ ಜ್ಞಾನೇಂದ್ರ

ಈ ರಾಜಕೀಯ ಅಸ್ಥಿರತೆ ಮತ್ತು ಆರ್ಥಿಕ ಅವ್ಯವಸ್ಥೆ ಮಾವೋವಾದಿಗಳಿಗೆ ತಮ್ಮ ಹಿಂಸಾತ್ಮಕ ಚಟುವಟಿಕೆಗಳನ್ನು ವಿಸ್ತರಿಸಲು ಅವಕಾಶ ಮಾಡಿಕೊಟ್ಟಿದೆ. ಒತ್ತಡಕ್ಕೆ ಕುಸಿದ ಹದಿನಾಲ್ಕು ಸರ್ಕಾರಗಳಲ್ಲಿ ಎಂಟು ಮಾವೋವಾದಿ ಪಿಡುಗನ್ನು ಅಡಗಿಸುವಲ್ಲಿ ಅತ್ಯಂತ ವಿಫಲವಾದುದೆಂಬ ಆರೋಪ ಹೊತ್ತಿವೆ. ಪ್ರಜಾಪ್ರಭುತ್ವವಾದಿ ಪಕ್ಷಗಳ ವಿಫಲತೆಯ ಪ್ರಯೋಜನವನ್ನು ನೇಪಾಳದ ರಾಜಪ್ರಭುತ್ವ ಪೂರ್ಣವಾಗಿ ಪಡೆದಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಹಿಂಸಾತ್ಮಕ ಚಟುವಟಿಕೆಗಳು ಹೆಚ್ಚಲು ಕಾರಣವಾಯಿತು ಎಂದು ದೂರುವ ರಾಜಪ್ರಭುತ್ವ ವಾಸ್ತವವಾಗಿ ಪಂಚಾಯತ್ (ಸಂಸದೀಯ) ವ್ಯವಸ್ಥೆಯನ್ನು ಸ್ವೀಕರಿಸಲು ಎಂದೂ ಸಿದ್ಧವಿರಲಿಲ್ಲ.

ಕಮ್ಯುನಿಸ್ಟ್ ಪಕ್ಷವು ನೇಪಾಳ ಸರ್ಕಾರವನ್ನು ನಡೆಸುವಲ್ಲಿ ಒಂದು ಮಹತ್ವದ ಪಾತ್ರವನ್ನು ವಹಿಸಲು ಮುಂದಾದಾಗಲೆಲ್ಲ ಮಾವೋವಾದಿಗಳು ಸಶಸ್ತ್ರ ಆಕ್ರಮಣ ನಡೆಸಿ ನೇಪಾಳದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ದುರ್ಬಲಗೊಳಿಸಿದರು ಎಂಬುದನ್ನು ವಿಶೇಷವಾಗಿ ಗಮನಿಸಬೇಕು. ಒಂದು ರೀತಿಯಲ್ಲಿ ಮಾವೋವಾದಿಗಳ ಹಿಂಸಾತ್ಮಕ ವರ್ತನೆ ನೇಪಾಳದಲ್ಲಿ ರಾಜಪ್ರಭುತ್ವ ಸರ್ವಾಧಿಕಾರಶಾಹೀ ಚಟುವಟಿಕೆಗಳಿಗೆ ನೆರವಾಯಿತು.



ಪ್ರಜಾಪ್ರಭುತ್ವದ ಬಾಗಿಲು

1980 ರಿಂದ ಆರಂಭವಾದ ಹೋರಾಟ

ನೇಪಾಳದಲ್ಲಿ ಅತಿದೊಡ್ಡ ಪ್ರಜಾಪ್ರಭುತ್ವವಾದೀ ಶಕ್ತಿಯೆಂದರೆ ನೇಪಾಳ ಕಾಂಗ್ರೆಸ್ ಎಂಬುದನ್ನಿಲ್ಲಿ ಪ್ರಸ್ತಾವಿಸಬೇಕು. ಎರಡನೇ ದೊಡ್ಡ ಶಕ್ತಿಯೆಂದರೆ ನೇಪಾಳ ಕಮ್ಯುನಿಸ್ಟ್ ಪಕ್ಷ (ಯುಎಂಎಲ್) ಇನ್ನೂ ಹಲವು ನೇಪಾಳೀ ರಾಜವಂಶದ ಕೃಪಾಪೋಷಿತ ಸಣ್ಣ ಪಕ್ಷಗಳಿವೆ. ನೇಪಾಳೀ ರಾಜವಂಶದೊಳಗಿನ ಕಲಹಗಳು ಎಲ್ಲರಿಗೂ ಗೊತ್ತು. ಇನ್ನೊಂದೆಡೆ ಎರಡು ದೊಡ್ಡ ಪ್ರಜಾಪ್ರಭುತ್ವವಾದಿ ರಾಜಕೀಯ ಪಕ್ಷಗಳ ಚಟುವಟಿಕೆಗಳು ನೇಪಾಳೀ ಜನತೆಯ ಪ್ರಜಾಪ್ರಭುತ್ವ ಪ್ರಜ್ಞೆಯನ್ನು ಹೆಚ್ಚಿಸುವಲ್ಲಿ ವಿಫಲವಾಗಿವೆ.

ನೇಪಾಳದ ಜನತೆ 1980 ರಿಂದ ಒಂದು ಬಹುಪಕ್ಷ ಪ್ರಜಾಪ್ರಭುತ್ವಕ್ಕಾಗಿ ಹೋರಾಟ ಆರಂಭಿಸಿದರು. ಆದರೆ ಒಂದು ಪ್ರಜಾಪ್ರಭುತ್ವವನ್ನು ಸ್ಥಾಪಿಸುವಲ್ಲಿ ಪಕ್ಷದ ಹಿತ ಪ್ರಜಾಪ್ರಭುತ್ವದ ಒಂದು ಪ್ರವೃತ್ತಿ ಪ್ರಬಲವಾಗಲಾರಂಭಿಸಿತು. ನೇಪಾಳ ಕಾಂಗ್ರೆಸ್ ಮತ್ತು ನೇಪಾಳ ಕಮ್ಯುನಿಸ್ಟ್ ಪಕ್ಷ (ಯುಎಂಎಲ್) ನ ಜಂಟೀ ಪ್ರಜಾಪ್ರಭುತ್ವ ಕಾರ್ಯಕ್ರಮ ಮೊದಲ ಪ್ರಜಾಪ್ರಭುತ್ವ ಚುನಾವಣೆಗಳು 1991 ರಲ್ಲಿ ನಡೆದವು ನೇಪಾಳ ಕಾಂಗ್ರೆಸ್‌ನ ಮುಖ್ಯಸ್ಥ ಗಿರಿಜಾ ಪ್ರಸಾದ್ ಕ್ಯೊರಾಲಾ ನೇಪಾಳದ ಮೊದಲ ಚುನಾಯಿತ ಪ್ರಧಾನಮಂತ್ರಿಯಾದರು. ಆ ಸರ್ಕಾರ ಮೂರು ವರ್ಷವೂ ಉಳಿಯಲಿಲ್ಲ.



'ದಿ ಹಿಂದು'ವಿನಲ್ಲಿ

ಮತ್ತೆ 1994 ರಲ್ಲಿ ಚುನಾವಣೆಗಳು ನಡೆದವು. ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಒಂದು ಸರ್ಕಾರ ರಚನೆಯಾಯಿತು. ಆ ಸರ್ಕಾರವನ್ನು ಒಂದು ವರ್ಷ ಉಳಿಯಲೂ ಬಿಡಲಿಲ್ಲ. ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಸರ್ಕಾರ ರಚನೆಯಾದ ಕೂಡಲೇ ಮಾವೋವಾದಿಗಳು 'ನೇಪಾಳದ ಜನತೆ ಗಣತಂತ್ರ' ಎಂಬ ಘೋಷಣೆಯಡಿ ಗ್ರಾಮಾಂತರದಲ್ಲಿ 'ವಿಮೋಚನಾ ಸಮರ' ಆರಂಭಿಸಿದರು. ಕಮ್ಯುನಿಸ್ಟ್ ಮುಖಂಡರು, ಅದರಲ್ಲೂ ರೈತ ಮುಖಂಡರು ಅವರ ಗುರಿಯಾಗಿದ್ದರು.

ಸ್ವಲ್ಪವೇ ಸಮಯದಲ್ಲಿ ಕಮ್ಯುನಿಸ್ಟ್ ಸರ್ಕಾರವನ್ನು ವಜಾ ಮಾಡಲಾಯಿತು. ಶೇರ್ ಬಹಾದೂರ್ ದೇವ್ ಬಾ ಮೊದಲ ಬಾರಿಗೆ ಪ್ರಧಾನಿಯಾಗಿ ನೇಮಕಗೊಂಡರು. ಅನಂತರದ ತಿಂಗಳುಗಳಲ್ಲಿ ನೇಪಾಳದಲ್ಲಿ ಪ್ರಧಾನಮಂತ್ರಿಗಳು ಸಾಲುಗಟ್ಟಿ ಬಂದರು, ಹೋದರು. ಇವರಲ್ಲಿ ಲೋಕೇಂದ್ರ ಬಹದ್ದೂರ್ ಚಂದ್ ಹಾಗೂ ಸೂರ್ಯ ಬಹಾದ್ದೂರ್ ಥಾಪಾ ಕೂಡಾ ಸೇರಿದ್ದಾರೆ. ಯಾವ ಸರ್ಕಾರವೂ ಸ್ಥಿರತೆ ಪಡೆಯಲಿಲ್ಲ. 1999 ರಲ್ಲಿ ಒಂದು ಚುನಾವಣೆ ನಡೆಯಿತು. ನೇಪಾಳ ಕಾಂಗ್ರೆಸ್ ಗೆದ್ದಿತು. ಕೃಷ್ಣ ಪ್ರಸಾದ್ ಭಟ್ಟಾರಾಯ್ ನೇಪಾಳ ಕಮ್ಯುನಿಸ್ಟ್ ಪಕ್ಷ(ಯುಎಂಎಲ್) ಬೆಂಬಲದೊಂದಿಗೆ ಸರ್ಕಾರ ರಚಿಸಿದರು. ಅದನ್ನು ಒಂದು ವರ್ಷವೂ ಇರಲು ಬಿಡಲಿಲ್ಲ.

ಮಾವೋವಾದಿಗಳ ಆಕ್ರಮಣದ ದಾರಿ

2001 ರಿಂದ 2005 ರ ನಡುವೆ ರಾಜಕೀಯ ವ್ಯವಸ್ಥೆಯಲ್ಲಿ ಕನಿಷ್ಠ ಒಂಭತ್ತು ಬದಲಾವಣೆಗಳಾದವು. ಕೆಲವೊಮ್ಮೆ ಪ್ರಧಾನಮಂತ್ರಿಗಳನ್ನು ಬದಲಿಸಿದರೆ, ಕೆಲವೊಮ್ಮೆ ದೊರೆಯನ್ನು ಬದಲಾಯಿಸಲಾಯಿತು.

ಮಾವೋವಾದಿ ಉಗ್ರಗಾಮಿಗಳು ಈ ಪರಿಸ್ಥಿತಿಯ ಪೂರ್ಣ ಪ್ರಯೋಜನ ಪಡೆದರು. ಆದರೆ 1996 ರಲ್ಲಿ ಚುನಾವಣೆಗಳಲ್ಲಿ ಭಾಗವಹಿಸುವುದನ್ನು ಪರೀಕ್ಷಿಸಲು ಅವರು ಮುಂದಾದಾಗ ಸಂಪೂರ್ಣ ಪರಾಭವ ಅನುಭವಿಸಿದರು. ಅವರ ಸಾಧನೆ ಶೋಚನೀಯವಾಗಿತ್ತು. ನೇಪಾಳ ಸಂಸತ್ತಿನ 205 ಸ್ಥಾನಗಳಲ್ಲಿ ಕೇವಲ ಒಂಭತ್ತನ್ನು ಗೆಲ್ಲಲು ಮಾತ್ರ ಅವರಿಗೆ ಸಾಧ್ಯವಾಯಿತು.

ನಂತರದ ಅವಧಿಯಲ್ಲಿ 1996 ರಿಂದ 2004 ರ ನಡುವೆ ಮಾವೋವಾದಿ ಉಗ್ರಗಾಮಿಗಳು ಆಕ್ರಮಣದ ದಾರಿಹಿಡಿದರು. ಇವರ ಸಶಸ್ತ್ರ ಧಾಳಿಗಳಲ್ಲಿ ಕನಿಷ್ಠ 13 ಸಾವಿರ ಜನ ಸತ್ತರು. ಇವರಲ್ಲಿ ಹೆಚ್ಚಿನವರು ಬಡ ರೈತರು. ಮಾವೋವಾದಿಗಳು ಹೆಮ್ಮೆಯಿಂದ ಹೇಳುತ್ತಿದ್ದ ರಾಜಕೀಯ ಸಿದ್ಧಾಂತವೆಂದರೆ ಒಂದು 'ಜನತಾ ಸಮರ' ನಡೆಸುವ ಮೂಲಕ 'ಜನತಾ ಪ್ರಜಾಪ್ರಭುತ್ವವಾದೀ ನೇಪಾಳ' ದ ಸ್ಥಾಪನೆ. ತರಬೇತಿ ಪಡೆದ 15 ಸಾವಿರ ಗೆರಿಲ್ಲಾಗಳ ಪಡೆಯನ್ನು ರಚಿಸಿ ಅವರು ಪೆರುವಿನ ಸಂದೋರೋ ಲುಮಿನೋಸೋ ಅಥವಾ 'ಬೆಳಗುತ್ತಿರುವ ದಾರಿ'ಯನ್ನು ಹೋಲುವ ಜನತಾ ಯುದ್ಧದ ಕಾರ್ಯತಂತ್ರ ಅಂಗೀಕರಿಸಿದರು.

ಸಶಸ್ತ್ರ ಆಕ್ರಮಣದೊಂದಿಗೆ ಮಾವೋವಾದಿ ಉಗ್ರಗಾಮಿಗಳು ನೇಪಾಳದಲ್ಲಿ 1996 ರಿಂದ 21 ಸಾರ್ವತ್ರಿಕ ಮುಷ್ಕರಗಳನ್ನು ನಡೆಸಿದ್ದಾರೆ. ಕಾರ್ಯಕ್ರಮಕ್ಕೆ ಇದ್ದದ್ದು ಒಂದೇ ಒಂದು ಗುರಿ. ಅದೆಂದರೆ ನೇಪಾಳದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಧ್ವಂಸ ಮಾಡುವುದು. ಆ ಗುರಿಸಾಧನೆಯಲ್ಲಿ ಅವರು ಸಾಕಷ್ಟು ಯಶಸ್ವೀಯಾಗಿದ್ದಾರೆ ಎನ್ನಬಹುದು.

ಪ್ರಜಾಪ್ರಭುತ್ವವಾದೀ ಪಕ್ಷಗಳ ದೌರ್ಬಲ್ಯಗಳು

ನೇಪಾಳ ಕಾಂಗ್ರೆಸ್ ಪಕ್ಷ ಭಾರತದಲ್ಲಿ ಕಾಂಗ್ರೆಸ್‌ನಂತೆ ಬಂಡವಾಳಶಾಹಿಗಳು ಮತ್ತು ದೊಡ್ಡ ಭೂಮಾಲಕರ ಪಕ್ಷ. ಆ ಪಕ್ಷ ಎಂದೂ ನೇಪಾಳದ ಬಡಜನರ ಆರ್ಥಿಕ ಉದ್ಧಾರಕ ಬೇಡಿಕೆಗಳನ್ನಿಟ್ಟು ಹೋರಾಟಗಳನ್ನು ನಡೆಸಿಯೇ ಇಲ್ಲ. ಇದರ ಫಲವಾಗಿ ರಾಜಪ್ರಭುತ್ವದ ವಿರುದ್ಧ ಖಡಾಖಂಡಿತವಾಗಿ ಹೋರಾಟದ ಅವಕಾಶವನ್ನು ಸ್ವಲ್ಪಮಟ್ಟಿಗೆ ಕಳಕೊಳ್ಳಲಾಯಿತು.

ನೇಪಾಳದ ಜನರ ಮಟ್ಟಿಗೆ ನೇಪಾಳ ಕಮ್ಯುನಿಸ್ಟ್ ಪಕ್ಷ(ಯುಎಂಎಲ್) ಹೋರಾಟಗಳನ್ನು ನಡೆಸುತ್ತಿರುವ ಏಕೈಕ ನೀತಿಬದ್ಧ ಪಕ್ಷ. ದುರದೃಷ್ಟವಶಾತ್, ಆ ಪಕ್ಷ ಸಮ್ಮಿಶ್ರ ರಾಜಕೀಯದ ಹೆಸರಲ್ಲಿ ಹೆಚ್ಚೆಚ್ಚಾಗಿ ನೇಪಾಳ ಕಾಂಗ್ರೆಸ್‌ನ ಮೇಲೆ ಅವಲಂಬಿತವಾಗಿದೆ.


...ೋವಾದಿ ನಾಯಕ ...ರಾಮ್ ಭಟ್ಟಾರ್ಯ

ನೇಪಾಳದಲ್ಲಿ ಕಮ್ಯುನಿಸ್ಟ್ ಪಕ್ಷದೊಳಗೆ ಆರಂಭದಿಂದಲೇ ಬಂದ ಮತ್ತು ಆಂತರಿಕ ದೌರ್ಬಲ್ಯಗಳೂ ಅದರ ಸೈದ್ಧಾಂತಿಕ ನಿಲುವನ್ನು ದುರ್ಬಲಗೊಳಿಸಿವೆ. ನೇಪಾಳ ಕಮ್ಯುನಿಸ್ಟ್ ಪಕ್ಷ (ಯುಎಂಎಲ್)ದ ಈ ಸೈದ್ಧಾಂತಿಕ ದೌರ್ಬಲ್ಯ ಫೆಬ್ರವರಿ 2 ರಂದು ನೇಪಾಳದ ದೊರೆ ರಚಿಸಿದ 'ಕೈಗೊಂಬೆ ಸರ್ಕಾರ'ರವನ್ನು ಸೇರುವ ಅದರ ನಿರ್ಣಯದಲ್ಲೂ ಪ್ರಕಟಗೊಂಡಿದೆ. ನೇಪಾಳೀ ರಾಜವಂಶ ಮತ್ತು ಉಗ್ರಗಾಮಿಗಳು ಈ ಸನ್ನಿವೇಶದ ಪ್ರಯೋಜನ ಪಡೆದಿದ್ದಾರೆ.


ಪ್ರಧಾನಿ ಶೇರ್ ...ಹದ್ದೂರ್ ದೇಬ್

ಒಂದೇ ಮಾತಿನಲ್ಲಿ ಹೇಳುವುದಾದರೆ, ನೇಪಾಳದ ಪ್ರಜಾಪ್ರಭುತ್ವವಾದೀ ಪಕ್ಷಗಳನ್ನು ಬಾಧಿಸುತ್ತಿರುವ ದೌರ್ಬಲ್ಯಗಳು ನೇಪಾಳೀ ರಾಜವಂಶಕ್ಕೆ ಮತ್ತೆ ತಲೆ ಎತ್ತಿ ತನ್ನನ್ನು ಮರು ಸ್ಥಾಪಿಸಿಕೊಳ್ಳಲು ನೆರವಾಗಿದೆ. ಇದರ ಫಲವಾಗಿ ನೇಪಾಳದ ರಾಜಕೀಯ ಬಿಕ್ಕಟ್ಟಿನ ತೀವ್ರತೆ ಇನ್ನಷ್ಟು ಹೆಚ್ಚುತ್ತದೆ. ಪ್ರಜಾಪ್ರಭುತ್ವದ ಕತ್ತು ಹಿಸುಕಿ ಹಿಂಸಾ ಚಟುವಟಿಕೆಗಳನ್ನು ತಡೆಯಲು ಸರ್ವಾಧಿಕಾರಶಾಹಿಗೆ ಎಂದೂ ಸಾಧ್ಯವಿಲ್ಲ. ನೇಪಾಳದಲ್ಲಿ ಇಂದು ಪ್ರಕಟಗೊಂಡಿರುವ ಬಿಕ್ಕಟ್ಟು. ನೇಪಾಳದ ಜನಗಳು ಮತ್ತು ಆದೇಶದ ರಾಜಕೀಯ ಪಕ್ಷಗಳ ಮುಂದಿರುವ ಅನಿವಾರ್ಯ ಕರ್ತವ್ಯವೆಂದರೆ ಆ ದೇಶದಲ್ಲಿ ಪ್ರಜಾಪ್ರಭುತ್ವದ ಮರು ಸ್ಥಾಪನೆಗೆ ಹೋರಾಟವನ್ನು ತ್ವರಿತಗೊಳಿಸುವುದು.

ಅಮೇರಿಕನ್ ಅಪರಾಧಗಳನ್ನು ಅಳಿಸಿಲ್ಲ

ಇರಾಕ್ ಚುನಾವಣೆ

ಇರಾಕ್‌ನಲ್ಲಿ ಚುನಾವಣಾ ನಾಟಕದ ಮೇಲೆ ಪರದೆ ಬಿದ್ದಿದೆ. ಇನ್ನೂ ಎಷ್ಟರ ಮಟ್ಟಿಗೆ ಮತದಾನ ಆಗಿದೆ. ಫಲಿತಾಂಶಗಳು ಏನು ಎಂದು ಪೂರ್ಣಚಿತ್ರ ಸ್ಪಷ್ಟವಾಗಬೇಕಾಗಿದೆ. ಆದರೆ ಆಗಲೇ ಅಧ್ಯಕ್ಷ ಬುಶ್ ಆಡಳಿತ ಜಗದ ತುಂಬಾ 'ಇರಾಕ್‌ನಲ್ಲಿ ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯ ಪುನಃ ಸ್ಥಾಪಿಸಿದ್ದೇವೆ' ಎಂಬ ಡಂಗು ಸಾರುತ್ತಿದ್ದಾರೆ. ಚುನಾವನಾ ನಾಟಕವನ್ನು ಅಮೆರಿಕ ತನ್ನ ಎರಡು ವರ್ಷಗಳ ಅತಿಕ್ರಮಣ, ಯುದ್ಧ ಅಪರಾಧಗಳ ಪಾತಕೃತ್ಯಗಳನ್ನು ತೊಳೆದು ಹಾಕಲು ಬಳಸುತ್ತಿದೆ. ತನ್ನ ಅತಿಕ್ರಮಣಕ್ಕೆ ಕಾನೂನುಬದ್ಧತೆಯ ತೊಡಿಸುವ ಪ್ರಯತ್ನ ಮಾಡುತ್ತಿದೆ. ತಾನು ಇರಾಕಿನಲ್ಲೂ, ಇಡೀ ಜಗದಲ್ಲೂ, 'ಪ್ರಜಾಪ್ತಭುತ್ವದ ರಕ್ಷಕ' ಎಂದು ಪೋಸು ಕೊಡಲು ಪ್ರಯತ್ನಿಸುತ್ತಿದೆ. ಈ ಚುನಾವಣೆಯೊಂದಿಗೆ ಅಮೇರಿಕನ್ ಅತಿಕ್ರಮಣದ ವಿರುದ್ಧ ಇರಾಕಿ ಪ್ರತಿರೋದ ಮತ್ತು ಗೆರಿಲ್ಲಾ ಹೋರಾಟ ಕೊನೆಗೊಂಡಿದೆ ಎಂದು ಎಲ್ಲರನ್ನೂ ನಂಬಿಸುವ ಪ್ರಯತ್ನಿಸುತ್ತಿದೆ. ಸಾಲದ್ದಕ್ಕೆ, ನಮ್ಮ ದೇಶದಲ್ಲಿ, ಸಾಮ್ರಾಜ್ಯಶಾಹಿ ಬಾಲಬಡುಕರು, ಈಗ ಇರಾಕ್‌ನಲ್ಲಿ 'ಸ್ಥಳೀಯ ಸರ್ಕಾರ' ಇರುವುದರಿಂದ ಸಂಬಂಧ ಸಾಮಾನ್ಯಗೊಳಿಸಬೇಕೆಂದು ಒತ್ತಾಯಿಸಲು ಆರಂಭಿಸಿದ್ದಾರೆ.



ಕಪಟ ನಾಟಕ

ನಿಜವಾಗಿಯೂ ಈ ಚುನಾವಣೆ ಮಾಡಿರುವುದು ಇಷ್ಟೇ. ಇರಾಕ್ ಮೆಲೆ ಅತಿಕ್ರಮಣಕ್ಕೆ ಕಾನೂನಿನ ಮುಖವಾಡ ತೊಡಿಸಿದೆ. ಇರಾಕ್‌ನ ಅಗಾಧ ಪ್ರಾಕೃತಿಕ ಸಂಪತ್ತಿನ ಮೇಲೆ ಅಮೇರಿಕದ ನಿಯಂತ್ರಣಕ್ಕೂ ಕಾನೂನು ಬದ್ಧತೆ' ಒದಗಿಸಿದೆ. ಲಿಯತೊಲ್ಲಾ ಸಿಸ್ತಾನಿ ನಾಯಕತ್ವದ ಐಕ್ಯ ಇರಾಕಿ ಮೈತ್ರಿಕೂಟ (ಯು.ಐ.ಎ.), ಅಮೆರಿಕನ್ ಬಾಲಬಡುಕ ಪ್ರಧಾನಿ ಲಿಯಾರ್ ಅಲ್ಲಾನಿ ನಾಯಕತ್ವದ ಇರಾಕಿ ನ್ಯಾಷನಲ್ ಎಕೊರ್ಡ್ (ಐ.ಎನ್.ಎ.) ತಲಾ ಮೊದಲ ಮತ್ತು ಎರಡನೇ ಸ್ಥಾನದಲ್ಲಿರುವ ನಿರೀಕ್ಷೆಯಿದೆ. ಇವರಲ್ಲಿ ಯಾರು ಸರಕಾರ ನಡೆಸಿದರೂ, ಅಥವಾ ಸಮ್ಮಿಶ್ರ ಸರ್ಕಾರ ನಡೆಸಿದರೂ, ಅಮೆರಿಕನ್ ಸಾಮ್ರಾಜ್ಯಶಾಹಿ ಧಿಕ್ಕರಿಸಿ ಇರಾಕಿ ಹಿತಾಸಕ್ತಿಗಳನ್ನು ಎತ್ತಿ ಹಿಡಿಯುವ ತಾಕತ್ತು ಇಲ್ಲ. ಇದೇ ಅಮೆರಿಕಕ್ಕೆ ಬೇಕಾಗಿರುವುದು ಕೂಡಾ. ಆದರೆ ಅಂತರ್ರಾಷ್ಟ್ರೀಯವಾಗಿ ದೊಡ್ಡ ಸಂಖ್ಯೆಯಾಗಿ ವಿದೇಶಿ ಸೈನ್ಯ ಇದ್ದು ನಡೆಸಿದ ಚುನಾವಣೆಗಳು ಎಷ್ಟರ ಮಟ್ಟಿಗೆ ನಂಬಲರ್ಹ ಎಂಬೀ ಪ್ರಶ್ನೆಗಳು ಮುಂದುವರೆಯುತ್ತವೆ.

ಪ್ರತಿರೋಧ ನಿಂತಿಲ್ಲ - ನಿಲ್ಲುವುದೂ ಇಲ್ಲ


ಶೇಕಡಾ 60 ರಷ್ಟು ಮತದಾನ ಆಗಿದೆ ಎಂದು ಮೊದಲ ವರದಿಗಳು ಹೇಳಿದ್ದವು. ಆದರೆ ಕೂಡಲೇ ಇದು ಅಂದಾಜು. ಮತ ಎಣಿಕೆ ಮುಗಿಯುವವರೆಗೆ ಯಾವುದೇ ಅಂದಾಜು ಸಿಗುವುದಿಲ್ಲ ಎನ್ನಲಾಗಿದೆ. ಅಲ್ಲದೆ ಮತದಾನ ಮಾಡಲು ರಿಜಿಸ್ಟರ್ ಮಾಡಿದವರ ಸಂಖ್ಯೆಯೇ ಬಹಳ ದೊಡ್ಡದಲ್ಲ ಎಂದು ಹೇಳಲಾಗಿದೆ. ದೇಶದ ಸುಮಾರು ಶೇಕಡಾ 40-45 ಜನರಾದ ಸುನ್ನಿ ಮುಸ್ಲಿಮರು ಹೆಚ್ಚು ಕಡಿಮೆ ಪೂರ್ಣವಾಗಿ ಚುನಾವಣೆಯನ್ನು ಬಹಿಷ್ಕಾರ ಮಾಡಿದ ವರದಿಗಳು ಬಂದಿವೆ. ಸುನ್ನಿ ಬಹುಸಂಖ್ಯಾತ ಪ್ರದೇಶಗಳಲ್ಲಿ ಹಲವು ಕಡೆ ಮತಗಟ್ಟೆಗಳು ತೆರೆಯಲೆ ಇಲ್ಲ. ಎಲ್ಲಾ ಪ್ರಮುಖ ಸುನ್ನಿ ಪಕ್ಷಗಳು ಚುನಾವಣೆಯಲ್ಲಿ ಭಾಗವಹಿಸಲಿಲ್ಲ. ಕುರ್ದಿಷ್ ಪ್ರದೇಶಗಳಲ್ಲಿ ಮಾತ್ರ ದೊಡ್ಡ ಮತದಾನ ಆಗಿದೆ. ಆದರೆ ಅವರ ಮುಖ್ಯ ಅಪೇಕ್ಷೆ ಇರಾಕಿ ಸರ್ಕಾರ ರಚಿಸುವುದು ಅಲ್ಲ. ಪ್ರತ್ಯೇಕ ಕುರ್ದಿಸ್ತಾನ ರಚಿಸುವುದು. ಈ ಅಪೇಕ್ಷೆಯನ್ನು ಹೊಸ ಸರ್ಕಾರ ಪೂರೈಸುವುದೇ?

ಹೀಗೆ ಚುನಾವಣೆಗಳ ನಂತರ ಇರಾಕ್‌ನಲ್ಲಿ ಶಾಂತಿ ನೆಲೆಸುವ ಬದಲು ಶಿಯಾ-ಸುನ್ನಿ, ಇರಾಕ್-ಕುರ್ದ್, ಅಮೆರಿಕನ್-ಪರ - ಅಮೇರಿಕನ್ ವಿರೋಧಿ ಭಿನ್ನಾಭಿಪ್ರಾಯಗಳು, ಅಂತಃ ಕಲಹಗಳು ತೀವ್ರವಾಗುವ ನಿರೀಕ್ಷೆ ಇದೆ. ಆದ್ದರಿಂದ ಹೊಸ ಸರ್ಕಾರ ಯಾವುದೇ ರೀತಿಯಲ್ಲಿ ಕಾನೂನು - ವ್ಯವಸ್ಥೆ ಸ್ಥಾಪಿಸಲು ಸಾಧ್ಯವಾಗಬಹುದು. ಒಂದಲ್ಲ ಒಂದು ರೀತಿಯ ಗೆರಿಲ್ಲಾ ಹೋರಾಟ, ಪ್ರತಿರೋಧ ಮುಂದುವರೆಯುತ್ತಿದೆ. ಚುನಾವಣೆಯ ಮೊದಲು, ನಂತರವೂ ಉತ್ತರದ ಕುರ್ದಿಶ್ ಪ್ರಾಂತ್ಯ ಬಿಟ್ಟರೆ ಬೇರೆ ಎಲ್ಲಾ ಕಡೆಯೂ ಗೆರಿಲ್ಲಾ ಪ್ರತಿರೋಧದ ಪ್ರತಿಭಟನೆಗಳ ವರದಿಯಾಗುತ್ತಿವೆ. ಆದ್ದರಿಂದ ಪ್ರಜಾಪ್ರಭುತ್ವ, ಶಾಂತಿಯೂ ಇರಾಕಿನಲ್ಲಿ ಸ್ಥಾಪಿಸಲಾಗಿದೆ ಎಂಬ ಹೇಳಿಕೆ ಹುರಳಿಲ್ಲದ್ದು.



ಚುನಾವಣಾ ವ್ಯವಸ್ಥೆ ಹುಳುಕುಗಳು

ಇರಾಕ್‌ನಲ್ಲಿ ಅಂಗೀಕರಿಸಲಾದ ಚುನಾವಣಾ ಪದ್ಧತಿಯೇ ವಿಶ್ವಾಸಾರ್ಹವಲ್ಲ. ನಿಜವಾದ ಪ್ರಜಾಪ್ರಭುತ್ವ ಸ್ಥಾಪಿಸಲು ಸಹಾಯಕವಲ್ಲ. ಅನುಪಾತಿಕ ಪ್ರಾತಿನಿಧ್ಯ (ಪ್ರೊಪೋಷನಲ್ ರೆಪ್ರೆಸೆಂಟೇಶನ್) ಪದ್ದತಿಯನ್ನು ವಿಚಿತ್ರವಾಗಿ ತಿರುಚಲಾಗಿತ್ತು. ಚುನಾವಣೆಗೆ ನಿಲ್ಲುವ ಪ್ರತಿಪಕ್ಷ ಅಥವಾ ಕೂಟ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು. ಅಭ್ಯರ್ಥಿಗಳ ಮೇಲೆ ಗೆರಿಲ್ಲಾ ದಾಳಿ ಆಗಬಹುದು ಎಂಬ ನೆಪದಲ್ಲಿ ಪಟ್ಟಿಯನ್ನು ಪೂರ್ತಿಯಾಗಿ ಪ್ರಕಟಿಸಲಾಗಿಲ್ಲ. ಅನುಪಾತಿಕ ಪ್ರಾತಿನಿಧ್ಯ ಜಾರಿಯಲ್ಲಿರುವ ಹೆಚ್ಚಿನ ದೇಶಗಳಲ್ಲಿ ಈ ಪಟ್ಟಿಯಲ್ಲಿರುವ ಹೆಸರುಗಳ ಕ್ರಮದಲ್ಲಿ ಅಭ್ಯರ್ಥಿಗಳು ಚುನಾಯಿತರಾಗುತ್ತಾರೆ. ಅಂದರೆ ನೂರು ಸೀಟುಗಳು ಇದ್ದು ಒಂದು ಪಕ್ಷ ಶೇಕಡಾ 20 ಮತ ಗಳಿಸಿದರೆ, ಪಕ್ಷದ ಪಟ್ಟಿಯಲ್ಲಿರುವ ಮೊದಲ 20 ಅಭ್ಯರ್ಥಿಗಳು ಚುನಾಯಿತರಾಗಿದ್ದಾರೆ ಎಂದು ಘೋಷಿಸಲಾಗುತ್ತದೆ. ಆದರೆ ಇರಾಕ್‌ನಲ್ಲಿ ಹಾಗಲ್ಲ. ನೂರರಲ್ಲಿ ಯಾವುದೆ ಇಪ್ಪತ್ತು ಹೆಸರುಗಳನ್ನು ಪಕ್ಷ ಆಯ್ಕೆ ಮಾಡಬಹುದಂತೆ! ವಿದೇಶಿ ಸೈನ್ಯ ಮತ್ತು ವಿದೇಶಿಯರ ನಡೆಸಿದ ಚುನಾವಣೆ, ವ್ಯಾಪಕ ಬಹಿಷ್ಕಾರ, ಸಾರ್ವಜನಿಕಗೊಳಿಸಿದ ಅಭ್ಯರ್ಥಿ ಪಟ್ಟಿ, ಪಟ್ಟಿಯಲ್ಲಿ ಯಾರು ಆಯ್ಕೆ ಆಗುತ್ತಾರೆ ಎಂಬ ಬಗ್ಗೆ ಅನಿಶ್ಚಿತತೆ - ಇವೆಲ್ಲಾ ಚುನಾವಣೆಯ ಕಪಟ ನಾಟಕ ಬಯಲು ಮಾಡಿದೆ.



ಇರಾಕಿನಿಂದ ಅಮೆರಿಕ ಕಾಲ್ತೆಗೆಯಬೇಕು

ಇರಾಕ್‌ನಲ್ಲಿ ಯಾವುದೇ ರೀತಿಯ ಸಕಾರಾತ್ಮಕ ಬದಲಾವಣೆಗಳನ್ನು ಈ ಚುನಾವಣೆ ತಂದಿಲ್ಲ. ತರುವ ಸಾಧ್ಯತೆಯೂ ಇಲ್ಲ. ಆದ್ದರಿಂದ ಈ ಚುನಾವಣೆಯ ಹಿಂದಿನ ಕಪಟ ನಾಟಕ ಬಯಲು ಮಾಡಬೇಕು. ಅಮೇರಿಕದ ಇರಾಕಿ ಅತಿಕ್ರಮಣದ ಎರಡನೇ ವಾರ್ಷಿಕ (ಮಾರ್ಚ್ 19-20) ಹತ್ತಿರ ಬರುತ್ತಿರುವ ಸಂದರ್ಭದಲ್ಲಿ, ಅದರಲ್ಲಿಯೂ ವ್ಯಾಪಕ ಪ್ರಬಲ ಪ್ರಚಾರ - ಪ್ರಕ್ಷೋಭೆ ನಡೆಸಬೇಕು. ಚುನಾವಣೆಯ ಕಪಟ ನಾಟಕ ಬಯಲು ಮಾಡಬೇಕು.

ಈ ಮೂರು ಅಂಶಗಳ ಬಗ್ಗೆ ಪ್ರಬಲ ಒತ್ತಡ ತರುವ ಅಂತರ್ರಾಷ್ಟ್ರೀಯ ಚಳುವಳಿ ನಡೆಯಬೇಕು.

- ಅಮೆರಿಕ ತನ್ನ ಸೈನ್ಯವನ್ನು ಇರಾಕ್‌ನಿಂದ ಹಿಂತೆಗೆದುಕೊಳ್ಳಬೇಕು. ಅಮೆರಿಕ ಮತ್ತು ಅಮೆರಿಕನ್ ಕಂಪನಿಗಳು ಇರಾಕ್‌ನ ಆರ್ಥಿಕ ಸಂಪನ್ಮೂಲಗಳನ್ನು ಬೇಕಾಬಿಟ್ಟಿ ಬಳಸಿಕೊಳ್ಳಲು ಮಾಡಿದ ಒಪ್ಪಂದಗಳ ಕಾನೂನುಗಳನ್ನು ರದ್ದುಗೊಳಿಸಬೇಕು.

ವಿಶ್ವಸಂಸ್ಥೆಯ ಮೇಲ್ವಿಚಾರಣೆಯಲ್ಲಿ ಮಧ್ಯಂತರ ಸರ್ಕಾರ ರಚಿಸಬೇಕು. ಅದರ ಮೇಲ್ವಿಚಾರಣೆಯಲ್ಲಿ ಸಾರ್ವಭೌಮ ಇರಾಕಿ ಸರ್ಕಾರ ರಚನೆಗೆ ಚುನಾವಣೆಗಳನ್ನು ನಡೆಸಬೇಕು.

ಅಮೆರಿಕ ಇರಾಕ್ ಯುದ್ಧದಲ್ಲಿ, ಆಮೇಲೆ ನಡೆಸಿದ ಯುದ್ಧ ಅಪರಾಧಗಳ ಬಗ್ಗೆ ವಿಚಾರಣೆ ನಡೆಸಿ ಶಿಕ್ಷೆ ವಿಧಿಸಲು ಒಂದು ಅಂತರ್ರಾಷ್ಟ್ರೀಯ ಟ್ರಿಬ್ಯುನಲ್ ರಚಿಸಬೇಕು.

ಸಿಪಿಐ(ಎಂ) 4ನೇ ಮಂಡ್ಯ ಜಿಲ್ಲಾ ಸಮ್ಮೇಳನ

ನವ ಚೈತನ್ಯದೊಂದಿಗೆ ಪಕ್ಷ ವಿಸ್ತರಿಸುವ ತೀರ್ಮಾನ

ಸಿಪಿಐ(ಎಂ)ನ ಮಂಡ್ಯ ಜಿಲ್ಲಾ ಸಮ್ಮೇಳನವು ಮಳವಳ್ಳಿ ತಾಲ್ಲೂಕಿನ ನೆಲಮಾಕನಹಳ್ಳಿಯಲ್ಲಿ ಯಶಸ್ವಿಯಾಗಿ ಜರುಗಿತು. ಈ ಸಮ್ಮೇಳನ ಪ್ರಚಾರ ಪ್ರಕ್ಷೋಭೆಗಳೊಂದಿಗೆ ನಡೆಯಿತು. ಸಿಪಿಐ(ಎಂ)ನ ಜಿಲ್ಲಾ ಸಂಘಟನಾ ಸಮಿತಿಯು ನೆಲಮಾಕನಹಳ್ಳಿಯಲ್ಲಿ ನಡೆಸಬೇಕು ಎಂದು ತೀರ್ಮಾನಿಸಿದಾಗ ನೆಲಮಾಕನಹಳ್ಳಿಯ ಒಂದೇ ಶಾಖೆ ಸಂಪೂರ್ಣವಾಗಿ ಜವಾಬ್ದಾರಿಯು ಹೊರಬೇಕಾಯಿತು. ಸಮ್ಮೇಳನದ ತಯಾರಿಗಾಗಿ ಸ್ವಾಗತ ಸಮಿತಿ ರಚಿಸಿ ಅಧ್ಯಕ್ಷರಾಗಿ ಎನ್ ಎಲ್ ಭರತ್‌ರಾಜ್, ಕಾರ್ಯದರ್ಶಿಯಾಗಿ ಆರ್.ಕೃಷ್ಣ, ಖಜಾಂಚಿಯಾಗಿ ಎಂ.ಲಿಂಗರಾಜ್ ಮತ್ತು ನೆಲಮಾಕನಹಳ್ಳಿಯ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಯ 13 ಹಳ್ಳಿಗಳಲ್ಲಿರುವ ಪಕ್ಷದ ಹಿತೈಷಿಗಳು, ಸಾಮೂಹಿಕ ಸಂಘಟನೆಯ ಮುಖಂಡರನ್ನು ಒಳಗೊಂಡ ವಿಶಾಲ ಸ್ವಾಗತ ಸಮಿತಿಯನ್ನು ರಚಿಸಲಾಯಿತು. ಅಲ್ಲದೆ ಈ ವ್ಯಾಪ್ತಿಯಲ್ಲೇ ಹಣ ಸಂಗ್ರಹ ಮಾಡಬೇಕು. ಬಂಡವಾಳಶಾಹಿ ಪಕ್ಷಗಳ ಪ್ರಮುಖ ಮುಖಂಡರಿಂದ ಹಣ ಸಂಗ್ರಹ ಮಾಡಬಾರದೆಂದು ತೀರ್ಮಾನಿಸಿ ಅದರಂತೆ ಕರಪತ್ರ ಮುದ್ರಿಸಿ 13 ಹಳ್ಳಿಗಳ ಮನೆ ಮನೆಗೆ ಹೋಗಿ ಅಕ್ಕಿ, ರಾಗಿ, ಕಾಳು, ಸಾಂಬಾರುಪುಡಿ, ತೆಂಗಿನಕಾಯಿ, ಉಪ್ಪು, ಹುಣಸೆಹಣ್ಣು, ಮೆಣಸಿನಕಾಯಿ ಪ್ರತಿ ಮನೆಯಿಂದ ಏನಾದರೂ ಸಹಾಯ ಪಡೆಯುತ್ತಿದ್ದರು. ಇದು ನಮ್ಮ ಕಾರ್ಯಕ್ರಮ. ಇದು ನಮ್ಮ ಪಕ್ಷ, ಇದು ದುಡಿಯುವ ವರ್ಗದ ಕುಡುಗೋಲುಸುತ್ತಿಗೆ ಎಂಬ ಭಾವನೆ ಮೂಢಿಸುವ ರೀತಿಯಲ್ಲಿ ಸಂಗ್ರಹ ಮಾಡಲಾಯಿತು. ಇದು ಕಾಮನ ಹಬ್ಬಕ್ಕೆ ಪ್ರತಿ ಮನೆಯಿಂದ ಸೌದೆ ಪಡೆಯುವಂತೆ ಇತ್ತು. ಜನರಿಗು ಸಹ ವಿಪರೀತ ಕೆಲಸದ ಒತ್ತಡವಿತ್ತು. ಅಲ್ಲದೆ ಸುಗ್ಗಿಯ ಸಮಯ ಮತ್ತು ರೇಷನ್ ಅಂಗಡಿಯಿಂದ ತಂದಿದ್ದ ಅಕ್ಕಿಯು ಮುಗಿದ ಸಮಯವಿದು. ಆದರೂ ನಮ್ಮ ಕೈಲಾದ ಸಹಾಯ ಮಾಡುತ್ತೇವೆ. ಇನ್ನೂ 15 ದಿನ ಕಳೆದಿದ್ದರೆ 10 ಕೆ.ಜಿ, 20 ಕೆ.ಜಿ ಅಕ್ಕಿ ಕೊಡುತ್ತಿದ್ದೊ ಅನ್ನುತ್ತಿದ್ದರು. ಮನೆ ಮನೆ ಸಂಗ್ರಹದಲ್ಲಿ ಜನವಾದಿ ಮಹಿಳಾ ಸಂಘಟನೆಯ ಸಂಗಾತಿಗಳು ಮತ್ತು ಡಿವೈಎಫ್‌ಐನ ಸಂಗಾತಿಗಳು ನಿಸ್ಸಂಕೋಚದಿಂದ ಸಂಗ್ರಹ ಮಾಡುತ್ತಿದ್ದರು. ಸಂಗ್ರಹ ಮಾಡುವ ಸಮಯದಲ್ಲಿ ಕಂದೇಗಾಲದಲ್ಲಿ ಭಿಕ್ಷುಕನೊಬ್ಬ ಇದು ಏನೆಂದು ಕೇಳಿದಾಗ ನಮ್ಮ ಸಂಗಾತಿಯೊಬ್ಬರು ಇದು ಜನಸಾಮಾನ್ಯರ, ಬಡವರ ಪಕ್ಷದ ಸಮ್ಮೇಳನ ನಡೆಯುತ್ತಿದೆ. ನಾವು ಬಡವರ ಹತ್ತಿರ ಸಂಗ್ರಹ ಮಾಡುತ್ತಿದ್ದೇವೆಯೊಂದು ಹೇಳಿದಾಗ ಆತ ಅರ್ಧಗಂಟೆಯಲ್ಲಿ ಭಿಕ್ಷೆ ಎತ್ತಿ ಬಂದು 25 ರೂಗಳನ್ನು ಸಹಾಯ ಮಾಡಿದ. ಸುಮಾರು 10,000 ರೂ. ನಗದು ಮತ್ತು 10,000 ಮೌಲ್ಯದ ವಸ್ತುರೂಪದಲ್ಲಿ ಸಂಗ್ರಹವಾಯಿತು. ಇದರಿಂದ ಪಕ್ಷದ ಸದಸ್ಯರಲ್ಲಿ ಆತ್ಮವಿಶ್ವಾಸ ಮೂಡಿದ್ದಲ್ಲದೆ ಇಂತಹ ಕಾರ್ಯಕ್ರಮದಿಂದ ನಮ್ಮ ವ್ಯಾಪ್ತಿಯಲ್ಲಿ 10 ವರ್ಷಗಳಲ್ಲಿ ಆಗದೆ ಇದ್ದ ಪ್ರಭಾವ ಈ ಸಮ್ಮೇಳನದಿಂದ ಆಗಿರುವುದು ಕಂಡುಬಂತು. ಡಿಸೆಂಬರ್ 25 ರಂದು ನೆಲಮಾಕನಹಳ್ಳಿಯಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಈ ವಿಚಾರ ಎನ್‌ಎಮ್ ಹಳ್ಳಿ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಯ ಹಳ್ಳಿಗಳ ಮನೆ ಮನೆ ಮಾತಾಗಿತ್ತು. ಕೆಲವರು ಇವರು ನಮಗೆ ವಿಪರೀತ ಭತ್ತ ಕೊಯ್ಲು ಮಾಡುವ, ಭತ್ತ ಒಕ್ಕಣೆ ಮಾಡುವ ಸಂದರ್ಭದಲ್ಲಿ ಹಾಕಿಕೊಂಡಿದ್ದಾರೆ. ಈ ಕಾರ್ಯಕ್ರಮ 15 ದಿನ ಮುಂದಕ್ಕೆ ಹಾಕಿದರೆ ನಾವೆಲ್ಲರೂ ಭಾಗವಹಿಸಬಹುದಿತ್ತು ಎಂದು ಬೇಸರ ವ್ಯಕ್ತಪಡಿಸಿದರು. ಪ್ರಚಾರದಲ್ಲಿ ಪೋಸ್ಟರ್, ಬ್ಯಾನರ್ ಆಟೋ ಪ್ರಚಾರ ಬಿಟ್ಟರೆ, ಪತ್ರಿಕಾಹೇಳಿಕೆ



ಎಲ್ಲವನ್ನು ನೋಡಿದ ಜನರಿಗೆ ಸಮ್ಮೇಳನ ಚರ್ಚಾ ವಿಷಯವಾಗಿತ್ತು. ಬಹಿರಂಗ ಸಭೆಗೆ 5 ಹಳ್ಳಿಗಳಿಂದ ಟ್ರ್ಯಾಕ್ಟರ್ ಮಾಡಿಕೊಂಡು ಬಂದಿದ್ದಲ್ಲದೆ ಅಕ್ಕಪಕ್ಕದ ಹಳ್ಳಿಗಳಿಂದ ನಾಲ್ಕೈದು ಕಿ.ಮೀ ನಡೆದುಕೊಂಡು ಬಂದಿದ್ದರು. ಸುಮಾರು 600-700 ಜನರು ಬಹಿರಂಗ ಸಭೆಗೆ ಭಾಗವಹಿಸಿದ್ದರು. ಬಹಿರಂಗ ಸಭೆಗೆ ಎಮ್.ಎನ್.ಉಗ್ರಪ್ಪ ವೇದಿಕೆ ಎಂದು ಹೆಸರಿಡಲಾಗಿತ್ತು. ಇದರ ಉದ್ಘಾಟನೆಯನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜು ಮಾಡಿದರು. ಮುಖ್ಯ ಅತಿಥಿಗಳಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿ ಉಪಸ್ಥಿತರಿದ್ದರು. ವೇದಿಕೆಯಲ್ಲಿ ಡಿ.ಒ.ಸಿ ಸದಸ್ಯರಾದ ಎನ್.ಎಲ್.ಭರತರಾಜ್, ಜಿ.ರಾಮಕೃಷ್ಣ, ಟಿ.ಎಲ್.ಕೃಷ್ಣೇಗೌಡ, ಟಿ.ಎಂ.ಶಿವಕಾಳಯ್ಯ, ಟಿ.ಹೆಚ್. ಆನಂದ್, ದೇವಿ, ಕುಮಾರಿ ಹಾಜರಿದ್ದರು. ಅಧ್ಯಕ್ಷತೆಯನ್ನು ಎಂ.ಪುಟ್ಟಮಾದು ವಹಿಸಿದ್ದರು.

ನಂತರ ಧ್ವಜಾರೋಹಣ ಕಾರ್ಯಕ್ರಮವನ್ನು ಹಿರಿಯ ಸಂಗಾತಿ ಅಬ್ದುಲ್‌ರವರು ನೆರವೇರಿಸಿದರು. ಪ್ರತಿನಿಧಿ ಅಧಿವೇಶನ ಕಾಂ.ಸೂರ್ಯನಾರಾಯಣರಾವ್ ನಗರದಲ್ಲಿ ಅರ್ಥಪೂರ್ಣ ಚರ್ಚೆ ಹಾಗೂ ವಿಮರ್ಶೆ, ಸ್ವವಿಮರ್ಶೆ ನಡೆಯುವುದರ ಜೊತೆಗೆ ಪಕ್ಷವನ್ನು ವಿಸ್ತಾರ ಮಾಡಬೇಕು. ಗಟ್ಟಿಗೊಳಿಸಬೇಕು, ಎಲ್ಲ ಸದಸ್ಯರು ದುಡಿಯಬೇಕೆಂಬ ಹಂಬಲ ಪಕ್ಷದ ಯುವ ಸದಸ್ಯರಲ್ಲಿ ಎದ್ದು ಕಾಣುತ್ತಿತ್ತು. ಈ ಸಮ್ಮೇಳನದಲ್ಲಿ ಕೆಲವು ನಿರ್ಣಯಗಳನ್ನು ಕೈಗೊಳ್ಳ ಲಾಯಿತು. ರೈತರ ಪಂಪ್‌ಸೆಟ್ ಗಳಿಗೆ ಮೀಟರ್ ಅಳವಡಿಕೆ ಬೇಡ, ಬಡ ರೈತರ ಸಾಲವನ್ನು ಮನ್ನಾ ಮಾಡಬೇಕು. ದೊಡ್ಡ ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಬೇಕು, ಭಾಗ್ಯಜ್ಯೋತಿಗೆ ಮೀಟರ್ ಅಳವಡಿಸಬಾರದು. ಸಕ್ಕರೆ ಕಾರ್ಖಾನೆಗಳನ್ನು ಪುನಃಶ್ಚೇತನಗೊಳಿಸಬೇಕು. ಎಲ್ಲ ಬಡವರಿಗೆ ಹಳದಿಪಡಿತರ ಚೀಟಿ, ವಸತಿ, ನಿವೇಶನ ಕೊಡಬೇಕು ಮತ್ತು ವೃತ್ತಿಶಿಕ್ಷಣಕ್ಕೆ ಸಂಬಂಧಪಟ್ಟಂತೆ ಕೇಂದ್ರೀಯ ಶಾಸನ ಜಾರಿಗೆ ತರಬೇಕೆಂದು ನಿರ್ಣಯ ಕೈಗೊಳ್ಳಲಾಯಿತು ಮತ್ತು ನೂತನ ಜಿಲ್ಲಾ ಸಂಘಟನಾ ಸಮಿತಿಯನ್ನು ಆಯ್ಕೆ ಮಾಡಲಾಗಿದ್ದು ಕಾರ್ಯದರ್ಶಿಯಾಗಿ ಎಂ.ಪುಟ್ಟಮಾದಯ್ಯ, ಸದಸ್ಯರಾಗಿ ಎನ್.ಎಲ್. ಭರತರಾಜ್, ಜಿ.ರಾಮಕೃಷ್ಣ, ಎಚ್.ಆನಂದ್, ಟಿ.ಎಂ.ಶಿವಕಾಳಯ್ಯ, ಟಿ.ಎಲ್.ಕೃಷ್ಣೇಗೌಡ, ಟಿ.ಯಶವಂತ್, ಜಿ.ವಿ.ಗೋವಿಂದಯ್ಯ, ದೇವಿ, ಕುಮಾರಿ ಆಯ್ಕೆಯಾಗಿದ್ದಾರೆ.

ಎನ್.ಎಲ್.ಭರತ್‌ರಾಜ್

ಸಿಪಿಐ(ಎಂ) ಮೈಸೂರು ಜಿಲ್ಲಾ ಸಮ್ಮೇಳನ

ಸಿಪಿಐ(ಎಂ) 18ನೇ ಮಹಾಧಿವೇಶನಕ್ಕೆ ಹಾಗೂ ರಾಜ್ಯ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಮೈಸೂರು ಜಿಲ್ಲಾ ಸಮ್ಮೇಳನ ಜನವರಿ 2-3 ಮೈಸೂರಿನಲ್ಲಿ ನಡೆಯಿತು.

ಜನವರಿ 2 ರಂದು ಧ್ವಜಾರೋಹಣ ಮಾಡುವುದರಿಂದ ಸಮ್ಮೇಳನ ಆರಂಭವಾಯಿತು. ಪಕ್ಷದ ಸದಸ್ಯರು ಹಾಗೂ ಹಿತೈಷಿಗಳು ಮೈಸೂರಿನ ಕೆಲವು ಮುಖ್ಯರಸ್ತೆಗಳ ಮೂಲಕ ಮೆರವಣಿಗೆ ನಡೆಸಿ ಉದ್ಘಾಟನಾ ಸಮಾರಂಭಕ್ಕಾಗಿ ಪುರಭವನ ಸೇರಿದರು. 250 ಕ್ಕೂ ಹೆಚ್ಚು ಜನ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಉದ್ಘಾಟನೆ ಸಮಾರಂಭ ಜಗದೀಶರವರ ಸ್ವಾಗತ ಭಾಷಣದೊಂದಿಗೆ ಆರಂಭವಾಯಿತು. ಮೊದಲಿಗೆ ಕಳೆದ ಸಮ್ಮೇಳನದಿಂದ ನಮ್ಮನ್ನಗಲಿದ ಪಕ್ಷದ ಮುಖಂಡರುಗಳು ಇತರ ಗಣ್ಯರು ಹಾಗೂ ಸುನಾಮಿ ಪ್ರಕೋಪದಲ್ಲಿ ಮಡಿದವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ನಿತ್ಯಾನಂದಸ್ವಾಮಿಯವರು ಸಮ್ಮೇಳನವನ್ನು ಉದ್ಘಾಟಿಸಿದರು.

ಮನುಕುಲವನ್ನು ನಾಶಪಡಿಸುವ ಶಸ್ತ್ರಾಸ್ತ್ರಗಳನ್ನು ತಯಾರಿಸಲು ಅಗಾಧ ಸಂಪನ್ಮೂಲಗಳನ್ನು ವ್ಯಯ ಮಾಡುವ ಅಮೇರಿಕಾ ಮತ್ತಿತರ ಬಂಡವಾಳಶಾಹಿ ದೇಶಗಳು ಪದೇ ಪದೇ ಯುದ್ಧಸಾರಿ ಜನರನ್ನು ಕೊಲ್ಲುತ್ತಲಿವೆ. ಪ್ರಕೃತಿಯ ವಿಕೋಪವನ್ನೆದುರಿಸಲು ಬಳಸಬಹುದಾದ ಸಂಪನ್ಮೂಲಗಳನ್ನು ಯುದ್ಧಗಳಿಗೆ ಬಳಸುತ್ತಿರುವುದನ್ನು ಖಂಡಿಸಿದರು. ಅವರು ಮುಂದುವರೆದು 17ನೇ ಮಹಾಧಿವೇಶನದಿಂದೀಚೆಗೆ ಆಗಿರುವ ಅಂತರರಾಷ್ಟ್ರೀಯ ಹಾಗೂ ರಾಷ್ಟ್ರೀಯ ಬೆಳವಣಿಗೆಗಳನ್ನು ವಿಶ್ಲೇಷಿಸಿದರು. ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ನಡೆಸಿದ ಪ್ರಯತ್ನಗಳನ್ನು ವಿಫಲಗೊಳಿಸಲಾಗಿದೆ. ಆದರೆ ಕೃಷ್ಣ ಸರ್ಕಾರದ ವಿರುದ್ಧ ಸಿಟ್ಟಿಗೆದ್ದಿದ್ದ ಜನರ ಮತಗಳು ಕೆಲವೆಡೆ ಬಿಜೆಪಿಗೆ ಬಿದ್ದಿದ್ದು ಬಿಜೆಪಿ ಸ್ವಲ್ಪ ಹೆಚ್ಚು ಸ್ಥಾನಗಳಿಸಲು ಸಾಧ್ಯವಾಯಿತು. ಜಾತ್ಯಾತೀತ ಸಮ್ಮಿಶ್ರ ಸರ್ಕಾರ ಅಸ್ತಿತ್ವದಲ್ಲಿದೆ.



ಈ ಬಂಡವಾಳಶಾಹಿ ಪಕ್ಷಗಳು ಜಾಗತೀಕರಣದ ಪರವಾಗಿಯೇ ಇವೆ. ಆದ್ದರಿಂದ ನಾವು ನಿರಂತರ ಹೋರಾಟ ನಡೆಸಬೇಕಿದೆ ಎಂದು ಕಾರ್ಮಿಕರ ಜವಾಬ್ದಾರಿನ್ನು ನಿತ್ಯಾನಂದಸ್ವಾಮಿ ನೆನಪು ಮಾಡಿದರು.

ಬಸವರಾಜರವರು ವಂದನಾರ್ಪಣೆ ಸಲ್ಲಿಸಿದರು.

ಮೂರು ಜನರ ಅಧ್ಯಕ್ಷ ಮಂಡಳಿ ಪ್ರತಿನಿಧಿಗಳ ಅಧಿವೇಶನವನ್ನು ನಡೆಸಿಕೊಟ್ಟಿತು. ಪ್ರತಿನಿಧಿಗಳ ಸಭೆಯಲ್ಲಿ ಜಿಲ್ಲಾ ಸಂಘಟನಾ ಸಮಿತಿಯು ವರದಿಯನ್ನು ಮಂಡಿಸಲಾಯಿತು. ಜಿಲ್ಲೆಯ ರಾಜಕೀಯ, ಆರ್ಥಿಕ, ಸಾಮಾಜಿಕ ಪರಿಸ್ಥಿತಿಗಳ ಅವಲೋಕನವನ್ನೊಳಗೊಂಡ ವರದಿಯು ಪಕ್ಷದ ಕೆಲಸದ ಸಂಘಟನೆಯ ಸ್ಥಿತಿದ ಸಾಮೂಹಿಕ ಸಂಘಟನೆಗಳ ಪರಿಸ್ಥಿತಿಗಳನ್ನು ವಿವರಿಸಿತು. ನಂತರ ಪ್ರತಿನಿಧಿಗಳು ಶಾಖಾವಾರು ಅಧ್ಯಯನ ಮಾಡಲು ಸಮಯಾವಕಾಶ ನೀಡಲಾಯಿತು.

ಮರುದಿನ ಚರ್ಚೆಯಲ್ಲಿ ಎಲ್ಲಾ ಸದಸ್ಯರುಗಳು ಪಾಲ್ಗೊಂಡರು. ಚರ್ಚೆಯು ಆರೋಗ್ಯಕರವಾಗಿ ಪ್ರಬುದ್ಧವಾಗಿತ್ತು. ಚರ್ಚೆಗೆ ಕಾರ್ಯದರ್ಶಿ ಉತ್ತರ ನೀಡಿದ ನಂತರ ಕೆಲ ಸೇರ್ಪಡೆಯೊಂದಿಗೆ ವರದಿ ಅಂಗೀಕೃತವಾಯಿತು.

ಸಮ್ಮೇಳನವು 26 ನಿರ್ಣಯಗಳನ್ನು ಅಂಗೀಕರಿಸಿತು. ಅವುಗಳಲ್ಲಿ ಮುಖ್ಯವಾದವುಗಳು ಈ ಕೆಳಗಿನಂತಿವೆ.

ರೈಲು ಮಾರ್ಗಗಳಿಗಾಗಿ ಒತ್ತಾಯ : ಬೆಂಗಳೂರು-ಮೈಸೂರು ಜೋಡಿ ರೈಲುಮಾರ್ಗ, ಮೈಸೂರು - ಮಡಿಕೇರಿ ಮಾರ್ಗ, ಕೇರಳದ ವೈನಾಡಿಗೆ ಸಂಪರ್ಕ ಕಲ್ಪಿಸುವ ಮಾರ್ಗ, ಚಾಮರಾಜನಗರ-ಮೆಟ್ಟುಪಾಳ್ಯಂ ರೈಲುಮಾರ್ಗಗಳನ್ನು ನಿರ್ಮಾಣ ಮಾಡಬೇಕು.

ಹುಣಸೂರಿನಲ್ಲಿ ಹತ್ತಿ ಮಾರುಕಟ್ಟೆಯನ್ನು ಸ್ಥಾಪಿಸಬೇಕು.

ಹೆಚ್‌ಡಿ ಕೋಟೆ ಮತ್ತು ಹುಣಸೂರು ಪ್ರದೇಶದಲ್ಲಿ ವಾಸವಿರುವ ಗಿರಿಜನರನ್ನು ಒಕ್ಕಲೆಬ್ಬಿಸಬಾರದು. ಅವರಿಗೆ ಅರಣ್ಯ ಪ್ರದೇಶದಲ್ಲೇ ಕನಿಷ್ಠ ನಾಗರೀಕ ಸೌಲಭ್ಯಗಳನ್ನು ಒದಗಿಸಿ ಅವರ ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸಬೇಕು.

ನಂಜನಗೂಡಿನಲ್ಲಿ ಹೆಚ್ಚುತ್ತಿರುವ ಕೈಗಾರಿಕೆಗಳನ್ನು ಗಣನೆಗೆ ತೆಗೆದುಕೊಂಡು ಈಗಿರುವ ಇ.ಎಸ್.ಐ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಬೇಕು.

ನಿರ್ಣಯಗಳ ಜಾರಿಗೆ ಒತ್ತಾಯಿಸಿ ಮುಂದಿನ ದಿನಗಳಲ್ಲಿ ಹಂತಹಂತವಾಗಿ ಹೊರಾಟದ ಕಾರ್ಯಕ್ರಮವನ್ನು ರೂಪಿಸಲು ಸವಮೇಳನ ನಿರ್ಧರಿಸಿತಲ್ಲದೆ ಇದಕ್ಕಾಗಿ ನಗರ ಮತ್ತು ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ತುರ್ತಾಗಿ ಪಕ್ಷವನ್ನು ಬಲಪಡಿಸಲು ನಿರ್ಧರಿಸಲಾಯಿತು.

ಕಾಂ.ನಿತ್ಯಾನಂದ ಸ್ವಾಮಿಯವರು ಚರ್ಚೆಯಲ್ಲಿ ಬಂದ ಕೆಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ರಾಜಕೀಯ ಹಾಗೂ ಸೈದ್ಧಾಂತಿಕ ಅಂಶಗಳನ್ನು ವಿವರಿಸಿದರು.

ನಂತರ ಮುಂದಿನ ಅವಧಿಗೆ 10 ಜನರ ಜಿಲ್ಲಾ ಸಂಘಟನಾ ಸಮಿತಿ ಸರ್ವಾನುಮತದಿಂದ ಆಯ್ಕೆ ಆಯಿತು.

ನೂತನ ಸಮಿತಿ

ಎನ್.ಎಸ್.ಪ್ರಭಾಕರ್ (ಕಾರ್ಯದರ್ಶಿ)
ಜಿ.ಜಯರಾಮು
ಕೆ.ಬಸವರಾಜು
ಎಚ್.ಎಸ್.ಜಗದೀಶ್
ವಿಜಯಕುಮಾರ್
ಬಾಲಾಜಿರಾವ್
ಜಗನ್ನಾಥ್
ಸುಬ್ರಹ್ಮಣ್ಯ
ಸೋಮಶಂಕರ್
ಬಿ.ಲಿಂಗರಾಜು

ಕಾಂ.ವಿಜೆಕೆ ನಾಯರ್‌ರವರ ಸಮಾರೋಪ ಭಾಷಣದೊಂದಿಗೆ ಸಮ್ಮೇಳನ ಮುಕ್ತಾಯಗೊಂಡಿತು.

ಸಿಪಿಐ(ಎಂ) ಕೊಡಗು ಜಿಲ್ಲಾ ಸಮ್ಮೇಳನ

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಲ್ಲೆಯ ಆರ್ಥಿಕ ಪರಿಸ್ಥಿತಿ ಹದಗೆಟ್ಟಿತು. ಜಿಲ್ಲೆಯ ಮುಖ ಆರ್ಥಿಕ ಬೆಳೆಗಳಾದ ಕಾಫಿ, ಭತ್ತ, ಮೆಣಸು, ಏಲಕ್ಕಿ ಪ್ರತಿಯೊಂದರ ಬೆಲೆ ಪೂರ್ಣ ಕುಸಿದಿದ್ದು, ಇದರಿಂದ ಸಣ್ಣ ಮಧ್ಯಮ ಳೆಗಾರರು ಬಳಲಳಿದಿದ್ದಾರೆ. ಶ್ರೀಮಂತ ಳೆಗಾರರಿಗೂ ಇದರ ಬಿಸಿ ತಟ್ಟಿದೆ. ತೋಟ ರ್ಮಿಕರು ಮತ್ತು ಕೃಷಿ ಕಾರ್ಮಿಕರ ಮೇಲೆ ಇದು ಹತ್ತರ ಪರಿಣಾಮ ಬೀರಿದೆ. ರೈತರ ಸಾಲದ ೊರೆ ಹೆಚ್ಚಾಗಿದ್ದು ಮರುಪಾವತಿ ಮಾಡಲು ಧ್ಯವಾಗದೆ ನರಳುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲೂ ವಾರು 36 ಜನ ರೈತರು ಆತ್ಮಹತ್ಯೆ ಾಡಿಕೊಂಡಿದ್ದಾರೆ.

ಕಳೆದ ಅವಧಿಯ ಎಸ್.ಎಂ.ಕೃಷ್ಣ ಸರಕಾರದಲ್ಲಿ ಲ್ಲೆಯಲ್ಲಿ ಮೂರು ಮಂತ್ರಿಗಳಿದ್ದು ಕೊಡಗಿನ ಭಿವೃದ್ಧಿಯ ಬಗ್ಗೆ ಹೆಚ್ಚಿನ ಗಮನ ನೀಡದಿರುವುದು. ಳಜಗಳ, ಗುಂಪುಗಾರಿಕೆ, ಪರಸ್ಪರ ಕಾಲೆಳೆಯುವ ವೃತ್ತಿ ನಡೆಸುವುದರಲ್ಲೇ ಕಾಲ ಕಳೆದಿದ್ದರಿಂದ ಜ್ಯ ಸರಕಾರ ಮತ್ತು ಮಂತ್ರಿಗಳ ರ್ಲಕ್ಷ್ಯತೆಯನ್ನು ಉಪಯೋಗಿಸಿಕೊಂಡು ಲ್ಲೆಯಲ್ಲಿ ಮತಾಂಧತೆಯನ್ನು ಹರಿಯಬಿಟ್ಟ ತೀಯ ಅಲ್ಪಸಂಖ್ಯಾತರ ಮೇಲೆ ನಿರಂತರ ಧಾಳಿ ಡೆಸಲು ಬಾ.ಜ.ಪ ಯೋಜನೆ ರೂಪಿಸಿರುವುದರ ರಿಣಾಮ ಜಿಲ್ಲೆಯಲ್ಲಿ ಎರಡು ವಿಧಾನಸಭಾ ಸ್ಥಾನಗಳಲ್ಲಿ ಬಿಜೆಪಿ ಗೆಲ್ಲಲು ಸಾಧ್ಯವಾಯಿತು. ಂದು ಸ್ಥಾನ ಮಾತ್ರ ಕಾಂಗ್ರೆಸ್ಸಿಗೆ ದಕ್ಕಿದೆ.

ಕೇಂದ್ರದಲ್ಲಿ ಎನ್‌ಡಿಎ ಸರಕಾರ ಧಿಕಾರದಲ್ಲಿದ್ದಾಗ ಈ ಲೋಕ ಸಭಾಕ್ಷೇತ್ರವನ್ನು ನಂಜಯ ಕುಮಾರ್ ಬಾ.ಜ.ಪದ ಸಂಸದರಾಗಿ ್ರತಿನಿಧಿಸುತ್ತಿದ್ದರು. ಕೇಂದ್ರದಲ್ಲಿ ಂತ್ರಿಯಾಗಿದ್ದರು. ಇವರು ಜಿಲ್ಲೆಯನ್ನು ರ್ಲಕ್ಷಿಸಿದ್ದರ ಜೊತೆಗೆ ಬೆಳೆಗಾರರ ದಿಕ್ಕು ತಪ್ಪಿಸುವ ಲಸ ಮಾಡಿ ಬೆಳೆಗಾರರನ್ನು ಭ್ರಮಾ ಲೋಕದಲ್ಲಿ ರಿಸುವ ಕೆಲಸವನ್ನು ಸದಾ ಮಾಡುತ್ತಾ ಬಂದರು. ಫಿ ಸಮಸ್ಯೆಗೆ ಕೇಂದ್ರ ಸರಕಾರ ಬದ್ಧ ಎಂಬ ಚನ ಕೊಟ್ಟು ಕೇಂದ್ರದ ಆರ್ಥಿಕ ಂತ್ರಿಯನ್ನೊಳಗೊಂಡು ಮೂವರು ಮಂತ್ರಿಗಳನ್ನು ೂಡಗಿಗೆ ಕರೆತಂದು ಬೆಳೆಗಾರರಿಂದ ಸನ್ಮಾನ ಾಡಿಸಿ ಕಾಫಿ ಬೆಂಬಲ ಬೆಲೆ ಸಾಲ ಮನ್ನಾವನ್ನು ಈ ವರ್ಷವೇ ಮಾಡುವುದಾಗಿ ಅವರಿಂದ ಭರವಸೆ ೂಡಿಸಲಾಯಿತಾದರೂ ಅನಂತರ ಯಾವ ೌಲಭ್ಯವನ್ನು ಅನುಷ್ಠಾನಕ್ಕೆ ತರದೆ, ಂಚಿಸಲಾಯಿತು. ಇತ್ತೀಚೆಗೆ ನಡೆದ ಲೋಕಸಭಾ ುನಾವಣೆಯ ಸಂದರ್ಭದಲ್ಲಿ ಬಾ.ಜ.ಪದ ಮೇಲಿನ ಅತೃಪ್ತಿ ಹೆಚ್ಚಿದಾಗ ಅದನ್ನು ದನಂಜಯ ಕುಮಾರರ ಮೇಲಿನ ಅತೃಪ್ತಿಯನ್ನಾಗಿಸಿ ಪರಿವರ್ತಿಸಿ ಪಕ್ಷ ಬೇರೊಬ್ಬ ವ್ಯಕ್ತಿಯನ್ನು ಅಭ್ಯರ್ಥಿಯಾಗಿ ನಿಲ್ಲಿಸಿ ಈ ಕ್ಷೇತ್ರವನ್ನು ಉಳಿಸಿಕೊಳ್ಳಲು ಅವರಿಗೆ ಸಾಧ್ಯವಾಯಿತು.

ಕಳೆದ ಮೂರು ವರ್ಷಗಳಲ್ಲಿ ಸಿಪಿಐ(ಎಂ) ವಿವಿಧ ಜನ ವಿಭಾಗದ ಮಧ್ಯೆ ಅವರ ಸಮಸ್ಯೆಗಳಿಗೆ ಮಧ್ಯಪ್ರವೇಶ ಮಾಡಿದೆ. ಕಾಫಿ ಬೆಳೆಗಾರರ ಪ್ರಶ್ನೆಯನ್ನು ಎತ್ತಿಕೊಂಡು ಬಿಜೆಪಿ ವಿರೋಧಿ ಒಂದು ವಿಶಾಲವಾದ ವೇದಿಕೆ ರಚನೆ ಮಾಡಲು ಸಾಧ್ಯವಾಗಿದೆ. ಕೊಡಗಿನಲ್ಲಿ ಪ್ರಾಂತ ರೈತ ಸಂಘದ ಘಟಕ ಆರಂಭವಾಗಿದೆ.

ವಿರಾಜಪೇಟೆ ನಗರದ ಪ್ರಮುಖ ಬೇಡಿಕೆಯನ್ನು ಮುಂದಿಟ್ಟು ವಿಶಾಲವಾದ ವೇದಿಕೆ ಅಡಿಯಲ್ಲಿ ಹೋರಾಟ ನಡೆಸಿ ಪಕ್ಷದ ವರ್ಚಸ್ಸು ಹೆಚ್ಚಿದೆ. ಕೋಮುವಾದವನ್ನು ಹೆಜ್ಜೆಹೆಜ್ಜೆಗೂ ಎದುರಿಸಿ ಹೋರಾಡಿದ ಅನುಭವ. ಸ್ವಯಂ ಘೋಷಿತ ಆಸ್ತಿ ತೆರಿಗೆ. ನೀರಿನ ತೆರಿಗೆ ಹೆಚ್ಚಿದಂತಹ ಜನವಿರೋಧಿ ನೀತಿಗಳ ವಿರುದ್ಧ ಐಕ್ಯ ಹೋರಾಟ ನಡೆಸಲು ಸಾಧ್ಯವಾಗಿದೆ. ಇದನ್ನು ಸಮ್ಮೇಳನ ಗಂಭೀರವಾಗಿ ಚರ್ಚೆ ಮಾಡಿದೆ. ಪ್ರಜಾಸತ್ತಾತ್ಮಕ ಐಕ್ಯರಂಗದ ಕಟ್ಟಿಬೆಳೆಸುವದರ ಜೊತೆಗೆ, ಪಕ್ಷ ಸ್ವತಂತ್ರವಾಗಿ ಕೆಲಸ ನಿರ್ವಹಿಸಲು ಚರ್ಚೆಯಲ್ಲಿ ಬಾಗವಹಿಸಿದ ಎಲ್ಲ ಪ್ರತಿನಿಧಿಗಳ ಒಕ್ಕೊರಲಿನ ಅಬಿಪ್ರಾಯವಾಗಿತ್ತು ಪಕ್ಷ ಬಲಿಷ್ಟಗೊಳಿಸಲು ಮುಂದಿನ ಮೂರು ವರ್ಷಗಳ ಕಾಲ ನಿರಂತರ ಕಾರ್ಯಕ್ರಮ ರೂಪಿಸಲು ಸಲಹೆ ನೀಡಿದರು.

ಇಂತಹ ಸಂದರ್ಭದಲ್ಲಿ ನಡೆದ ಪಕ್ಷದ ಜಿಲ್ಲಾ ಸಮ್ಮೇಳನ ಕಾರ್ಯಕರ್ತರಿಗೆ ಸ್ಪೂರ್ತಿ ನೀಡಿದೆ. ಮುಖಂಡತ್ವಕ್ಕೂ ಹೆಚ್ಚಿನ ಜವಾಬ್ದಾರಿ ನೀಡಿದೆ. ಕಳೆದ 5-6 ವರ್ಷಗಳಲ್ಲಿ ನಡೆಯದಂತಹ ಬೃಹತ್ ರ್‍ಯಾಲಿ ಸಿದ್ದಾಪುರ, ನೆಲ್ಲ-ಹುದೇಕರಿ ಜನರಿಗೆ ಆಕರ್ಷಣೆ ನೀಡಿದೆ.

ಸಮ್ಮೇಳನ - ಸ್ಪೂರ್ತಿ

ಪಕ್ಷದ ಜಿಲ್ಲಾ ಸಮ್ಮೇಳನ ದಿನಾಂಕ 2.01.05 - 3-1-05ರಂದು ದಿ. ಕಾಂ.ಅಸ್ರಣ್ಣ ನಗರ (ಸಿದ್ದಾಪುರ) ನಡೆಯಿತು. 2.01.05 ರಂದು ನೆಲ್ಲಹುದಿಕೇರಿಯಿಂದ ಕೇರಳದ ವಾದ್ಯಗೋಷ್ಠಿಯೊಂದಿಗೆ ಮೆರವಣಿಗೆ ಪ್ರಾರಂಭವಾಗಿ ಮಧ್ಯಾಹ್ನ ಸಿದ್ದಾಪುರ ಸಾರ್ವಜನಿಕ ವೇದಿಕೆ (ಕಾಂ.ಸಿ.ನಂಜುಂಡಪ್ಪ ವೇದಿಕೆ)ಯಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಕಾರ್ಯದರ್ಶಿ ಪೀಟರ್ ಲೋಬೊ ವಹಿಸಿದರು. ಸಭೆಗೆ ಮುಖ್ಯ ಅಥಿತಿಗಳಾಗಿ ಬಿ.ಮಾದವ, ಎಸ್.ವೈ.ಗುರುಶಾಂತ್, ಕೇರಳ ರಾಜ್ಯ ಶಾಸಕರೂ ಸಿಪಿಐ(ಎಂ) ಕಣ್ಣಾನೂರು ಜಿಲ್ಲಾ ಕಾರ್ಯದರ್ಶಿ ಗೋವಿಂದ ಮಾಸ್ಟರ್, ಮಹಿಳಾ ಸಂಘಟನೆಯ ಮುಖಂಡರಾದ ಶೈಲಜಾ ಟೀಚರ್ ಭಾಗವಹಿಸಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

2.01.05 ರಂದು ಸಂಜೆ ಸಿದ್ದಾಪುರದ ಪ್ಲಾಟಿನಂ ಪ್ಲಾಜ (ಕಾಂ.ಎಸ್.ಸೂರ್ಯನಾರಾಯಣರಾವ್) ಸಭಾಂಗಣದಲ್ಲಿ ಪ್ರತಿನಿಧಿ ಸಮ್ಮೇಳನ ನಡೆಯಿತು. ಪ್ರತಿನಿಧಿಗಳ ಸಮ್ಮೇಳನವನ್ನು ಸಂಗಾತಿ ದುರ್ಗಾಪ್ರಸಾದ್ ಧ್ವಜಾರೋಹಣದ ಮುಖಾಂತರ ಉದ್ಘಾಟನೆ ಮಾಡಿದರು. ಪ್ರತಿನಿಧಿಗಳನ್ನು ಉದ್ದೇಶಿಸಿ ಬಿ.ಮಾದವರವರು ಮಾತನಾಡಿದರು. ಮೂರು ವರ್ಷಗಳ ವಿಮರ್ಶಾ ವರದಿಯನ್ನು ಕಾರ್ಯದರ್ಶಿಗಳು ಪ್ರತಿನಿಧಿಗಳ ಮುಂದೆ ಮಂಡಿಸಿದರು.



ವರದಿ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ ಪ್ರತಿನಿಧಿಗಳು ಕೆಲವು ತಿದ್ದುಪಡಿಯೊಂದಿಗೆ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ನಿರ್ಣಯಗಳು :

ಕಾಫಿ, ಕರಿಮೆಣಸಿಗೆ ನ್ಯಾಯ ಬೆಲೆ ಕೇಂದ್ರ ಸರಕಾರ ನೀಡಬೇಕು ಮರದ ಹಕ್ಕು ಜಾಗದ ಒಡೆಯನಿಗೆ ನಿಡಬೇಕು.

ಕೊಡಗಿಗೆ ರೈಲ್ವೆ ಸಂಪರ್ಕ ನೀಡಬೇಕು.

ತೋಟ ಕಾರ್ಮಿಕರಿಗೆ ಒಳಗೊಂಡಂತೆ ಅರ್ಹ ಫಲಾನುಬವಿಗಳಿಗೆ ಬಿಪಿಎಲ್ ಪಟ್ಟಿ ನೀಡಬೇಕು. ಪಿ.ಎಫ್ ಬಡ್ಡಿದರ ಹೆಚ್ಚಿಸಬೇಕು. ಸ್ವಯಂಘೋಷಿತ ಆಸ್ತಿ ತೆರಿಗೆ, ನೀರಿನ ದರವನ್ನು ಕೈಬಿಡಬೇಕು. ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸಬಾರದು ಸಿಎನ್‌ಡಿ ಲ್ಯಾಂಡಿಗೆ ಪಟ್ಟ ನೀಡಬೇಕು ಎಂಬ ನಿರ್ಣಯಗಳನ್ನು ಕೈಗೊಳ್ಳಲಾಗಿತ್ತು.

ಸಮ್ಮೇಳನದಲ್ಲಿ ಬಂದ ಚರ್ಚೆ ವಿಮರ್ಶೆಗಳ ಆಧಾರದಲ್ಲಿ ಸಂಘಟನಾ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಕಾರ್ಯದರ್ಶಿಯಾಗಿ ಪೀಟರ್ ಲೋಬೋ, ಪುನರ್ ಆಯ್ಕೆ ಮಾಡಲಾಯಿತು. ಸಮಿತಿ ಸದಸ್ಯರುಗಳಾಗಿ ದುರ್ಗಾಪ್ರಸಾದ್, ವಸಂತ್‌ಕುಮಾರ್, ಪಿ.ವೀರಸ್ವಾಮಿ, ಮಹಾದೇವ, ಜೋಸ್, ರಮಾನಾಥ್, ಭರತ್ ಇವರನ್ನು ಆಯ್ಕೆ ಮಾಡಲಾಯಿತು.

ವಿದ್ಯುತ್ ಖಾಸಗೀಕರಣ – ಸಿಪಿಐ(ಎಂ) ವಿರೋಧ

ಪುಟ 3 ರಿಂದ

ಮರೆಯಬಾರದು.

ಈ ಹಿನ್ನೆಲೆಯಲ್ಲಿ ಮುಂಬರುವ ಬಜೆಟ್ ಜನಪರವಾಗಿರಲಿ ಎಂದು ಸಿಪಿಐ(ಎಂ) ಆಶಿಸುತ್ತದೆ.

3. ಕೋಮುವಾದವು ಕರ್ನಾಟಕದಲ್ಲಿ ಹೇಗೆ ಬೆಳೆಯುತ್ತಿದೆ ಎಂಬುದರ ಕುರಿತು ಕೂಲಂಕುಷವಾಗಿ ಸಿಪಿಐ(ಎಂ) ಸಮ್ಮೇಳನವು ವಿಶ್ಲೇಷಿಸಿದ್ದು, ಅದನ್ನು ಎದುರಿಸಲು ಹಾಗೂ ಜನತೆಯಿಂದ ಪ್ರತ್ಯೇಕಗೊಳಿಸಲು ಶ್ರಮಿಸಲು ನಿರ್ಧರಿಸಿದೆ. ರಾಜಕೀಯ - ಸೈದ್ಧಾಂತಿಕ ಪ್ರಚಾರಾಂದೋಲನವನ್ನು ಒಳಗೊಂಡು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುವುದು.

4) ಕೇಂದ್ರದ ಹಾಗೂ ರಾಜ್ಯದ ಮೈತ್ರಿಕೂಟಗಳ ಸರ್ಕಾರಗಳ ಜನವಿರೋಧಿ, ಕಾರ್ಮಿಕ ವರ್ಗ ವಿರೋಧಿ ನೀತಿಗಳ ವಿರುದ್ಧ ಆಂದೋಲನ : ಕೇಂದ್ರದ ಯುಪಿಎ ಸರ್ಕಾರ ಹಾಗೂ ರಾಜ್ಯದ ಮೈತ್ರಿಕೂಟದ ಸರ್ಕಾರವು ಕೈಗೊಂಡ ಹಲವಾರು ಜನವಿರೋಧಿ ನೀತಿಗಳನ್ನು ವಿವರಿಸಿದ ಜಿ.ಎನ್.ಸಮರ್ಥವಾಗಿ ಎದುರಿಸಲು ಜನತೆಗೆ ಕರೆ ನೀಡಿದರು.

5) ಜಾತೀಯತೆ ಮತ್ತು ಅಸ್ಪೃಶ್ಯತೆ, ಮಹಿಳಾ ಅಸಮಾನತೆಯಂತಹ ಸಾಮಾಜಿಕ ಪ್ರಶ್ನೆಗಳು ಜನರನ್ನು ತೀವ್ರವಾಗಿ ಬಾಧಿಸುತ್ತಿದ್ದು, ಇವುಗಳ ವಿರುದ್ಧ ಮುಂದಿನ ದಿನಗಳಲ್ಲಿ ಚಳುವಳಿ ನಡೆಸುವುದಾಗಿ ಅವರು ವಿವರಿಸಿದರು.

ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಕುವೆಂಪುರವರ ವಿಶ್ವಮಾನವ ತತ್ವದ ಹಿಂದೆ ಮಾರ್ಕ್ಸ್‌ವಾದದ ಪ್ರಭಾವ

ವಿದ್ಯಾರ್ಥಿಗಳು ಯಾವುದೇ ಒಂದು ಜಾತಿ, ರ್ಮ ಅಥವಾ ಭಾಷೆಗಳಿಗೆ ತಮ್ಮ ಮನಸ್ಸನ್ನು ೀಮಿತಗೊಳಿಸಿಕೊಳ್ಳದೇ ಜಗತ್ತಿನ ಎಲ್ಲ ಮಾನವರು ಒಂದೇ ಎಂಬ ರಾಷ್ಟ್ರಕವಿ ುವೆಂಪುರವರ ವಿಶ್ವಮಾನವ ಸಂದೇಶವನ್ನು ೈಗೂಡಿಸಿಕೊಳ್ಳಬೇಕು ಎಂದು ತುಮಕೂರು ವಿಶ್ವ ಿದ್ಯಾನಿಲಯದ ಇತಿಹಾಸದ ಪ್ರಾಧ್ಯಾಪಕ ಾದ ಚಿಂತಕಿ ಡಾ.ಎಂ.ವಿ.ವಸು ಕರೆ ೀಡಿದರು.

‘ವಿಚಾರಕ್ರಾಂತಿಗೆ ಕುವೆಂಪು ಕರೆ’ ಕಾರ್ಯಕ್ರಮ

ಅವರು ತುಮಕೂರಿನಲ್ಲಿ ಎಸ್‌ಎಫ್‌ಐ-ಡಿವೈಎಫ್‌ಐ ಹಮ್ಮಿಕೊಂಡಿದ್ದ ವಿದ್ಯಾರ್ಥಿನಿಯರ ಸ್ಟೆಲ್‌ನಲ್ಲಿ ‘ವಿಚಾರಕ್ರಾಂತಿಗೆ ಕುವೆಂಪು ಕರೆ’ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡುತ್ತಿದ್ದರು. ಕುವೆಂಪುರವರ ವಿಶ್ವಮಾನವ ಸಂದೇಶದ ಹಿಂದೆ ಕಾರ್ಲ್‌ಮಾರ್ಕ್ಸ್ ನೀಡಿದ ವಿಶ್ವಕಾರ್ಮಿಕರೇ ಒಂದಾಗಿ ಎಂಬ ಶೋಷಿತ ರ್ಗದ ಧ್ವನಿಯಾದ ಮಾರ್ಕ್ಸ್‌ವಾದದ ಸಿದ್ಧಾಂತ ಸ್ಫೂರ್ತಿಯಾಗಿತ್ತು ಎಂದ ಅವರು ಭಾರತ ದೇಶವು ಸ್ವಾತಂತ್ರ್ಯ ಸಂದರ್ಭದಲ್ಲಿ ಬ್ರಿಟೀಷರ ವಿರುದ್ಧ ಹೋರಾಡುವ ಸಂದರ್ಭದಲ್ಲಿ ಜಾತಿ, ಧರ್ಮದ ಹೆಸರಿನಲ್ಲಿ ಕೋಮುವಾದವನ್ನು ಹರಡುತ್ತಿದ್ದ ಸಂದರ್ಭದಲ್ಲಿ ದೇಶದ ಜನತೆಗೆ ಗುಡಿ, ಚರ್ಚು, ಮಸೀದಿಗಳನ್ನು ಬಿಟ್ಟು ಹೊರಬನ್ನಿ ಬಡತನದ ಬುಡಮಟ್ಟ ಕೀಳಬನ್ನಿ ಎಂಬ ಘೋಷಣೆಯೊಂದಿಗೆ ಕೋಮುವಾದದ ಕಡೆ ದೇಶದ ಜನತೆ ವಾಲದಂತೆ ತಮ್ಮ ವಾಸ್ತವ ಬದುಕನ್ನು ರೂಪಿಸುವ ಹೋರಾಟದ ಕಹಳೆಗೆ ಕರೆ ನೀಡಿದರು. ಸಾಂಸ್ಕೃತಿಕ ರಂಗದಲ್ಲಿ ಅನನ್ಯ ಕೊಡುಗೆ ನೀಡಿರುವ ಕುವೆಂಪುರವರಿಗೆ ದೇವಾಲಯವನ್ನು ಕಟ್ಟಿ ಆರಾದನೆಯ ಸ್ಥಾನ ನೀಡುವ ಕೆಲಸ ಬೇಡ ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಅವರಿಗೆ ಗೌರವ ಸಲ್ಲಿಸಿದಂತಾಗುತ್ತದೆ. ಹೆಣ್ಣುಮಕ್ಕಳು ಕುವೆಂಪುರವರ ಸಾಹಿತ್ಯವನ್ನು ಅಭ್ಯಾಸ ಮಾಡುವ ಮೂಲಕ ಕಾಳಜಿಯಿಂದ ಸ್ಪಂದಿಸುವ ಗುಣ ಬೆಳೆಸಿಕೊಳ್ಳಬೇಕು. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಇಂಗ್ಲಿಷ್ ಭಾಷೆಯನ್ನು ಭೂತವೆಂದು ಪರಿಗಣಿಸದೇ ಕನ್ನಡ ಭಾಷೆಯಂತೆ ಅದನ್ನು ಅಭ್ಯಾಸ ಮಾಡಬೇಕು ಎಂದ ಅವರು ಎಲ್ಲ ಮೇಲ್ವರ್ಗದ, ಎಲ್ಲ ಜಾತಿಯ ಜನರನ್ನು ಅವರು ವಿರೋಧಿಸುತ್ತಿದ್ದರು ಹಾಗೂ ಅವರು ಪುರೋಹಿತ ಸಾಹಿತ್ಯವನ್ನು ವಿರೋಧಿಸುತ್ತಿದ್ದರೆ ಹೊರತು ವ್ಯಕ್ತಿಗಳನ್ನಲ್ಲ ಎಂದ ಅವರು ವಿದ್ಯಾರ್ಥಿಗಳು ಎಲ್ಲರ ಅಭಿವೃದ್ಧಿಯ ಕಡೆ ಗಮನ ಹರಿಸುವ ಸೋದರತೆಯ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದರು.

ವಿಚಾರ ರಂಗದ ಕೆ.ಇ.ಸಿದ್ದಯ್ಯ ಮಾತನಾಡಿ ಯಾವುದೇ ತತ್ವ, ಪಥ ಧರ್ಮ, ಜಾತಿ, ವರ್ಗ ಮುಖ್ಯವಲ್ಲವೆಂದು ಸಾರಿದ ಕುವೆಂಪುರವರು ಸರ್ವರಿಗೂ ಸಮಪಾಲು, ಸಮಬಾಳು ಸಿಗಬೇಕು ಎಂದು ಸಾರಿದವರು ವೈಜ್ಞಾನಿಕ ಯುಗದಲ್ಲೂ ಕೂಡ ಶಾಸ್ತ್ರಕ್ಕೆ ಮೊರೆಯೋಗಿ ಉಪಗ್ರಹ ಉಡಾವಣೆ ಮಾಡುವುದನ್ನು ಟೀಕಿಸಿದ ಅವರು ತಿರುಪತಿಯ ದೇವಸ್ಥಾನದಲ್ಲಿ ನಿರಂತರವಾಗಿ ಉರಿಯುತ್ತಿದ್ದ ದೀಪ ಹಾರಿಹೋಗಿದ್ದರಿಂದಲೇ ಭೂಕಂಪವಾಯಿತು ಎಂದು ಮೌಢ್ಯತೆಯನ್ನು ಬಿತ್ತುತ್ತಿರುವವರ ವಿರುದ್ಧ ಎಚ್ಚರವಹಿಸಬೇಕು ಎಂದರು. ಡಿವೈಎಫ್‌ಐನ ಹೆಚ್.ಎಂ.ವೆಂಕಟೇಶ್ ಮಾತನಾಡಿ ವಾಸ್ತವತೆಯನ್ನು ಮರೆಮಾಚಿ ಸಮಾಜದಲ್ಲಿ ಕೆಲಶಕ್ತಿಗಳು ದೇಶದ ನೆಮ್ಮದಿಗೆ ಭಂಗ ತರುತ್ತಿದ್ದು ಇಂತಹ ಶಕ್ತಿಗಳ ವಿರುದ್ಧ ಎಚ್ಚರವಹಿಸಬೇಕು ಎಂದರು. ಶಿರಾ ಸಮಾಜ ಕಲ್ಯಾಣಾಧಿಕಾರಿ . ಮಾಣಿಕ್ಯಾಚಾರ್ ಮಾತನಾಡಿದರು. ತುಮಕೂರು ಸಮಾಜ ಕಲ್ಯಾಣಾಧಿಕಾರಿ ಆರ್.ಶಿವಲಿಂಗಯ್ಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ನಿಲಯ ಪಾಲಕಿ ವೇದಾವತಿ ಎಸ್‌ಎಫ್‌ಐನ ರಾಘವೇಂದ್ರ ರಮೇಶ್.ವಿ, ಮಂಜುಳ, ಅನಿತಾ.ಎಸ್.ಪಿ ಉಪಸ್ಥಿತರಿದ್ದರು. ಮಮತ, ರಾಧ, ಪ್ರಾರ್ಥಿಸಿದರು, ಭಾಗ್ಯ ಸ್ವಾಗತಿಸಿದರು. ನಾಗಮಣಿ ವಂದಿಸಿ ಕಮಲ ಕಾರ್ಯಕ್ರಮ ನಿರೂಪಿಸಿದರು.

- ಎಸ್.ರಾಘವೇಂದ್ರ, ತುಮಕೂರು


ಮಾಜಿ ಗ್ಲೋಬಲ್ ಟ್ರಸ್ಟ್ ಬ್ಯಾಂಕ್‌ನ (ಜಿಟಿಬಿ) ಗೋಲ್‌ಮಾಲ್ ವಿದ್ಯೆಗಳು

ಗ್ಲೋಬಲ್ ಟ್ರಸ್ಟ್ ಅಂದರೆ 'ಜಾಗತಿಕ ಭರವಸೆ' ಇಂತಹ ಜಾಗತಿಕ ಭರವಸೆ ಬ್ಯಾಂಕ್ ಎಂಬ ಖಾಸಗಿ ಬ್ಯಾಂಕೊಂದು ನಾಯಿ ಕೊಡೆಯಂತೆ ಎದ್ದು ಈಗ ಪಾಪರ್ ಆಗಿ ಸರ್ಕಾರದ ಕೃಪೆಯಿಂದಾಗಿ ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್ (ಓಬಿಸಿ) ಎಂಬ ಸರ್ಕಾರಿ ಬ್ಯಾಂಕಿನಲ್ಲಿ ವಿಲೀನವಾಗಿದೆ. ಈಗ ಬೊಂಬಡಾ ಬಜಾಯಿಸುವ ಸರದಿ ಓಬಿಸಿಯದು.

ಇಲ್ಲಿ ಹಲವು ಸಮಾಜ ದ್ರೋಹಿಗಳನ್ನು ರಕ್ಷಿಸುವ ಕೆಲಸವನ್ನು ಮಾಡಲಾಗಿದೆಯಂತೆ. ಓಬಿಸಿ 'ಅಚ್ಚುಕಟ್ಟುತನದ ವರದಿಯೊಂದನ್ನು ಪಡೆದಿದೆ. ಈ ವರದಿಯ ಪ್ರಕಾರ (ಡ್ಯೂ ಡೆಲಿಜೆನ್ಸ್ ಎಂಬ ಈ ಶೋಧನಾ ವರದಿ ಏನಾಗಬೇಕಿತ್ತು. ಏನಾಗಿದೆ ಎಂಬುದನ್ನು ಹೇಳುತ್ತದೆ) ಜಿಟಿಬಿಯು ವ್ಯವಹಾರಗಳಲ್ಲಿ ಹಲವು ಅಪರಾ ತಪರಾಗಳು ನಡೆದಿವೆ. ಯುನೈಟೆಡ್ ಸಾಫ್‌ವೇರ್ ಲಿಮಿಟೆಡ, ಪೆಟ್ರೊ ಎನರ್ಜಿ ಪಾಡಕ್ಟ್ಸ್ ಕಂಪನಿ ಲಿಮಿಟೆಡ್ ಶಾಂಕ್ ಟೆಕ್ನೊಲೊಜಿಸ್ ಇಂಟರ್‌ನ್ಯಾಷನಲ್ ಲಿ, ಬಿಸಿನೆಸ್ ಇಂಡಿಯಾ ಪತ್ರಿಕೆಯ ಅಶೋಕ ಅಧ್ವಾನಿ ಮತ್ತು ಪರ್ಲ ಡಿಸ್ಟಿಲರೀಸ್ ಲಿ.ಗಳಿಗೆ ನೀಡಿದ ಸಾಲಗಳು ಬ್ಯಾಂಕಿಗೆ ಹಾನಿ ಮಾಡುವ ಉದ್ದೇಶ ದಿಂದಲೇ ಮಾಡಲಾಗಿದೆ ಎಂದು ಈ ವರದಿ ಹೇಳಿದೆ. ಜಿಟಿಬಿ ಕೆಲವು ಸಾಲಗಾರರ ಗುಂಪುಗಳು ಬ್ಯಾಂಕಿಂಗ್ ದಾರಿಯ ಮೂಲಕ ಹಣದ ದುರುಪಯೋಗ ಮಾಡುವಲ್ಲಿ ನೇರ ಭಾಗಿಯಾಗಿರುವಂತೆ ಕಾಣುತ್ತದೆ ಎಂದು ಅದು ಹೇಳಿದೆ.

ಹಣಕಾಸು ಮಂತ್ರಾಲಯದ ಪತ್ರಿಕಾ ಹೇಳಿಕೆ ಈ ವಿಷಯವನ್ನು ತಿಳಿಸಿದ್ದು ಜಿಟಿಬಿಯ ಯಾವ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದರು ಎಂಬುದನ್ನು ಹೇಳಿಲ್ಲ. ಇನ್ನೂ ಹಲವು ಪ್ರಕರಣಗಳ ತನಿಖೆಯನ್ನು ಸಿಬಿಐ ಮಾಡುತ್ತಿದೆಯಂತೆ.

ಇಬಿಸಿಯ ತನಿಖೆಯ ಪ್ರಕಾರ ಜಿಟಿಬಿ ಭಾರತೀಯ ರಿಸರ್ವ್ ಬ್ಯಾಂಕು ನಿಗದಿಪಡಿಸಿದ ಸಾಲ ಮಿತಿಗಳನ್ನು ಮೀರಿ ಹೆಚ್ಚಿನ ಸಾಲವನ್ನು ಹಲವರಿಗೆ ನೀಡಿತ್ತು. ಈ ಖಾತೆಗಳ ವ್ಯವಹಾರ ನೋಡಿದರೆ ಅವು ಉದ್ದೇಶಪೂರ್ವಕವಾಗಿ ನಿಷ್ಕ್ರಿಯ ಆಸ್ತಿ ಸೃಷ್ಟಿಸುವ ಪ್ರಯತ್ನಗಳು ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ ಎನ್ನಲಾಗಿದೆ. ಉದಾಹರಣೆಗೆ



ಒಂದು ಕಂಪನಿಯ ಸಾಲಗಳು ಬೇಬಾಕಿಯಾಗಿದ್ದರೆ ಅದರ ಸಹವರ್ತಿ ಕಂಪನಿಗಳಿಗೆ ಸಾಲ ನೀಡುವಂತಿಲ್ಲ. ಜಿಟಿಬಿ ಇಂತಹ ಕಂಪನಿಗಳಿಗೆ ಸಾಲ ನೀಡಿದೆ.

ಯುನೈಟೆಡ್ ಸಾಫ್ಟ್‌ವೇರ್ ಮತ್ತು ಅಶೋಕ್ ಅದ್ವಾನಿಯವರು ತಪ್ಪು ಮಾಹಿತಿಗಳನ್ನು ನೀಡಿಯೇ ಸಾಲ ಪಡೆದಿದ್ದಾರೆ ಎಂದಿರುವ ಈ ವರದಿ ಇದರಲ್ಲಿ ಜಿಟಿಬಿಯ ಅಧಿಕಾರಿಗಳು ಶಾಮೀಲಾಗಿರುವುದನ್ನು ಹೇಳಿದೆ. ಈ ಅಧಿಕಾರಿಗಳ ಹೆಸರನ್ನು ಹೇಳಿಲ್ಲ. ಈ ಎರಡು ಪ್ರಕರಣಗಳಲ್ಲಿ ಬ್ಯಾಂಕಿಗೆ ಆಗಿರುವ ಹಾನಿ 21.76 ಕೋಟಿ ರೂಪಾಯಿಗಳು.

ಬಿಸಿನೆಸ್ ಇಂಡಿಯಾ (ಅಶೋಕ ಅಧ್ವಾನಿ) ಪತ್ರಿಕೆ ಬ್ಯಾಂಕಿನಲ್ಲಿ ತನ್ನ ಖಾತೆ ಇಲ್ಲ ಎಂದು ಮಾಹಿತಿ ನೀಡಿತ್ತು. ಈಗ ತೆರೆದ ಖಾತೆ ಹೊಸ ಗ್ರಾಹಕನ ಖಾತೆ ಎಂದು ಹೇಳಿತ್ತು. ಆದರೆ ವಾಸ್ತವವಾಗಿ 1994ರಿಂದಲೂ ಅದರ ಖಾತೆ ಜಿಟಿಬಿಯಲ್ಲಿತ್ತು.

ಇತರ ಕಂಪನಿಗಳು ಜಿಟಿಬಿಗೆ ಮಾಡಿರುವ ಮೋಸದ ಮೊತ್ತಗಳು ಕೆಸಗಿನಂತಿವೆ.

ಪೆಟ್ರೊ ಎನರ್ಜಿ ಪ್ರಾಡಕ್ಟ್ - 78.41 ಕೋಟಿ ರೂ.ಗಳು ಮುಂಬೈ

23.15 ಕೋಟಿ ರೂಗಳು ಚೆನ್ನೈ ಶಾಖೆಯಿಂದ

ಶಾಂಕ್ ಟೆಕ್ನೋಲೊಜಿಸ್ -38.49 ಕೋಟಿ ರೂ.ಗಳು

ಪರ್ಲಾ ಡಿಸ್ಟಿಲರಿಸ್ ಲಿ -10.28 ಕೋಟಿ ರೂ.ಗಳು

ವೇತನ ರಕ್ಷಣೆಯ ಅಸಂಗತ್ಯ

ಜಿಟಿಬಿಯ ಸಿಬ್ಬಂದಿಯ ವೇತನಗಳನ್ನು ರಕ್ಷಿಸುವುದಾಗಿಯೂ ಓಬಿಸಿ ಹೇಳಿಕೆ ನೀಡಿತು. ಆದರೆ ಜಿಟಿಬಿಯ ಅಧಿಕಾರಿಗಳಿಗೆ ಓಬಿಸಿಯ ಅಧಿಕಾರಿಗಳಿಗಿಂತ ಬಹಳ ಹೆಚ್ಚು ಸಂಬಳ ಎಂಬುದು ಓಬಿಸಿಗೆ ನಂತರ ಗೊತ್ತಾಗಿದ್ದು (ದೇಶಕ್ಕೇ ಮೋಸ ಮಾಡುವವರಿಗೆ ಹೆಚ್ಚಿನ ಸಂಬಳ ದೊರೆಯಲೇಬೇಕು ತಾನೆ) ಈಗ ಓಬಿಜಿಯ ಹಲವು ಅಧಿಕಾರಿಗಳಿಗೆ ಓಬಿಸಿಯ ಅಧ್ಯಕ್ಷರಿಗಿಂತಲೂ ಹೆಚ್ಚಿನ ಸಂಬಳದಂತೆ ಇದು ಮೂರು ವರ್ಷಗಳವರೆಗೆ ಮುಂದುವರೆಯಲಿದೆಯಂತೆ.

ಡೈರೆಕ್ಟರುಗಳಿಗೆ ರಕ್ಷಣೆ

ಇದಲ್ಲದೆ ಇಂತಹ ಅಪರಾತಪರಾ ಮಾಡಿದ / ಮಾಡಿಸಿದ ಡೈರೆಕ್ಟರುಗಳಿಗೆ ಕ್ರಿಮಿನಲ್ ರೀತಿಯ ಶಿಕ್ಷೆ ನೀಡುವುದಿಲ್ಲ ಎಂದು ವಿಲೀನ ಪ್ರಕ್ರಿಯೆಯ ಘೋಷಣೆಯಲ್ಲಿ ಹೇಳಲಾಗಿದೆಯಂತೆ.

ಉದಾರೀಕರಣದ ನಂತರ ಬಂದ ಒಂದೇ ಒಂದು ಖಾಸಗಿ ಬ್ಯಾಂಕು ಇಷ್ಟೊಂದು ಮೋಸ ಮಾಡಿದರೆ ಇನ್ನುಳಿದ ಖಾಸಗಿ ಬ್ಯಾಂಕುಗಳು ಏನೇನು ಮಾಡಿರಬಹುದು.

ನಾವೆಲ್ಲ ಊಹಿಸಬೇಕು ಅಷ್ಟೇ ಅಲ್ಲವೆ?

ಗಗನಯಾನ : ಖಾಸಗಿಯವರ ಕೊಳ್ಳೆ

ಗಗನಯಾನ ಹೆಚ್ಚುವಟ್ಟಿಗೆ ಸರ್ಕಾರಿ ಸಂಸ್ಥೆಯಾದ ಇಂಡಿಯನ್ ಏರ್‌ಲೈನ್ಸ್‌ನ ಕೈಯಲ್ಲೇ ಇತ್ತು. ಕೇಂದ್ರದ ಯುಪಿಎ ಸರ್ಕಾರ ಈಗ ವಿದೇಶಿಯಾನವನ್ನು ಖಾಸಗಿ ಸಂಸ್ಥೆಗಳಾದ ಜೆಟ್ ಏರ್‌ವೇಸ್ ಮತ್ತು ಸಹರಾ ಏರವೇಸ್‌ಗಳಿಗೆ ತೆರೆದಿಟ್ಟಿದೆ. ಇದುವರೆಗೆ ಬರೀ ದೇಶದೊಳಗೆ ಮಾತ್ರ ವಿಮಾನಗಳನ್ನು ಹಾರಿಸುತ್ತಿದ್ದ ಈ ಕಂಪನಿಗಳು ಈಗ ಕೊಲ್ಲಿ ದೇಶಗಳನ್ನು ಹೊರತುಪಡಿಸಿ ಬೇರೆ ದೇಶಗಳಿಗೆ ವಿಮಾನ ಓಡಿಸಬಹುದು. ಹೀಗೆ ಖಾಸಗಿಯವರು ವಿದೇಶಗಳಿಗೆ ವಿಮಾನ ಓಡಿಸಲು ಕನಿಷ್ಠ ಐದು ವರ್ಷಗಳ ಅನುಭವ ಹೊಂದಿರಬೇಕೆಂಬ ನೀತಿಯನ್ನು ಸರ್ಕಾರ ಘೋಷಿಸಿದೆ.

ಸಾರ್ವಜನಿಕ ವಲಯದ ಇಂಡಿಯನ್ ಏರ್‌ಲೈನ್ಸನ್ನು ಸತತವಾಗಿ ಆಳುವ ಪಕ್ಷಗಳು ತಮ್ಮ ಅನುಕೂಲಗಳಿಗೆ ಬಳಸಿಕೊಂಡಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ವಿದೇಶಿ ಯಾನಗಳಿಂದಲೇ ತಮ್ಮ ಬಹುತೇಕ ಆದಾಯಗಳನ್ನು ಪಡೆಯುತ್ತಿದ್ದ ಏರ್ ಇಂಡಿಯಾ ಮತ್ತು ಇಂಡಿಯನ್ ಏರ್‌ಲೈನ್ಸ್‌ಗಳು ತಮ್ಮ ಆದಾಯದಲ್ಲಿ ಈಗ ಹೊಡೆತ ಅನುಭವಿಸುತ್ತಿವೆ. ಇದಲ್ಲದೆ ಸರ್ಕಾರಿ ವಲಯದಲ್ಲಿರುವುದರಿಂದಲೇ ಹೆಚ್ಚಿನ ಸಾಮಾಜಿಕ ಜವಾಬ್ದಾರಿಗಳನ್ನು ಸಾರ್ವಜನಿಕ ವಲಯದ ಈ ವಿಮಾನಯಾನ ಸಂಸ್ಥೆಗಳು ಹೊರುತ್ತವೆ. ಖಾಸಗಿಯವರಿಗೆ ಇಂತಹ ಸಾಮಾಜಿಕ ಜವಾಬ್ದಾರಿಗಳ ಹೊರೆಯಿರುವುದಿಲ್ಲ. ಬದಲಿಗೆ ವಿದೇಶಿ ಯಾನಗಳಿಂದ ಹೆಚ್ಚಿನ ಉತ್ಪನ್ನ / ಲಾಭಗಳನ್ನು ಗಳಿಸುವ ಅವಕಾಶ ಸರ್ಕಾರ ಹೇ[illegible] ಉದಾರೀಕರಣದ ಹೆಸರಿನಲ್ಲಿ ಖಾಸಗಿಯವರಿಗೆ ಲಾಭ ಮಾಡಿಕೊಡುತ್ತದೆ ಎಂಬುದಕ್ಕೆ ಇದೊಂದು ಒಳ್ಳೆಯ ನಿದರ್ಶನ.

'ಏರ್ ಇಂಡಿಯಾ' ಇಂತಹ ಸ್ಪರ್ಧೆಯನ್ನು ಎದುರಿಸಲು ತಾನು ಸಿದ್ಧ ಎಂದು ಆಗಲೇ ಹೇಳಿಕೆ ನೀಡಿದೆ. ಆದರೆ ಸರ್ಕಾರ ನಿಜವಾಗಿಯೂ ಸಮಾನ ಅವಕಾಶಗಳನ್ನು ನೀಡುತ್ತದೆಯೋ ಎಂಬುದು ಪ್ರಶ್ನೆ. ಉದಾರೀಕರಣದ ಇತರ ಹಲವು ಅನುಭವಗಳನ್ನು ನೋಡಿದರೆ ಖಂಡಿತವಾಗಿಯೂ ಇಲ್ಲ. ಎಂಬುದೇ ಉತ್ತರವಾಗಿ ದೊರೆಯುತ್ತದೆ.

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ಔಷಧಿ ಬೆಲೆಗಳು ದುಬಾರಿ

ಜಗತ್ತಿನಾದ್ಯಂತ ಔಷಧಿಬೆಲೆಗಳು ಹೆಚ್ಚಾಗಿವೆ ಅಂದರೆ ನೀವು ನಂಬುತ್ತೀರಾ. ಆದರೆ ಭಾರತದಲ್ಲಿ ಔಷಧಿ ಬೆಲೆಗಳು ಬೇರೆ ದೇಶಗಳಿಗೆ ಹೋಲಿಸಿದರೆ ಕಡಿಮೆಯೆಂದೇ ಹೇಳಬಹುದು. ಭಾರತದಲ್ಲೂ ಬ್ರ್ಯಾಂಡ್ ಔಷಧಿ ಬೆಲೆಗಳು ಬೇಸಿಪ್, ಮೋಪಿರಾನ್ ಜಾತಿಸೂಚಕ ಔಷಧಿಗಳ ಬೆಲೆಗಳಿಗಿಂತ ಹೆಚ್ಚು ಎಂಬುದನ್ನು ನೀವು ಗಮನಿಸಿದ್ದೀರಾ?

ಬ್ರ್ಯಾಂಡ್ ಔಷಧಿ - ಕಂಪನಿಯ ಹೆಸರುಳ್ಳ ಜಾತಿಸೂಚಕ ಔಷಧಿ ಜೆನರಿಕ್ ಔಷಧಿ

ಆರೋಗ್ಯ ಸಾಧನೆಯಲ್ಲಿ ಔಷಧಿಗಳು ಪ್ರಮುಖ ಪಾತ್ರವಹಿಸುತ್ತವೆ. ವಿಜ್ಞಾನ ಹಾಗೂ ತಂತ್ರಜ್ಞಾನ ನಮಗೆ ಹಲವಾರು ಔಷಧಿಗಳನ್ನು ಒದಗಿಸಿವೆ. ಈ ಔಷಧಿಗಳು ಎಲ್ಲರಿಗೂ ಸುಲಭವಾಗಿ ದೊರಕಬೇಕು. ಆದರೆ ದೊರಕುತ್ತಿಲ್ಲ. ಜಾತಿಸೂಚಕ ಔಷದಿಗಳು ಬೆಲೆಗಳನ್ನು ಕೋಷ್ಟಕದಲ್ಲಿ ಗಮನಿಸಿ. ಈ ಔಷಧಿಗಳು ಬ್ರಾಂಡ್ ಔಷಧಿಗಳಿಗಿಂತಲೂ ಕಡಿಮೆ ಬೆಲೆಯಲ್ಲಿ ದೊರಕುತ್ತಿವೆ. ಬ್ರಾಂಡ್ ಔಷಧಿಗಳು ಜಾತಿಸೂಚಕ ಔಷಧಿಗಳಿಗಿಂತಲೂ ದುಬಾರಿ ಆದರೂ ವೈದ್ಯರೂ ಜಾತಿಸೂಚಕ ಔಷಧಿಗಳ ಬದಲು ಬ್ರಾಂಡ್ ಔಷಧಿಗಳನ್ನೇ ಹೆಚ್ಚಾಗಿ ಬರೆದು ಕೊಡುತ್ತಾರೆ ಎಂಬುದನ್ನು ನೀವೂ ಗಮನಿಸಿರಲು ಸಾಧ್ಯ. ಔಷಧಿ ಕಂಪನಿಗಳು ಬ್ರಾಂಡ್ ಔಷಧಿಗಳನ್ನು ಬರೆಯಲು ಒತ್ತಾಯ ತರುತ್ತವೆ. ಅನೇಕ ಬಾರಿ ವೈದ್ಯರಿಗೆ ಜಾತಿಸೂಚಕ ಔಷಧಿಗಳು ದೊರಕುತ್ತವೆಯೋ ಎಂಬುದೇ ಗೊತ್ತಿರುವುದಿಲ್ಲ ಹಾಗೂ ಜಾತಿ ಸೂಚಕ ಔಷಧಿಗಳು ಸಾಮಾನ್ಯ, ಔಷಧಿ ಅಂಗಡಿಗಳಲ್ಲಿ ದೊರಕುವುದೇ ಇಲ್ಲ. ಜಾತಿಸೂಚಕ ಔಷಧಿಗಳು ಪರಿಣಾಮಕಾರಿಯಲ್ಲ ಎಂಬುದು ಅನೇಕರ ನಂಬಿಕೆ. ಇದು ಆಧಾರರಹಿತ. ಭಾರತ ಆರೋಗ್ಯ ಪರಿಸ್ಥಿತಿಯನ್ನು ಗಮನಿಸಿದರೆ ಇಂದಿಗೂ ಔಷಧಿಗಳಿಂದ ಗುಣಪಡಿಸಬಹುದಾದ ರೋಗಗಳಾದ ಮಲೇರಿಯಾ, ಕ್ಷಯರೋಗ, ಸೋಂಕು ರೋಗಗಳಿಂದ ಹಲವಾರು ಜನರು ಸಾವನ್ನಪ್ಪುತ್ತಿದ್ದಾರೆ. ಈ ಸಮಸ್ಯೆಗೆ ಹಲವಾರು ಕಾರಣಗಳಿರಲು ಸಾಧ್ಯ. ಆದರೆ ಒಂದು ಮುಖ್ಯ ಕಾರಣವೆಂದರೆ, ಜನಸಾಮಾನ್ಯರಿಗೆ ಔಷಧಿಗಳನ್ನು ಕೊಂಡುಕೊಳ್ಳಲು ಆಗದಿರುವುದು, ಔಷಧಿ ಬೆಲೆ ಹೆಚ್ಚಾಗಿರುವುದು.

ಔಷಧಿ	ಭಾರತದಲ್ಲಿ	ರೂಪಾಯಿಗಳಲ್ಲಿ ಪಾಕಿಸ್ತಾನದಲ್ಲಿ	ಇಂಗ್ಲೆಂಡಿನಲ್ಲಿ	ಅಮೇರಿಕಾದಲ್ಲಿ	ಬ್ರಾಂಡ್
ಸಿಪ್ರೊಫ್ಲಾಕ್ಸಸಿನ್ (ಆಂಟಿಬಯಾಟಿಕ್)(ಬೇಸಿಪ್)	88.98	29.0	423.80	1185.70	2352.35
ಡೈಕ್ಲೋಫೆನ್ಯಾಕ್ (ನೋವುನಿವಾರಕ)(ಮೋಪಿರಾನ್)	16.10	3.50	84.71	60.96	674.77
ರ್‍ಯಾನಿಟಿಡೀನ್ (ಅಲ್ಸರ್ ಮಾತ್ರೆ)(ಆ್ಯಸಿಲ್ಯಾಕ್)	20.00	6.02	74.09	247.16	863.50
ಅಟೆನಲಾಲ್ (ಬಿ.ಪಿ.ಮಾತ್ರೆ)	7.50	71.82	-	753.94	
ಸಿಟ್ರಿಝಿನ್ (ಅಲರ್ಜಿ ಮಾತ್ರೆ)(ಸೆಟ್‌ಝಿನ್)	26.70	6.00	35.71	262.19	927.29

ಏಕೆ ಔಷಧಿಗಳು ದುಬಾರಿಯಾಗಿವೆ?

ಔಷಧಿ ಉದ್ಯಮ ಪ್ರಾರಂಭದಿಂದಲೂ ಖಾಸಗೀ ಕ್ಷೇತ್ರದ ಹಿಡಿತದಲ್ಲಿದೆ. ಈ ಖಾಸಗೀ ಕ್ಷೇತ್ರದ ಉದ್ಯಮ ಔಷಧಿಯಿಂದ ಲಾಭ ಪಡೆಯಲು ಹೆಚ್ಚು ಗಮನ ಕೊಡುತ್ತದೆ. ಔಷಧಿ ಗುಣಮಟ್ಟ, ಬೆಲೆ, ಅಗತ್ಯತೆ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ತೋರಿಸುತ್ತದೆ. ಈ ಖಾಸಗೀ ಉದ್ಯಮ 'ಅನಗತ್ಯ' ಔಷಧಿಗಳನ್ನು ತಯಾರಿಸಲು ಹೆಚ್ಚಿನ ಮಹತ್ವ ಕೊಡುತ್ತದೆ. ಖಾಸಗೀ ಕ್ಷೇತ್ರ ಔಷಧಿ ಬೆಲೆಯನ್ನು ತೀರ್ಮಾನಿಸಿ, ಅದರ ಮೇಲೆ ಅಪಾರ ಲಾಭ ಇಟ್ಟು ಮಾರುತ್ತಿವೆ. ಇದನ್ನು ಯಾವುದೇ ದೇಶದ, ಸರಕಾರವೂ, ಔಷಧಿ ನಿಯಂತ್ರಣವೂ ಪ್ರಶ್ನಿಸಿಲ್ಲ. ಅದರ ಬದಲು ಸರಕಾರಗಳು, ಔಷಧಿ ನಿಯಂತ್ರಣಗಳು ತಮ್ಮ ಪಾಲು ಕೇಳಲು ಮುಂದಾಗಿವೆ.

ಔಷಧಿ ಉದ್ಯಮದಲ್ಲಿ ಇನ್ನಾವ ಉದ್ಯಮಕ್ಕಿಂತ ಹೆಚ್ಚು (ಯುದ್ಧ ಶಸ್ತ್ರಾಸ್ತ್ರಗಳನ್ನು ಹೊರತುಪಡಿಸಿ) ಲಾಭ ಇದೆಯೆಂದು ಕಂಡುಬಂದಿದೆ. ಜಗತ್ತಿನ 15 ಅತಿಹೆಚ್ಚು ವಹಿವಾಟು ಇರುವ ಕಂಪನಿಗಳಲ್ಲಿ, ಆರು ಕಂಪನಿಗಳು ಔಷಧಿ ತಯಾರಿಸುವ ಕಂಪನಿಗಳು.

ಔಷಧಿ ಬೆಲೆಗಳು ಹೆಚ್ಚಾಗಿದ್ದುದು ಎಲ್ಲರಿಗೂ ಗೊತ್ತಿದ್ದರೂ 'ಇರಬಹುದೇನೋ ಬಿಡಿ' ಎಂದು ಜನಸಾಮಾನ್ಯರು, ಔಷಧಿ ಉಪಯೋಗಿಸುವವರು ದಿವ್ಯ ನಿರ್ಲಕ್ಷ್ಯ ತೋರಿಸುತ್ತಿದ್ದಾರೆ. ಭಾರತದಲ್ಲಿ ಔಷಧಿ ಬೆಲೆಗಳ ಬಗ್ಗೆ ಜನರು ಗಮನಹರಿಸಿದಂತಿಲ್ಲ ಹಾಗೂ ಪಾಶ್ಚಿಮಾತ್ಯದೇಶಗಳಲ್ಲಿ ಔಷಧಿ ವಿಮೆ ಹಾಗೂ ಇನ್ನೂ ಅನೇಕ ಸೌಲಭ್ಯಗಳಿರುವುದರಿಂದ ಜನರಿಗೆ ಔಷಧಿ ಬೆಲೆ ಹೆಚ್ಚಾಗಿರುವುದರ ಬಗ್ಗೆ ಗಮನ ಹೋದರೂ 'ಏನು ಮಾಡಲು ಸಾಧ್ಯ' ಎಂಬ ನಿರಾಶಾಭಾವನೆ ಮೂಡಿದೆ.

ಮುಂದುವರಿಯುವುದು

18ನೇ ಸಿಪಿಐ(ಎಂ) ರಾಜ್ಯ ಸಮ್ಮೇಳನ

ನಿರ್ಣಯಗಳು

ವಿದ್ಯುತ್ ಖಾಸಗೀಕರಣದ ವಿರುದ್ಧ ಹಾಗೂ ನಾಗಾರ್ಜುನ ವಿದ್ಯುತ್ ಕಂಪನಿ ಒಪ್ಪಂದ ಕುರಿತು

ಆರ್ಥಿಕ ಉದಾರೀಕರಣದ ಒಂದು ಮುಖ್ಯ ಅಂಶವಾಗಿ ವಿದ್ಯುತ್ ವಲಯದ ಸುಧಾರಣೆ ಮತ್ತು ಖಾಸಗೀಕರಣವು ಕಾಣುತ್ತದೆ. ವಿದ್ಯುತ್ ದರ ಏರಿಕೆ, ಸಹಾಯ ಧನ ಕಡಿತ, ಖಾಸಗೀ ವಲಯದ ಪಾತ್ರವನ್ನು ಹೆಚ್ಚು ಮಾಡುವ ಕ್ರಮಗಳು ಇದರ ಭಾಗವಾಗಿವೆ. ವಿದ್ಯುತ್ ನೀತಿ ಸುಧಾರಣಾ ಕಾನೂನು, ಕೆ.ಇ.ಆರ್.ಸಿ. ರಚನೆ, ವಿದ್ಯುತ್ ಉತ್ಪಾದನೆ-ಸಾಗಾಣಿಕೆ-ವಿತರಣೆ ಬೇರ್ಪಡಿಸುವಿಕೆ, ವಿತರಣೆಯನ್ನು ನಾಲ್ಕು ಕಂಪೆನಿಗಳಾಗಿ ವಿಭಜನೆ ಮುಂತಾದ ಕ್ರಮಗಳನ್ನು ರಾಜ್ಯ ಸರಕಾರ ಈಗಾಗಲೇ ಕೈಗೊಂಡಿದೆ. ಮುಂದೆ ವಿತರಣಾ ಕಂಪೆನಿಗಳನ್ನು ಖಾಸಗೀಕರಿಸಲು ಸರಕಾರ ಹುನ್ನಾರ ನಡೆಸಿದೆ. ಖಾಸಗಿ ಕಂಪೆನಿಗಳ ಲಾಭವನ್ನೇ ಮುಖ್ಯವಾಗಿಟ್ಟುಕೊಂಡು ರೂಪಿಸಲಾದ ರಾಜ್ಯ ಸರಕಾರದ 'ಖಾಸಗೀಕರಣದತ್ತ ಯುಕ್ತಿತಂತ್ರ ದಸ್ತಾವೇಜು'ನ್ನು ರಾಜ್ಯ ಸರಕಾರ ಸಿದ್ಧಪಡಿಸಿದೆ. ಒರಿಸ್ಸಾ, ಮಹಾರಾಷ್ಟ್ರ ಮುಂತಾದ ರಾಜ್ಯಗಳಲ್ಲಿ ಇಂತಹ ನೀತಿಗಳು ಈಗಾಗಲೇ ಜನರನ್ನು ದಿವಾಳಿ ಎಬ್ಬಿಸಿವೆ ಎಂಬುದರ ಅನುಭವ ಇದ್ದರೂ ಕರ್ನಾಟಕ ಸರಕಾರ ಇದನ್ನು ಕಡೆಗಣಿಸಿವೆ.

ರಾಜ್ಯದ ಒಟ್ಟಾರೆ ವಿದ್ಯುತ್ ಬೇಡಿಕೆ ಸುಮಾರು 7000 ಮೆ.ವಾ. ಇದೆ. ಆದರೆ ಉತ್ಪಾದನೆ ಸುಮಾರು 5100 ಮೆ.ವಾ. ಇದೆ. ಈ ಕೊರತೆ ವಿದ್ಯುತ್‌ನ್ನು ತುಂಬಲು ಸರಕಾರದ ಬಳಿ ಬಂಡವಾಳದ ಕೊರತೆಯಿದೆ ಎಂದು ಹೇಳಿ ಮೇಲೆ ತಿಳಿಸಿದ ಕ್ರಮಗಳಿಗೆ ಮುಂದಾಗಿರುವುದು ಜನರನ್ನು ದಾರಿ ತಪ್ಪಿಸುವ ಕ್ರಮವಾಗಿದೆ. ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ವಿದ್ಯುತ್ ಕೊರತೆಯಿದೆಯೆಂಬುದು ನಿಜವಾದರೂ ಬೇಡಿಕೆಯ ಪ್ರಮಾಣವನ್ನು ಅತಿಯಾಗಿ ಉತ್ಪ್ರೇಕ್ಷಿಸುವ ಹುನ್ನಾರವೂ ಇದೆ.

1991ರ ನಂತರ ಬದಲಾದ ನೀತಿಗಳು, ವಿದೇಶೀ ಬಂಡವಾಳದ ಹುಸಿ ನಿರೀಕ್ಷೆಯಲ್ಲಿ ಸರಕಾರಿ ವಿದ್ಯುತ್ ಕ್ಷೇತ್ರಕ್ಕೆ ಹಣ ನೀಡಿಕೆಯನ್ನು ತೀವ್ರ ಕಡಿತ ಮಾಡಲಾಗಿದೆ. ಇದರಿಂದ ವಿದ್ಯುತ್ ಉತ್ಪಾದನೆ ಪ್ರಕ್ರಿಯೆಗೆ ತೀವ್ರ ಹಿನ್ನಡೆಯಾಯ್ತು. ಖಾಸಗಿ ವಲಯಕ್ಕೆ ವಿಶೇಷ ಪ್ರೋತ್ಸಾಹ ನೀಡಲು ಸರಕಾರ ಆಸಕ್ತಿ ವಹಿಸಿತು. ಹಲವು ರಾಜ್ಯಗಳು ಖಾಸಗಿಯವರೊಂದಿಗೆ ಹಲವು ಒಪ್ಪಂದಗಳನ್ನು ಮಾಡಲು ಪೈಪೋಟಿ ನಡೆಸಿದವು. ಸಾಮಾನ್ಯ ಬಳಕೆದಾರರನ್ನು ಖಾಸಗಿ ವಲಯದ ಮರ್ಜಿಗೆ ಒಳಪಡಿಸಿದರು.

ಸ್ವಾತಂತ್ರ್ಯಾನಂತರದಲ್ಲಿ ಭಾರತೀಯ ಹಾಗೂ ವಿದೇಶೀ ಬಂಡವಾಳದಾರರು ವಿದ್ಯುತ್ ಕ್ಷೇತ್ರದಲ್ಲಿ ಬಂಡವಾಳ ಹೂಡಲು ಹಿಂದೇಟು ಹಾಕಿದ್ದರಿಂದ ಮತ್ತು ಭಾರತದ ಕೈಗಾರಿಕಾ ಬೆಳವಣಿಗೆಯನ್ನು ಕುಂಠಿತಗೊಳಿಸಲು ಸಾಮ್ರಾಜ್ಯಶಾಹಿ ದೇಶಗಳು ಬಯಸಿದ್ದರಿಂದ ಸರಕಾರ ವಿದ್ಯುತ್ ಉತ್ಪಾದನೆಗೆ ಆದ್ಯತೆ ನೀಡಿತ್ತು. ಈ ಆದ್ಯತೆಯನ್ನು ಈಗ ವಿರುದ್ಧ ದಿಕ್ಕಿಗೆ ತಿರುಗಿಸಲಾಗಿದೆ. ಅಂತರರಾಷ್ಟ್ರೀಯ ಹಣಕಾಸು ಬಂಡವಾಳದ ಅತಿ ಲಾಭದಾಯಕ ಹೂಡಿಕೆಗೆ ವಿದ್ಯುತ್ ಕ್ಷೇತ್ರದ ಸುಧಾರಣೆ ಮತ್ತು ಖಾಸಗೀಕರಣವು ಬಹುರಾಷ್ಟ್ರೀಯ ಕಂಪೆನಿಗಳಿಗೆ ಬೇಕಾಗಿದೆ. ಈ ನಿಟ್ಟಿನಲ್ಲೇ 1991ರ ನರಸಿಂಹ ರಾವ್ ಸರಕಾರದ ಹೊಸ ವಿದ್ಯುತ್ ನೀತಿ ಬಂದದ್ದು.

2003ರಲ್ಲಿ ವಾಜಪೇಯಿ ಸರಕಾರ ವಿಶ್ವ ಬ್ಯಾಂಕಿನ ಸಾಲದ ಶರತ್ತುಗಳನ್ನು ಪೂರ್ಣವಾಗಿ ಜ್ಯಾರಿಗೊಳಿಸುವ ನಿಟ್ಟಿನಲ್ಲಿ 'ವಿದ್ಯುತ್ ಕಾಯಿದೆ - 2003' ನ್ನು ಜಾರಿಗೊಳಿಸಿತು. ಖಾಸಗೀ ಕಂಪೆನಿಗಳ ಬಂಡವಾಳಕ್ಕೆ ಶೇಕಡಾ 16 ಲಾಭದ ಗ್ಯಾರಂಟಿ, ತೆರಿಗೆ ರಿಯಾಯಿತಿಗಳು, ದೇಶದ ಸರಾಸರಿ ವಿದ್ಯುತ್ ಲೋಡಿಗಿಂತಲೂ ಹೆಚ್ಚಿನ ಲೋಡನ್ನು ವಿದೇಶಿ ಕಂಪೆನಿಗಳಿಂದ ಖರೀದಿಸುವ ಗ್ಯಾರಂಟಿ, ವಿದೇಶಿ ವಿನಿಮಯದ ದರ ವ್ಯತ್ಯಾಸವಾದಂತೆ ವಿದ್ಯುತ್ ದರಗಳ ಹೆಚ್ಚಳ ಮುಂತಾದ ಜನವಿರೋಧಿ ಅಂಶಗಳಿರುವ ಈ ಕಾಯಿದೆ ಪುನರ್ ವಿಮರ್ಶೆ ಯಾಗಬೇಕೆಂದು ಸಮ್ಮೇಳನ ಒತ್ತಾಯಿಸಿದೆ. ಯು.ಪಿ.ಎ. ಸರಕಾರದ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಈ ಅಂಶವನ್ನು ಸೇರಿಸಲಾಗಿದ್ದರೂ ಕಾಂಗ್ರೆಸ್ ನೇತೃತ್ವದ ಸರಕಾರ ಇನ್ನೂ ಈ ಬಗ್ಗೆ ಕ್ರಮ ಕೈಗೊಳ್ಳದಿರುವುದನ್ನು ಈ ಸಮ್ಮೇಳನ ವಿರೋಧಿಸಿದೆ ಮತ್ತು ಕೂಡಲೇ ಪುನರ್‌ವಿಮರ್ಶೆ ಮಾಡಬೇಕೆಂದು ಒತ್ತಾಯಿಸಿದೆ. ಈ ಕಾಯಿದೆಯಲ್ಲಿ ಬಿ.ಓ.ಟಿ (ನಿರ್ಮಾಣ- ನಿರ್ವಹಣೆ- ವರ್ಗಾವಣೆ) ಮೊದಲಾಗಿ ಬಿ.ಓ.ಓ. (ನಿರ್ಮಾಣ- ನಿರ್ವಹಣೆ- ಸ್ವಾಧೀನ) ವ್ಯವಸ್ಥೆಗೆ ಆದ್ಯತೆ ನೀಡಲಾಗಿರುವುದನ್ನು ಸಮ್ಮೇಳನ ವಿರೋಧಿಸಿದೆ. ಮೇಲೆ ತಿಳಿಸಿದ ಹಾದಿಯಲ್ಲೇ ಕರ್ನಾಟಕ ಸರಕಾರವು ಜನವಿರೋಧಿ ನೆಲೆಯಲ್ಲಿ ವಿದ್ಯುತ್ ಸುಧಾರಣೆ ಮತ್ತು ಖಾಸಗೀಕರಣಕ್ಕೆ ಮುಂದಾಗಿದೆ. ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕ ವಿದ್ಯುತ್ ಉತ್ಪಾದನೆಗೆ 100 ವರ್ಷಗಳಿಗೂ ಹೆಚ್ಚಿನ ಇತಿಹಾಸವಿದ್ದು, ಜನತೆಯ ಶ್ರಮದಿಂದ ಅಪಾರ ಪ್ರಮಾಣದ ಆಸ್ತಿಗಳು ನಿರ್ಮಾಣವಾಗಿವೆ. ಇದರ ಫಲ ರಾಜ್ಯದ ಬಡವರಿಗೆ, ರೈತರಿಗೆ, ಸಣ್ಣ ಪ್ರಮಾಣದ ಗೃಹ ಕೈಗಾರಿಕೆಗಳಿಗೆ ಸಿಗಬೇಕಾಗಿದೆ. ಆದ್ದರಿಂದ ವಿದ್ಯುತ್ ದರ ಏರಿಕೆ, ಸಹಾಯಧನ ಕಡಿತ, ಮೀಟರೀಕರಣ, ಪಂಚಾಯತಿಗಳ ಸೀಮಿತ ಹಣದಿಂದಲೇ ವಿದ್ಯುತ್ ಬಾಕಿ ವಸೂಲಿ ಮತ್ತು ಖಾಸಗೀಕರಣದ ವಿರುದ್ಧ ಹೋರಾಟವನ್ನು ಸಿಪಿಐ(ಎಂ) ಮುಂದುವರಿಸುವುದು.

ಈ ಹಿನ್ನಲೆಯಲ್ಲಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಬೇಕಾದ ಜನಪರ ಸ್ವಾವಲಂಬಿ ಪರ್ಯಾಯಗಳನ್ನು ರಾಜ್ಯ ಮತ್ತು ಕೇಂದ್ರ ಸರಕಾರಗಳು ರೂಪಿಸಬೇಕಾಗಿವೆ. ರಾಜ್ಯದಲ್ಲಿ ಸುಮಾರು 4000 ಮೆ.ವಾ. ಗೂ ಹೆಚ್ಚು ಜಲವಿದ್ಯುತ್ ತಯಾರಿಸಲು ಇನ್ನೂ ಅವಕಾಶಗಳಿವೆ. ಇದಕ್ಕೆ ವೆಚ್ಚವು ಕಡಿಮೆ. ಇದಲ್ಲದೆ ಇತರೇ ಕಡಿಮೆ ಖರ್ಚಿನ ಮೂಲಗಳನ್ನು ಬಳಸಬೇಕೆಂದು ಈ ಸಮ್ಮೇಳನ ಒತ್ತಾಯಿಸಿದೆ.

ನಾಗಾರ್ಜುನ ಥರ್ಮಲ್ ವಿದ್ಯುತ್ ಬಗ್ಗೆ

ರಾಜ್ಯದಲ್ಲಿ ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಈ ಸಮ್ಮೇಳನ ಸ್ವಾಗತಿಸಿದೆ. ರಾಜ್ಯದ ವಿದ್ಯುತ್ ಸಾಮರ್ಥ್ಯವನ್ನು ಹೆಚ್ಚಿಸುವ ಪ್ರತೀ ಪ್ರಯತ್ನವೂ ಜನತೆಯ ಮತ್ತು ರಾಜ್ಯದ ಒಟ್ಟಾರೆ ಹಿತವನ್ನು ಗಮನದಲ್ಲಿಟ್ಟುಕೊಂಡಿರಬೇಕೆಂದು ಸಿ.ಪಿ.ಐ.(ಎಂ) ಬಯಸಿದೆ. ಈ ನಿಟ್ಟಿನಲ್ಲೇ ಪಡುಬಿದ್ರೆಯಲ್ಲಿ ನಾಗಾರ್ಜುನ ವಿದ್ಯುತ್ ಕಂಪನಿ ಎಂಬ ದೇಶೀಯ ಖಾಸಗೀ ಕಂಪೆನಿಯೊಂದಿಗೆ ಥರ್ಮಲ್ ವಿದ್ಯುತ್ ಉತ್ಪಾದನೆಗೆ ರಾಜ್ಯ ಸರಕಾರವು ಮಾಡಿಕೊಂಡಿರುವ ಒಪ್ಪಂದವನ್ನು ಸಿಪಿಐ(ಎಂ) ನೋಡಿದೆ.

ರಾಜ್ಯ ಸರಕಾರ ಈ ಹಿಂದೆ ಮಾಡಿಕೊಂಡಿರುವ ತಿಳುವಳಿಕೆ ಒಪ್ಪಂದಗಳು ಮತ್ತು ವಿದ್ಯುತ್ ಖರೀದಿ ಒಪ್ಪಂದಗಳು(ಪಿ.ಪಿ.ಎ.) ಪಾರದರ್ಶಕವಾಗಿಲ್ಲದ ಕಾರಣದಿಂದಾಗಿ ರದ್ದಾದ ಪ್ರಸಂಗಗಳು ಇರುವುದನ್ನು ಗಮನಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿಯೇ ನಾಗಾರ್ಜುನ ವಿದ್ಯುತ್ ಕಂಪೆನಿಯೊಂದಿಗೆ ಸರಕಾರ ಮಾಡಿಕೊಂಡಿರುವ ಒಪ್ಪಂದಗಳನ್ನು ರಾಜ್ಯದ ಜನತೆಯ ಮುಂದೆ ಬಹಿರಂಗ ಪಡಿಸಬೇಕೆಂದು ಈ ಸಮ್ಮೇಳನವು ಒತ್ತಾಯಿಸಿದೆ. ಇಂತಹ ಪಾರದರ್ಶಕತೆಯ ದೃಷ್ಟಿಯಿಂದ ವಿದ್ಯುತ್ ಖರೀದಿ ಒಪ್ಪಂದವನ್ನು ಕರ್ನಾಟಕ ವಿದ್ಯುತ್ ಪ್ರಾಧಿಕಾರ(ಕೆ.ಇ.ಆರ್.ಸಿ.)ದ ಮುಂದೆ ಕೂಡಲೇ ತರಬೇಕೆಂದೂ, ರಾಜ್ಯದ ಜನತೆಯ ವಿವೇಚನೆಗೆ ಬೇಕಾದ ಪಾರದರ್ಶಕತೆಯನ್ನು ಅನುಸರಿಸಬೇಕೆಂದು ಒತ್ತಾಯಿಸುವ ಜತೆಗೆ ಪರಿಸರದ ಪ್ರಶ್ನೆಯನ್ನೂ ಸಮ್ಮೇಳನವು ಗಮನಿಸಿದೆ. ಥರ್ಮಲ್ ವಿದ್ಯುತ್ ಉತ್ಪಾದನೆ ಮತ್ತು ಪರಿಸರದ ನಡುವಿನ ಸಮಸ್ಯೆಗಳ ಪ್ರಾಮಾಣಿಕ ಪರಿಹಾರಕ್ಕೆ ಸರಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಹಾಗೆಯೇ ಈ ಘಟಕದ ಸ್ಥಾಪನೆಯ ಸಂಬಂಧ ಉಂಟಾಗುವ ಪುನರ್ವಸತಿ ಪ್ರಶ್ನೆಯನ್ನು ಸರಿಯಾದ ರೀತಿಯಲ್ಲಿ ಪರಿಹರಿಸಲು ಕೂಡಲೇ ಕ್ರಮಗಳನ್ನು ಪ್ರಕಟಿಸಬೇಕೆಂದು ಉಡುಪಿಯಲ್ಲಿ ಜನವರಿ 21ರಿಂದ 24, 2004ರ ವರೆಗೆ ನಡೆದ ಸಿಪಿಐ(ಎಂ) 18ನೇ ಕರ್ನಾಟಕ ರಾಜ್ಯ ಸಮ್ಮೇಳನ ಒತ್ತಾಯಿಸಿದೆ.



ರಾಜ್ಯದ ತೋಟ ಕಾರ್ಮಿಕರ ಶೋಷಣೆ ತಪ್ಪಿಸಿ

ನಮ್ಮ ರಾಜ್ಯದ ಕಾಫಿ, ಚಹಾ ಮತ್ತು ರಬ್ಬರ್ ತೋಟಗಳಲ್ಲಿ ದುಡಿಯುವ ಅಸಂಖ್ಯಾತ ಕಾರ್ಮಿಕರು ಇಂದು ತೀವ್ರ ಶೋಷಣೆಗೊಳಪಟ್ಟಿದ್ದಾರೆ. ಕಳೆದ ಮೂರು ನಾಲ್ಕು ವರ್ಷಗಳಿಂದ ಕೈಗಾರಿಕೆಯ ಬಿಕ್ಕಟ್ಟಿನ ನೆಪದಲ್ಲಿ ಬಿಕ್ಕಟ್ಟಿನ ಭಾರವನ್ನು ಕಾರ್ಮಿಕರ ಮೇಲೆ ಹೊರಿಸಲಾಗುತ್ತಿದೆ. ಕನಿಷ್ಟ ವೇತನ ಪ್ರಕಟಣೆಯಾಗಿ ಆರು ವರ್ಷಗಳು ಕಳೆದಿವೆ. ಪುನರ್‌ವಿಮರ್ಶಿತ ಕನಿಷ್ಟ ವೇತನದ ಅಂತಿಮ ಪ್ರಕಟಣೆಯಾಗಿಲ್ಲ. ನಿಗದಿಯಾಗಿರುವ ಕನಿಷ್ಟ ವೇತನ ಸಹ ಕಂಪನಿ ತೋಟಗಳ ಖಾಯಂ ಕಾರ್ಮಿಕರಿಗೆ ಮತ್ತು ಕಾರ್ಮಿಕರು ಸಂಘಟಿತರಾಗಿರುವ ತೋಟಗಳನ್ನು ಬಿಟ್ಟರೆ ಉಳಿದೆಡೆ ನೀಡಲಾಗುತ್ತಿಲ್ಲ. ವರ್ಷದಿಂದ ವರ್ಷಕ್ಕೆ ಖಾಯಂ ಕಾರ್ಮಿಕರ ಸಂಖ್ಯೆಯನ್ನೇ ಕಡಿಮೆ ಮಾಡಿ ಆ ಸ್ಥಾನದಲ್ಲಿ ಅಕ್ರಮವಾಗಿ ಹಂಗಾಮಿ, ಚಂಗೂಲಿ, ಕಾಂಟ್ರಾಕ್ಟ್ ಮತ್ತು ಹದಿನಾರು ದಿನಗಳ ಪಟ್ಟಿ ಎಂಬ ಹೆಸರಿನಲ್ಲಿ ಅತೀ ಕಡಿಮೆ ವೇತನಕ್ಕೆ ದುಡಿಸುತ್ತಿದ್ದಾರೆ. ವಿವಿಧ ಕಾರ್ಮಿಕ ಕಾಯ್ದೆಗಳ ಸೌಲಭ್ಯಗಳನ್ನು ನಿರಾಕರಿಸಲಾಗುತ್ತಿದೆ.

ರಾಜ್ಯದ ತೋಟಗಳಲ್ಲಿ ಸುಮಾರು ಮೂರು ಲಕ್ಷ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ ಎಂಬ ಅಂದಾಜಿದ್ದರೂ ಭವಿಷ್ಯ ನಿಧಿ ಯೋಜನೆಯಡಿ ಇದರ ಕಾಲು ಭಾಗದಷ್ಟೂ ಕಾರ್ಮಿಕರನ್ನು ಸೇರಿಸದೇ ಇರುವುದರಿಂದ ಭವಿಷ್ಯ ನಿಧಿ ಯೋಜನೆಯನ್ವಯ ಸೌಲಭ್ಯಗಳು ಸಿಗುತ್ತಿಲ್ಲ. ಮೃಗೀಯವಾಗಿ ನಡೆಸಿಕೊಳ್ಳುತ್ತಿದ್ದಾರೆ. ಈ ಕಾರ್ಮಿಕರನ್ನು ಸರಬರಾಜು ಮಾಡುವ ದಲ್ಲಾಳಿಗಳು ಲಕ್ಷಾಂತರ ರೂಪಾಯಿ ಕಮೀಷನ್ ಪಡೆಯುತ್ತಿದ್ದಾರೆ. ಇದಕ್ಕೆಲ್ಲ ಕೊನೆಯಾಗಬೇಕಾದರೆ ರಾಜ್ಯ ಸರಕಾರ ಕೂಡಲೇ ಪುನರ್‌ವಿಮರ್ಶಿತ ಕನಿಷ್ಟ ಕೂಲಿ ನಿಗದಿ ಮಾಡಬೇಕು ಮತ್ತು ನಿಗದಿತ ಕನಿಷ್ಟ ಕೂಲಿ ಹಾಗೂ ವಿವಿಧ ಕಾರ್ಮಿಕ ಕಾಯಿದೆಗಳಡಿಯ ಸೌಲಭ್ಯಗಳು ಎಲ್ಲಾ ಕಾರ್ಮಿಕರಿಗೂ ಸಿಕ್ಕುವಂತೆ ಕಟ್ಟುನಿಟ್ಟಿನ ಕ್ರಮ ವಹಿಸಬೇಕು.

ಈಗ ತೋಟ ಕಾರ್ಮಿಕರ ಕಾಯಿದೆಯ ವ್ಯಾಪ್ತಿ ಐದು ಹೆಕ್ಟೇರ್ ಇದ್ದು ಅದಕ್ಕಿಂತ ಕಡಿಮೆ ವಿಸ್ತೀರ್ಣವಿರುವ ತೋಟಗಳಲ್ಲಿ ದುಡಿಯುವ ಲಕ್ಷಾಂತರ ಕಾರ್ಮಿಕರ ಹಿತ ಕಾಪಾಡಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಪ್ರತ್ಯೇಕ ಪ್ರತ್ಯೇಕ ಕ್ಷೇಮ ನಿಧಿಯನ್ನು ಕಾದಿರಿಸಿ ಅಂತಹ ಕಾರ್ಮಿಕರ ದಾಖಲೆಗಳನ್ನು ಇಡುವಂತೆ ಬೇಕಾದ ಕ್ರಮ ವಹಿಸಿ ಅರ್ಹ ನಿವೃತ್ತ ಕಾರ್ಮಿಕರಿಗೆ ಪಿಂಚಣಿ ಮತ್ತು ವೈದ್ಯಕೀಯ ವೆಚ್ಚ ಭರಿಸಲು ಸಾಧ್ಯವಾಗಬೇಕು. ಅಂತಿಮವಾಗಿ ಹಂಗಾಮಿ, ಕಾಂಟ್ರಾಕ್ಟ್, ಚಂಗೂಲಿ, ಹದಿನಾರು ದಿನಗಳ ಪಟ್ಟಿಯೆಂಬ ಹೆಸರಿನ ಅಕ್ರಮ ದುಡಿಮೆಯನ್ನು ರದ್ದುಗೊಳಿಸಿ ಅವರನ್ನು ಖಾಯಂಗೊಳಿಸಬೇಕು. ಬಿಪಿಎಲ್ ಕಾರ್ಡ್‌ಗಳನ್ನು ತೋಟಕಾರ್ಮಿಕರಿಗೆ ಕೊಡಬೇಕು. ಇವೇ ಮೊದಲಾದ ತೋಟ ಕಾರ್ಮಿಕರ ವಿವಿಧ ಸಮಸ್ಯೆಗಳನ್ನು ಪರಿಹರಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ತುರ್ತು ಕ್ರಮ ಕೈಗೊಳ್ಳಬೇಕೆಂದು ಉಡುಪಿಯಲ್ಲಿ 2005ರ ಜನವರಿ 21ರಿಂದ 24ರವರೆಗೆ ಸೇರಿದ ಸಿಪಿಐ(ಎಂ)ನ 18ನೇ ಕರ್ನಾಟಕ ರಾಜ್ಯ ಸಮ್ಮೇಳನವು ರಾಜ್ಯ ಹಾಗೂ ಕೇಂದ್ರ ಸರಕಾರಗಳನ್ನು ಒತ್ತಾಯಿಸಿದೆ.

ಟೆಲಿಕಾಂ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ (FDI) ಹೆಚ್ಚಳದ ವಿರುದ್ಧ...

ಪುಟ 5 ರಿಂದ

ಪುನರ್ರಚನೆಯ ಮತ್ತು ಸುಧಾರಣೆಯ ಪ್ರಸ್ತಾಪಗಳು, ಲಾಭದಾಯಕ ಸಾರ್ವಜನಿಕ ಉದ್ದಿಮೆಗಳಿಂದ ಬಂಡವಾಳ ಹಿಂತೆಗೆತ ಇತ್ಯಾದಿ ಕ್ರಮಗಳು, ಆರ್ಥಿಕ ನೀತಿಗಳಿಗೆ ಸಂಬಂಧಪಟ್ಟಂತೆ ತಾನು ಬಿಜೆಪಿಗಿಂತ ಭಿನ್ನವಲ್ಲ ಎಂದು ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ಜನತೆಗೆ ತೋರಿಸಿದೆ. ಇಂತಹ ಸಂದರ್ಭದಲ್ಲಿ ಭಾರತದ ಜನತೆಯನ್ನು ಅಣಿನೆರೆಸಿ, ಜನಪರ ಚಳುವಳಿಯನ್ನು ಹಮ್ಮಿಕೊಳ್ಳುವುದರ ಮೂಲಕ ಮಾತ್ರವೇ ಕೇಂದ್ರಸರಕಾರದ ನೀತಿಯನ್ನು ಬದಲಿಸಬೇಕಾಗಿದೆ.

ಇಪಿಎಫ್ ಬಡ್ಡಿದರ ಹೆಚ್ಚಳ : ಕಾಂಗ್ರೆಸ್ ನೇತೃತ್ವದ ಕೇಂದ್ರಸರಕಾರವು ಅಧಿಕಾರಕ್ಕೆ ಬಂದ ಹೊಸತರಲ್ಲಿ ನೌಕರರ ಭವಿಷ್ಯ ನಿಧಿಯ ಬಡ್ಡಿದರವನ್ನು ಶೇ 9.5 ರಿಂದ ಶೇ.8.5 ಕ್ಕೆ ಇಳಿಸಿತ್ತು. ಸಿಪಿಐ(ಎಂ) ಮತ್ತಿತರ ಎಡಪಕ್ಷಗಳು ಹಾಗೂ ಕಾರ್ಮಿಕ ಸಂಘಟನೆಗಳು ತೀವ್ರವಾಗಿ ವಿರೋಧಿಸಿದ ಬಳಿಕ ಈಗ ಅದನ್ನು ಶೇ 9.5ಕ್ಕೆ ಹೆಚ್ಚಿಸುವುದರ ಮೂಲಕ ದೀರ್ಘಕಾಲದ ಒತ್ತಾಯಕ್ಕೆ ಕೇಂದ್ರ ಸರಕಾರ ಮಣಿದಂತಾಗಿದೆ. ಆದರೆ, ಮಾಧ್ಯಮದ ಒಂದು ವಿಭಾಗವು ಇಪಿಎಫ್‌ನ ಬಡ್ಡಿದರ ಹೆಚ್ಚಳವನ್ನು, ಎಫ್‌ಡಿಐ ಹೆಚ್ಚಳಕ್ಕೆ ಎಡಪಕ್ಷಗಳು ಒಪ್ಪಿದುದರ ಫಲ ಎಂದು ಹೇಳಿದ್ದು, ಇದು ಅನೈತಿಕವಾದ ಹೇಳಿಕೆ ಎಂದು ಎಡಪಕ್ಷಗಳು ಹೇಳಿವೆ.

ಸಾರ್ವಜನಿಕ ಉದ್ದಿಮೆಗಳಲ್ಲಿ, ಆಯಕಟ್ಟಿನ ಕ್ಷೇತ್ರಗಳಲ್ಲಿ ವಿದೇಶಿ ನೇರ ಬಂಡವಾಳವನ್ನು ಸಿಪಿಐ(ಎಂ) ಮತ್ತು ಎಡಪಕ್ಷಗಳು ಪ್ರಾರಂಭದಿಂದಲೇ ವಿರೋಧಿಸುತ್ತಿದ್ದುದನ್ನು ಈ ಸಂದರ್ಭದಲ್ಲಿ ಗಮನಿಸಬೇಕು.

ದೇಶದ ಆರ್ಥಿಕ ಸಾರ್ವಭೌಮತೆಯನ್ನು ರಕ್ಷಿಸುವ ನಿಟ್ಟಿನಲ್ಲಿ, ಟೆಲಿಕಾಂ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳವನ್ನು ಶೇ.49 ರಿಂದ ಶೇ.74 ಕ್ಕೆ ಹೆಚ್ಚಿಸಿದುದನ್ನು ತೀವ್ರವಾಗಿ ವಿರೋಧಿಸಬೇಕೆಂದೂ ಹಾಗೂ ಫೆಬ್ರುವರಿ 7 ರಂದು ದೇಶವ್ಯಾಪ್ತಿಯಂತ ಪ್ರತಿಭಟನೆ ನಡೆಸಬೇಕೆಂದೂ ಜನತೆಯಲ್ಲಿ ಎಡಪಕ್ಷಗಳು ಮನವಿ ಮಾಡಿದೆ.

ಚುಟುಕುಗಳ ಭಂಡಾರ ಈ 'ವಿಡಂಬಾರಿ'

ಚುಟುಕುಗಳ ಭಂಡಾರವಾಗಿರುವ 'ವಿಡಂಬಾರಿಯವರ ಚುಟುಕುಗಳ ಹೊಸ ಸಂಕಲನ ಕುದಿಬಿಂದು ಫೆಬ್ರವರಿ 8 ರಂದು ಶಿರಸಿಯಲ್ಲಿ ಬಿಡುಗಡೆಯಾಗುತ್ತಿದೆ. ದಿನಕರ ದೇಸಾಯಿಯವರ ಈ ಏಕಲವ್ಯ ಶಿಷ್ಯನ ಕುರಿತು ಒಂದೆರಡು ಪರಿಚಯಾತ್ಮಕ ನುಡಿ ಇಲ್ಲಿ.



ಬದುಕಿನಲ್ಲಿ ಅನವರತ ಕಷ್ಟವನ್ನೇ ಕಾಣುತ್ತ ಬಂದ ವಿಡಂಬಾರಿ ಎಂದೇ ಖ್ಯಾತಗಾರ ವಿಡಂಬಾರಿಯವರದ್ದು ಚುಟುಕುಗಳ ಭಂಡಾರ. ತನ್ನ ದುಃಖಗಳನ್ನು ಮರೆತು ಸಮಾಜದ ಅಂಕುಡೊಂಕುಗಳನ್ನು ತನ್ನ ಅಂಕುಡೊಂಕುಗಳನ್ನು ಚುಟುಕುಗಳಲ್ಲಿ ವಿಡಂಬಿಸಿಕೊಂಡು ಗಮನ ಸೆಳೆದಿದ್ದಾರೆ. ತಾಯಿ ದೇವದಾಸಿ, ಕಿತ್ತು ತಿನ್ನುವ ಬಡತನ ಹಾಗಾಗಿ ವಿದ್ಯಾಭ್ಯಾಸ ಪ್ರಾಥಮಿಕ ಹಂತಕ್ಕೆ ನಿಂತಿತು. ಅಂಚೆ ಅಣ್ಣನಾಗಿ ಕೆಲಸ ಮಾಡಿ ನಿವೃತ್ತರಾದ ನಂತರ ಪುಸ್ತಕ ಮಳಿಗೆಯಲ್ಲಿ ವ್ಯವಸ್ಥಾಪಕರಾಗಿ ಬಸ್ಸಿನಲ್ಲಿ ಕಾರ್ಯಕ್ರಮಗಳಲ್ಲಿ ಪುಸ್ತಕ ಮಾರುವ ಪುಸ್ತಕದ ಪರಿಚಾರಕರಾಗಿ ದುಡಿಯುತ್ತಿದ್ದಾರೆ. ಪುಸ್ತಕದ ನಡುವೆ ಜೀವನದ ಸಂಕಷ್ಟವನ್ನು ಮರೆಯುವ ಯತ್ನ ಅವರದ್ದು. ಅವರ ಚುಟುಕುಗಳು ಅವರ ಜೀವನವನ್ನು ಚುಟುಕಾಗಿ ವಿವರಿಸುತ್ತವೆ.

ಯಾರದೋ ನೆರಳಲ್ಲಿ ನಾ ಬೆಳೆದು ಬಂದೆ
ಕೂಳಿಗೆ ವಿಧವಿಧದ ವೇಷಗಳ ತಳೆದೆ
ನೀ ಗಳಿಸಿದ್ದೇನೆಂದು ಕೇಳಿದರೆ ನಾಳೆ
ಉತ್ತರ ಏನುಂಟು? ಬರಿದಾದ ಹಾಳೆ

ದಿನಕರ ದೇಸಾಯಿಯವರ ಏಕಲವ್ಯ ಶಿಷ್ಯ ಭಂಡಾರಿಯವರು ತಮ್ಮನ್ನು ತಾವು ವಿಡಂಬಿಸಿಕೊಂಡ ರೀತಿಯಿದು. ನಮ್ಮ ಕೆಂಪಿನಿದಲೂ, ಚುಟುಕುಗಳಿಂದಲೂ ಇವರ ಅಭಿಮಾನಿಗಳ ಬಳಗ ದೊಡ್ಡದು. ದುಃಖಕ್ಕೆ ಪರಿಹಾರ ಚುಟುಕಾಗಿ ಹೌದೆನ್ನುತ್ತಾರೆ. ವಿಡಂಬಾರಿ.

ಉಮ್ಮಳಿಸಿ ಬಂದಾಗ ಆಗಾಗ ದುಃಖ
ಚುಟುಕುಗಳು ತಟತಟನೆ ಹೊರಡುವವು ಅಕ್ಕ
ಬೇಸರವು ಬರುವತನಕ
ಬರೆಯುವೆನು ಕುಳಿತು
ಅವುಗಳಲಿ ಒಂದೆರಡು ಆದಾವು ಒಳಿತು.

ಹೀಗೆ ಇವನ ಪ್ರೀತಿಯ ಅಕ್ಕ ನಾಪತ್ತೆಯಾದಾಗಲೂ ಕಳೆದ ವರ್ಷ ಏಕಮಾತ್ರ ಪುತ್ರ ತೀರಿ ಹೋದಾಗಲು ಚುಟುಕು ಬರೆದು ನಿಟ್ಟುಸಿರಿಟ್ಟರು. ಹಾಗಂತ ಸಮಾಜದ so called ವಿದ್ಯಾವಂತರ ಬಗ್ಗೆ ಯಾವ ದಾಕ್ಷಿಣ್ಯವನ್ನೂ ತೋರದೇ ಬರೆದದ್ದೇನು?

ಬೀದಿಯಲಿ ತಿರುಗುವ
ಹಲವಾರು ಎಮ್ಮೆ
ಇಣುಕಿ ಇಣುಕಿ ನೋಡಿದೆನು
ಹತ್ತಿರದಿ ಒಮ್ಮೆ
ಅವುಗಳಲಿ ಹಿಂಡುವವು ಹತ್ತಕ್ಕೆ
ಎರಡು
ಉಳಿದೆಮ್ಮೆಗಳಲ್ಲ ಸಂಪೂರ್ಣ
ಬರಡು

ವಿಡಂಬಾರಿಯವರ ಚುಟುಕುಗಳು ಕರ್ನಾಟಕದ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಪ್ರಥಮ ಚುಟುಕು ಸಂಕಲನ 1981 ರಲ್ಲಿ 'ಒಗ್ಗರಣೆ' ಎಂಬ ಹೆಸರಿನಲ್ಲಿಯೂ 'ಕವಳ' 1989 ರಲ್ಲಿಯೂ, ಪ್ರಕಟ ವಾಗಿವೆ. 'ಅಂಚೆಪೇದೆಯ ಆತ್ಮಕಥೆಯು 1995 ರಲ್ಲಿ ಪ್ರಕಟವಾಗಿದೆ. ಈಗ ಚಿಂತನ ಉತ್ತರಕನ್ನಡ ಸಂಸ್ಥೆಯು ಅವರ 'ಕುದಿಬಿಂದು' ಚುಟುಕು ಸಂಕಲನ ಸಂಸ್ಥೆಯು ಪ್ರಕಟಿಸಿ ಬಿಡುಗಡೆಗೊಳಿಸುವ ಕಾರ್ಯಕ್ರಮ ಇರಿಸಿಕೊಂಡಿದೆ. ಜೊತೆಗೆ ಪುಸ್ತಕದ ಮಾರಿಬಂದ ಹಣವನ್ನು ವಿಡಂಬಾರಿಯವರಿಗೆ ಅರ್ಪಿಸುವ ಸಂಕಲ್ಪ ಹೊಂದಿದೆ.

ಕುದಿಬಿಂದುವಿನ ಬಗ್ಗೆ ಡಾ.ಎಂ.ಜಿ.ಹೆಗಡೆಯವರು - ಅವರ ಚುಟುಕುಗಳು ಸಂಧಿಕಾಲದ ಸಮಾಜದ ಗಾಯಗಳನ್ನೆಲ್ಲ ಬೆರಳಿಟ್ಟು ತೋರಿಸುತ್ತವೆ

ಬದುಕಿನುದ್ದಕ್ಕೂ ನಾನು ಉಣ್ಣುತಿಹೆ ನೋವು
ಆಗುವುದು ಕೇಳಯ್ಯ ಚುಟುಕೆಂಬ ಹೂವು
ಏರಿದಂತೆಲ್ಲ ಜವನದಿ ಕಾವು
ಆಗುವೆನು ಕುಹಕರಿಗೆ ನಾ ವಿಷದ ಹಾವು
ನೋವನ್ನು ಹೂವನಾಗಿಸುವ ಕನಸುಗಾರಿಕೆ

ವಿಡಂಬಾರಿಯವರಿಗೆ ಇದೆ - ಎಂದು ಅರ್ಥಪೂರ್ಣವಾಗಿ ಬರೆದದ್ದು ಅಕ್ಷರಶಃ ಸತ್ಯ. ಅವರ ಬದುಕಿನ ಸಂಜೆಯಲ್ಲಿ ಅವರ ಚುಟುಕುಗಳ ಹೂದೋಟದ ತುಂಬೆಲ್ಲ ಬಣ್ಣ ಉಣ್ಣುವ ಹೂಗಳು ಅರಳಲಿ ಎಂದು ಬಯಸೋಣ.

ರಾಜಶೇಖರ ಹೆಬ್ಬಾರ

ಓಷ್‌ವಿಚ್ ಸಾವಿನ ಶಿಬಿರ

ಓಷ್‌ವಿಚ್ ಓಷ್ ವಿಚ್
ಹಿಟ್ಲರನಿಗೆ ಅದು ಅಚ್ಚುಮೆಚ್ಚು
ವಿಷಾನಿಲದ ಯಾತನಾಶಿಬಿರದ
ಮೃತ್ಯುವಿನ ಸ್ವಿಚ್ಚು
ಸ್ವಜನಾಂಗವಲ್ಲದ

ಅನ್ಯರ ಹುಟ್ಟಡಗಿಸಿ
ಸೃಷ್ಟಿಸಿ ವರ್ಣಬೇಧ ನೀತಿ
ಹೆಚ್ಚಿಸಿ ದ್ವೇಷದ ಹೊಟ್ಟೆಕಿಚ್ಚು

ತಕ್ಷಣ ಮರಣ ತರುವ
ಸಾವಿನ ವಿಧಾನ ಪ್ರಯೋಗಿಸಿದ
ಪ್ರಯೋಗಕ್ಕೆ ಜೀವವಾಯ್ತು ಪ್ರಯೋಗವಸ್ತು

ಆರಿತೆನಲೆ ದ್ವೇಷದ ಕಿಚ್ಚು?
ಮುಗಿಯಿತೆನಲೆ ಓಷ್‌ವಿಚ್?
ಇಲ್ಲ, ಇಲ್ಲ ಆರಲೇ ಇಲ್ಲ
ನವಹಿಟ್ಲರರ ದ್ವೇಷದ ಕಿಚ್ಚು

ಕಾಂಬೋಡಿಯಾ, ಯುಗಸ್ಲಾವಿಯಾ
ಉಗಂಡಾ, ರುವಂಡಾಗಳ
ರುಂಡ ಮುಂಡ ಛಿದ್ರಗೊಳಿಸಿ
ತುತ್ತೆಕುಣಿದಿದೆ ಓಷ್‌ವಿಚ್
ಹಿಟ್ಲರನಿನ್ನೂ ಸತ್ತಿಲ್ಲ, ಸಾವು ಇನ್ನೂ ಬಂದಿಲ್ಲ
ಕಲಿಯಲಿಲ್ಲ ಯಾರಿನ್ನೂ
ಕ್ರೂರ ಇತಿಹಾಸ ಪಾಠ, ಇದೆಂಥ ಹುಚ್ಚು

- ಒಂಬಣ್ಣ ಅಮರಚಿಂತ
(ಓಷ್‌ವಿಚ್ ವಿಮೋಚನಾ ದಿನದ ಸಂದರ್ಭದಲ್ಲಿ ರಚಿಸಿದ ಗಜಲ್)

ಉತ್ತರ ಕನ್ನಡದಲ್ಲಿ ಯಶಸ್ವಿ ಕರಾವಳಿ ವಿಜ್ಞಾನ ಕಲಾಜಾಥಾ

ಇತ್ತೀಚೆಗೆ ಉತ್ತರಕನ್ನಡದ ಜಿಲ್ಲಾ ಕೇಂದ್ರವಾದ ಕಾರವಾರದ ಶಿವಾಜಿ ಮಹಾವಿದ್ಯಾಲಯದಲ್ಲಿ ಉದ್ಘಾಟನೆಗೊಂಡ ಕರಾವಳಿ ವಿಜ್ಞಾನ ಕಲಾ ಜಾಥಾ ಅತ್ಯಂತ ಯಶಸ್ವಿಯಾಗಿ ಭಟ್ಕಳ ತಾಲೂಕಿನ ಒಂದು ಗ್ರಾಮೀಣ ಪ್ರದೇಶವಾದ ಕೋಣಾರದಲ್ಲಿ ಮುಕ್ತಾಯವಾಯಿತು. ವಿಜ್ಞಾನ ವಸ್ತು ಪ್ರದರ್ಶನ, ವಿಚಾರಸಂಕಿರಣ, ಶಿಬಿರ ಜಾಥಾ ಇತ್ಯಾದಿಗಳ ಮೂಲಕ ದೇಶದಲ್ಲಿ 2004ನ್ನು ವೈಜ್ಞಾನಿಕ ಜಾಗೃತಿ ವರ್ಷವನ್ನಾಗಿ ವಿಶಿಷ್ಟವಾಗಿ ಆಚರಿಸಲಾಗುತ್ತಿದೆ. ಇದರ ಭಾಗವಾಗಿ ಉತ್ತರಕನ್ನಡ ಜಿಲ್ಲೆಯಲ್ಲಿ 7 ದಿನಗಳ ಕಾಲ 8 ತಾಲೂಕುಗಳಲ್ಲಿ ಈ ವಿಜ್ಞಾನ ಕಲಾ ಜಾಥಾ ನಡೆಯಿತು. ಸುಮಾರು 1250 ಕಿ.ಮಿಗಳನ್ನು ಸಂಚರಿಸಿ 35 ಯಶಸ್ವಿ ಪ್ರಯೋಗ ನಡೆಸಿ ಜಾಥಾವನ್ನು ಅರ್ಥಪೂರ್ಣಗೊಳಿಸಲಾಗಿದೆ.

ವಿಜ್ಞಾನ ತಂತ್ರಜ್ಞಾನಗಳು ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ವೈಜ್ಞಾನಿಕ ಮನೋಭಾವ ಎನ್ನುವುದು ತರಗತಿ ಕೋಣೆಗಳಲ್ಲಿನ ವಿಜ್ಞಾನ ಪ್ರಯೋಗಗಳು ಮಾತ್ರ ಅಲ್ಲ. ನಮ್ಮ ಸುತ್ತಲಿನ ಸಮಾಜವನ್ನು ಹೇಗೆ ಅರ್ಥೈಸುತ್ತೇವೆಯೋ, ವಿಶ್ಲೇಷಿಸುತ್ತೇವೋ, ಪ್ರಗತಿಗೆ ವಿರೋಧಿಯಾದ ಜೀವ ವಿರೋಧಿಯಾದ ನೆಲೆಯನ್ನು ವಿರೋಧಿಸುತ್ತ ಪರ್ಯಾಯ ವ್ಯವಸ್ಥೆಯನ್ನು ಹೇಗೆ ಕಲ್ಪಿಸುತ್ತೇವೆ ಎನ್ನುವುದು ವೈಜ್ಞಾನಿಕ ಮನೋಧರ್ಮ. ನೆಲ-ಜಲ-ಜನರನ್ನು ಒಟ್ಟಂದದಲ್ಲಿ ಪರಿಭಾವಿಸುವುದೇ ವಿಜ್ಞಾನವಾಗಿದೆ.

ಈ ಕಾರಣದಿಂದ 'ಚಿಂತನ ಉತ್ತರ ಕನ್ನಡ'ದ ಅಂಗಸಂಸ್ಥೆಯಾದ 'ಚಿಂತನರಂಗ ಅಧ್ಯಯನ ಕೇಂದ್ರ' ಹೊನ್ನಾವರ, ಉತ್ತರಕನ್ನಡದಲ್ಲಿ ಜಾಥಾ ನಡೆಸಲು ನಿರ್ಧರಿಸಿತು. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಳಗಾವಿ, ವಿಜ್ಞಾನ ಪರಿಷತ್ತು, ಬೆಳಗಾವಿ ವಿಜ್ಞಾನ ಕೇಂದ್ರ ಮತ್ತು ವೈಜ್ಞಾನಿಕ ಜಾಗೃತಿ ವರ್ಷಾಚರಣೆ ಸಮಿತಿ ಉತ್ತರಕನ್ನಡ ಇವರು ಅಗತ್ಯವಿರುವ ಎಲ್ಲ ನೆರವನ್ನು ಒದಗಿಸಿಕೊಟ್ಟರು.

ಇಡೀ ಜಾಥಾ ಸಂಚರಿಸಿ ಕಾರ್ಯಕ್ರಮ ಕೊಟ್ಟಿರುವುದು ಬಹುತೇಕ ಗ್ರಾಮೀಣ ಪ್ರದೇಶದಲ್ಲಿ. ಕಾರವಾರದ ಉಳಗಾ, ಜೋಯ್ಡ ತಾಲೂಕಿನ ಕುಂಬಾರವಾಡ, ಉಳವಿ, ಬೈಲಪಾರ, ಯಲ್ಲಾಪುರದ ವಜ್ರಳ್ಳಿ, ಗುಳ್ಳಾಪುರ, ಅಂಕೋಲಾದ ಅಲಗೇರಿ, ಬೆಳ್ಳಂಬಾರ, ಕಣಗಿಲ, ಹೊನ್ನಾವರದ ಹಡಿನಬಾಳ, ಕೆರೆಕೋಣ, ಅಳ್ಳಂಕಿ, ಅಪ್ಸರಕೊಂಡ, ಭಟ್ಕಳದ ಕೋಣಾರ ಇವೆಲ್ಲವೂ ತೀರಾ ಗ್ರಾಮೀಣ ಪ್ರದೇಶಗಳು ಅಲ್ಲಿ ವಿಜ್ಞಾನ, ವೈಜ್ಞಾನಿಕ ಮನೋಧರ್ಮದ ಅವಶ್ಯಕತೆ ಬಗ್ಗೆ ಹೇಳಲಾಯಿತು. ದಾಂಡೇಲಿಯ ತೀರಾ ಹಿಂದುಳಿದ ಕಾಲನಿಗಳಲ್ಲಿ ಪ್ರದರ್ಶನ ನೀಡಲಾಯಿತು.

ಜಾಥಾದಲ್ಲಿ 4-5 ನಾಟಕಗಳು, ಹಾಡುಗಳು, ಕರಪತ್ರ, ಪುಸ್ತಕ ಪ್ರದರ್ಶನ ಮತ್ತು ಮಾರಾಟಗಳು, ಸಂವಾದಗಳಿದ್ದವು.

ಉತ್ತರಕನ್ನಡ ಜಿಲ್ಲೆಯ ಪ್ರಮುಖ ಸಮಸ್ಯೆಯಾಗಿರುವ ಅತಿಕ್ರಮಣ ಸಮಸ್ಯೆ ನಿರಾಶ್ರಿತರ ಸಮಸ್ಯೆ ಮತ್ತು ನಿರುದ್ಯೋಗ ಸಮಸ್ಯೆಗಳ ಕುರಿತು ಚರ್ಚಿಸುವ ಮತ್ತು ಅದಕ್ಕೊಂದು ಪರಿಹಾರ ಮಾರ್ಗ ಸೂಚಿಸುವ ನಾಟಕ 'ಸಮಸ್ಯೆಯ ಸುಳಿ' ಜಾಥಾದ ಗ್ರಾಮೀಣ ಪ್ರದೇಶದಲ್ಲಿ ಯಶಸ್ವಿಯಾಯಿತು. ಅಧಿಕಾರದಲ್ಲಿರುವವರ ದಿವಾಳಿಕೋರ ನೀತಿ, ಜಾತಿ-ಧರ್ಮದ ಹೆಸರಿನಲ್ಲಿ ಅಧಿಕಾರ ನಡೆಸುವ ಅಪಾಯ, ಪರಿಸರ-ಪರಿಸರ ಎಂದು ಹೇಳುತ್ತಾ ಅರಣ್ಯಗಳ್ಳತನ ಮಾಡುವುದು, ಉದ್ಯೋಗ ಸೃಷ್ಟಿಸದ ಅಭಿವೃದ್ಧಿ ನೀತಿ, ಅರಣ್ಯ ಅತಿಕ್ರಮಣ ಭೂಮಿ ಸಕ್ರಮಗೊಳಿಸದ ಸರ್ಕಾರದ ರೈತವಿರೋಧಿ ನೀತಿಗಳ ಬಗ್ಗೆ ಈ ನಾಟಕ ಬೆಳಕು ಚೆಲ್ಲಿತು. ಇದನ್ನು ಡಾ.ಆರ್.ವಿ.ಭಂಡಾರಿಯವರು ರಚಿಸಿದರೆ ಕಿರಣ ನಾಯ್ಕ ನಿರ್ದೇಶಿಸಿದರು.

ಬಾಲ್ಯ ವಿವಾಹದ ಅಪಾಯದ ಸ್ತ್ರಿ ಶಿಕ್ಷಣದ ಅಗತ್ಯತೆ, ಸಂಪ್ರದಾಯ, ಮೂಲಭೂತವಾದದಿಂದ ಹೆಣ್ಣಿನ ಮೇಲೆ ಆಗುತ್ತಿರುವ ಶೋಷಣೆಯನ್ನು ಹೇಳುವ ದುಂಡಿರಾಜ್ ಅವರ ಕವಿತೆಯನ್ನಾಧರಿಸಿದ 'ಬಲಿ' ರೂಪಕವನ್ನು ಶ್ರೀಪಾದ ಭಟ್ ಸಮರ್ಥವಾಗಿ ನಿರ್ದೆಶಿಸಿದರು. ಜಾಥಾದಲ್ಲಿ ಜನ ಮೆಚ್ಚುಗೆ ಪಡೆದ ರೂಪಕ ಇದು. ಕೆರೆಗಳ ಸ್ವಚ್ಛತೆ, ಸಂರಕ್ಷಣೆ, ನೀರಿನ ಸಂರಕ್ಷಣೆಯ ಬಗ್ಗೆ ವಿವರಿಸುವ ಪಂಚತಂತ್ರದ ಕತೆಯನ್ನಾಧರಿಸಿದ ಐ.ಕೆ.ಬೋಳುವಾರ ಅವರು ರಚಿಸಿದ 'ಕೆರೆ ಉಳಿಸಿ' ನಾಟಕವನ್ನು ಸಮರ್ಥವಾಗಿ ನಿರ್ದೇಶಿಸಿದವರು ಕಿರಣ್ ಭಟ್.

ಇನ್ನೊಂದು ನಾಟಕ 'ಮಕ್ಕಳಿವರೇ ನಮ್ಮ ಮಕ್ಕಳಿವರು' ಜನಸಂಖ್ಯೆ ಹೆಚ್ಚಳ ಅದಕ್ಕೆ ಪೂರಕವಾಗಿ ನಿರ್ಮಾಣವಾಗದ ಸವಲತ್ತು, ನದಿಗಳ ಅಸಮರ್ಪಕ ಬಳಕೆ, ಲಾಭದ ದೃಷ್ಟಿಯಿಂದ ಬಂಡವಾಳಶಾಹಿಗಳಿಂದ ಸಂಪತ್ತಿನ ಲೂಟಿ, ಭೂಮಿ, ಪರಿಸರ ಅಭಿವೃದ್ಧಿಯ ಅಂತಃ ಸಂಬಂಧಗಳ ಕುರಿತು ಈ ನಾಟಕ ವಿವರಿಸುತ್ತದೆ. ಇದನ್ನು ಶ್ರೀಪಾದ ಭಟ್ ಸ್ವತಃ ಬರೆದು ನಿರ್ದೆಶಿಸಿದ್ದಾರೆ.

ಹಾಗೆಯೇ ಅಮೇರಿಕಾದ ಸಾಮ್ರಾಜ್ಯಶಾಹಿ ನೀತಿಯನ್ನು, ಎಲ್‌ಪಿಜಿಯ ಅಪಾಯವನ್ನು ಹೇಳುವ 'ಜಣಜಣಜಣ ಕಾಂಚಾಣದಲ್ಲಿ', ವಿಜ್ಞಾನದ ಅಗತ್ಯತೆ ಹೇಳುವ 'ಜ್ಞಾನದೀಪ', 'ಭೂಮಿ ತಿರುಗುತ್ತಿದೆ. ಇನ್ನೂ ಅನೇಕ ಭಾವೈಕ್ಯತಾ ಹಾಡುಗಳು ಜಿಲ್ಲೆಯಾದ್ಯಂತ ಮೊಳಗಿದವು. ಪ್ರತಿನಿತ್ಯ 2 ತಾಸಿನ 4 ಪ್ರಯೋಗ ನೀಡಿದ ಕಲಾವಿದರಿಗೆ ಜನತೆಯ ಅದ್ಭುತ ಸ್ಪಂದನ ದಣಿವಾರಿಸುತ್ತಿತ್ತು. ಸುಮಾರು 12 ಸಾವಿರ ರೂಪಾಯಿಗಳ ಪುಸ್ತಕ ಮಾರಾಟ ಹೊಸ ಆಸೆ ಚಿಗುರಿಸಿತು.

ಯಶಸ್ವೀ ಜಾಥಾದ ಸಂಚಾಲಕತ್ವವನ್ನು ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಚಿಂತನ ಉತ್ತರಕನ್ನಡ ಜಿಲ್ಲಾ ಸಂಚಾಲಕ ವಿಠ್ಠಲ ಭಂಡಾರಿ ಮತ್ತು ಇಡೀ ಜಾಥಾವನ್ನು ನಿರ್ದೇಶಿಸಿದವರು ಚಿಂತನ ರಂಗ ಅಧ್ಯಯನ ಕೇಂದ್ರದ ಶ್ರೀಪಾದ ಭಟ್ ಹೊನ್ನಾವರ, ರಂಗವಿನ್ಯಾಸದ ನಿರ್ದೇಶಕ ಕಿರಣ ಭಟ್, ಜಾಥಾಕ್ಕೆ ಬೇಕಾದ ಎಲ್ಲಾ ಪರಿಕರವನ್ನು ಮುಖವಾಡವನ್ನು ಆಕರ್ಷಕ ಬೆಳ್ಳಕ್ಕಿ, ಆಮೆ ಇತ್ಯಾದಿ ಕ್ರಾಫ್ಟ್ ವರ್ಕ್ ಮಾಡಿಕೊಟ್ಟು ತಂಡದ ನಾಯಕತ್ವ ವಹಿಸಿದವರು. ದಾಮೋದರ ನಾಯ್ಕ, ಸಹಕರಿಸಿದವರು ಚಂದ್ರು ಉಡುಪಿ, ಮಾಸ್ತಿಗೌಡ, ಹಾಡು ಸಂಯೋಜನೆಗೆ ಸಹಕಾರ ಸತ್ಯನಾರಾಯಣ ನಾಯ್ಕ ಹಡಿನಬಾಳ.

ಜಿಲ್ಲೆಯ ಸಾಕ್ಷರತಾ ಆಂದೋಲನದ ನಂತರದಲ್ಲಿ ನಂತರದಲ್ಲಿ ಮೊದಲ ಬಾರಿಗೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬೀದಿನಾಟಕ ಯಶಸ್ವಿಗೊಳಿಸಿದ ಕಲಾವಿದರಲ್ಲಿ ಅನಂತ ನಾಯ್ಕ, ಗೋಪಾಲ ಹಳ್ಳೇರ, ಎನ್.ಕೆ.ಭಟ್ ಮಂಜುನಾಥ ಗೌಡ, ರಾಧಾ ಮಡಿವಾಳ ವಿನಾಯಕ.ಜಿ.ನಾಯ್ಕ, ಮಂಜುನಾಥ.ಟಿ.ಗೌಡ ಜಿ.ಟಿ.ಹಳ್ಳೇರ, ವಿ.ಜಿ.ಮಂಜುನಾಥ, ಭಾರತಿ ಗಾಂವ್ಕರ್ ಮುಂತಾದವರು. ಇದರ ಯಶಸ್ವಿಗೆ ಅನೇಕ ಸಂಘಸಂಸ್ಥೆಗಳು ಮುಂದಾಗಿದ್ದರು.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH